ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ


ಸಂಪುಟ 27 ಸಂಚಿಕೆ 02 ಜನವರಿ 09, 2005 ಬೆಲೆ ರೂ. 3.00



ಶತಮಾನದ ಮಹಾ ದುರಂತ

ಬಾಬಾ ಬುಡನ್‌ಗಿರಿ : ಸಂಘ ಪರಿವಾರದ ಮುಖ ಬಯಲು






2005 ಎದ್ದು ನಿಲ್ಲಲಿ ಜಗದ ಜನ



ಗಂಗಾವತಿ : ಭೂಮಾಲೀಕರಿಂದ ಕೂಲಿಕಾರನ ಕೊಲೆ


- ವಿಸ್ತರಿಸಿದ ಸಂಪುಟ - ನಿಲ್ಲದ ಗೊಣಗಾಟ
- ಎಕೆಜಿ ಯೊಂದಿಗೆ ಆತ್ಮೀಯ ನೆನಪುಗಳು
- ಜಾಗತೀಕರಣದ ಯುಗದಲ್ಲಿ ಸಮಾಜವಾದ - ಸಂವಾದ



ಕಾಮ್ರೇಡ್ ಎಕೆಜಿಯವರೊಂದಿಗೆ ನಿಕಟ ಒಡನಾಟವಿದ್ದ ಹಿರಿಯ ಸಂಗಾತಿ ಕಾಮ್ರೇಡ್ ವಿ.ಜೆ.ಕೆ.ನಾಯರ್ ರವರ ಆತ್ಮೀಯ ಅನುಭವಗಳ ನೆನಪು

ಕರ್ನಾಟಕದಲ್ಲಿ ಎಕೆಜಿ

ವಿ.ಜೆ.ಕೆ.ನಾಯರ್



ಕರ್ನಾಟಕದಲ್ಲಿ ಎ.ಕೆ.ಜಿ.ಯವರ ಕೆಲಸ ವಿವಿಧ ಘಟ್ಟಗಳದ್ದು, 1930 ರ ದಶಕದಲ್ಲಿ ರಾಷ್ಟ್ರೀಯ ಆಂದೋಲನ ಬೆಳೆದಂತೆ ರೈತ ಮತ್ತು ಕಾರ್ಮಿಕರ ಆಂದೋಲನವೂ ಬೆಳೆದಿತ್ತು. ಆ ದಿನಗಳಲ್ಲಿ ಮಲಬಾರ್ ಎ.ಕೆ.ಜಿ.ಯವರ ಪ್ರಾಥಮಿಕ ನೆಲವಾಗಿತ್ತು. ಆಗಿನ ಮಲಬಾರ್‌ಗೂ ಮಂಗಳೂರಿಗೂ ನಿಕಟ ಸಂಬಂಧವಿತ್ತು. ಸಹಜವಾಗಿಯೇ ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಎಕೆಜಿಯವರ ಚಟುವಟಿಕೆಗಳು ಮಂಗಳೂರಿನ ವರೆಗೂ ವಿಸ್ತರಿಸಿತ್ತು.

ಸ್ವಾತಂತ್ರ್ಯದ ಮೊದಲೇ ಎ.ಕೆ.ಜಿ. ದೇಶದ ವಿವಿಧ ಭಾಗಗಳಲ್ಲಿ ನೆಲೆಸಿದ್ದ ಕೇರಳೀಯರೊಂದಿಗೆ ಸಂಪರ್ಕ ಬೆಳೆಸಿಕೊಂಡಿದ್ದರು. ಮಲಬಾರಿನ ಹಲವು ಕಾರ್ಮಿಕರು ಮೈಸೂರು ಮತ್ತಿತರ ಪ್ರದೇಶಗಳಲ್ಲಿ ಜೀವನ ನಡೆಸುತ್ತಿದ್ದು ಎ.ಕೆ.ಜಿ. ಅವರೊಂದಿಗೆ ಆತ್ಮೀಯ ಸಂಪರ್ಕ ಇಟ್ಟುಕೊಂಡಿದ್ದರು.

ಸ್ವಾತಂತ್ರ್ಯಾನಂತರದ ಎ.ಕೆ.ಜಿ. ಸಿರ್ಸಿ ಮತ್ತು ಹಾವೇರಿ ಜಿಲ್ಲೆಗಳಿಗೆ ಭೇಟಿ ನೀಡಿ ಅಲ್ಲಿ ಕಿಸಾನ್ ಆಂದೋಲನಕ್ಕೆ ಸಹಾಯ ಮಾಡಿದರು. ಕರ್ನಾಟಕದಲ್ಲಿ ಎ.ಕೆ.ಜಿ.ಯವರ ಕೆಲಸದ ಬಗ್ಗೆ ನನ್ನ ವೈಯಕ್ತಿಕ ಅನುಭವ ಒಂದು ದಶಕದ್ದಷ್ಟೇ - 1967 ರಿಂದ 1977 ರವರೆಗೆ.

ಪ್ರೀತಿ ಮತ್ತು ಆದರದ ಮೂರ್ತರೂಪರಾಗಿದ್ದ ಅವರೊಂದಿಗಿನ ಒಂದು ದಶಕದ ಆತ್ಮೀಯ ಸಂಬಂಧ ನನಗೆ ವೈಯಕ್ತಿವಾಗಿ ಅತ್ಯಂತ ಸ್ಮರಣೀಯ ಅನುಭವ.

• • •

ಎ.ಕೆ.ಜಿ. 1967 ರಲ್ಲಿ ಬೆಂಗಳೂರಿನಲ್ಲಿ ಮಲೆಯಾಳಿಗಳು 'ದೇಶಾಭಿಮಾನಿ' ಪತ್ರಿಕೆಗೆ ಸಂಗ್ರಹಿಸಿದ್ದ ಹಣವನ್ನು ಪಡೆಯಲು ಬಂದಿದ್ದರು. ಸುಮಾರು ಒಂದು ತಿಂಗಳ ಕಾಲ ನಾವು ನಮ್ಮ-ನಮ್ಮ ಪ್ರದೇಶಗಳಲ್ಲಿ ಮನೆಯಿಂದ ಮನೆಗೆ, ಅಂಗಡಿಯಿಂದ ಅಂಗಡಿಗೆ ಹೋಗಿ ನಾಲ್ಕಾಣೆ, ಎಂಟಾಣೆಗಳನ್ನು ಸಂಗ್ರಹಿಸಿದ್ದೆವು. ಅವನ್ನು ಅವರು ಸಂತೋಷದಿಂದ ಸ್ವೀಕರಿಸಿದರು.

'ದೇಶಾಭಿಮಾನಿ'ಗೆ ಹಣ ಸಂಗ್ರಹಿಸುವ ಎ.ಕೆ.ಜಿ.ಯವರ ಕೆಲಸವನ್ನು ನಂತರ ಕಾಂ. ಅರಿಕ್ಕೋಡನ್ ರಾಘವನ್ ಮುಂದುವರೆಸಿದರು - 1971 ರಲ್ಲಿ ಅವರ ಅಮಾನುಷ ಹತ್ಯೆಯಾಗುವವರೆಗೆ.

ನನಗೆ ಎ.ಕೆ.ಜಿ.ಯೊಂದಿಗಿನ ಅತ್ಯಂತ ಸ್ಮರಣೀಯ ಕೆಲಸ 1971 ರದ್ದು. ಪಕ್ಷ ಮತ್ತು ರೈತ ಸಂಘ ಕೋಲಾರ ಜಿಲ್ಲೆಯಲ್ಲಿ ಭೂಗ್ರಹಣ ಚಳುವಳಿಯ ಯೋಜನೆ ರೂಪಿಸಿತ್ತು.


ಎ.ಕೆ.ಜಿ. ಪ್ರತಿಯೊಂದು ಹೋರಾಟದಲ್ಲಿ ಭಾಗವಹಿಸಿದರು. ಎ.ಕೆ.ಜಿ. ರೈಲಿನಿಂದ ಇಳಿಯುತ್ತಿದ್ದಂತೆ ಆಗ ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿದ್ದ ಕಾಂ. ಬಿ.ಎನ್.ಕುಟ್ಟಪ್ಪ ಕಾರಿನಲ್ಲಿ ಎಕೆಜಿಯವರ ಜತೆಗಿರುವಂತೆ ಹೇಳಿದರು. ಬಟ್ಟೆಯನ್ನು ಬದಲಿಸದೇ ನಾನು ಒಂದು ವಾರ ಕಾಲ ಪಕ್ಷ ವ್ಯವಸ್ಥೆ ಮಾಡಿದ್ದ ಕಾರಿನಲ್ಲಿ ಎಕೆಜಿಯವರ ಜೊತೆಗೆ ಹೋದೆ.

ಎಕೆಜಿ ಅಂದು ರೈಲಿನಿಂದ ಇಳಿಯುತ್ತಿದ್ದಾಗಲೇ ಸುಸ್ತಾಗಿದ್ದರು. ಒಂದು ವಾರದ ಹಿಂದೆಯಷ್ಟೇ ಅರಿಕ್ಕೋಡನ್‌ರನ್ನು ಅಗ್ನಿಗಾಹುತಿ ಮಾಡಲಾಗಿತ್ತು. ಮತ್ತು ಎಕೆಜಿಯವರಿಗೆ ಎರಡು ದಿನಗಳ ಹಿಂದೆ ತೀರಿಕೊಂಡ ಸಿ.ಹೆಚ್.ಕಣಾರನ್ ನಷ್ಟ ಯೋಚಿಸಲೂ ಕಷ್ಟದ ಸಂಗತಿಯಾಗಿತ್ತು.

ಇಂತಹ ವೈಯಕ್ತಿಕ ನೋವಿನ ನಡುವೆಯೂ ಎ.ಕೆ.ಜಿ. ಕೋಲಾರದಲ್ಲಿ ಒಂದು ವಾರ ಕಾಲ ಪ್ರಚಾರದಲ್ಲಿ ತೊಡಗಿದ್ದರು. ಎಕೆಜಿ ಹಲವು ಕಾಯಿಲೆಗಳ ಮಿಶ್ರಣವಾಗಿದ್ದರು ಎಂದು ಎಲ್ಲರಿಗೂ ಗೊತ್ತಿತ್ತು. ಅವರನ್ನು ಬಹಳ ಜಾಗರೂಕತೆಯಿಂದ ನೋಡಿಕೊಳ್ಳಬೇಕಾಗಿತ್ತು. ನನ್ನಿಂದ ಅವರಿಗೆ ಅವರ ಅಗತ್ಯಗಳನ್ನೆಲ್ಲಾ ಪೂರೈಸುವಲ್ಲಿ ನೀಡಲು ಸಾಧ್ಯವಾದ ವೈಯಕ್ತಿಕ ಗಮನ ಅವರಿಗೆ ಅಮೂಲ್ಯವಾಗಿತ್ತು.

ಮೊದಲ ಕಾರ್ಯಕ್ರಮ ಇದ್ದದ್ದು ಶಿಡ್ಲಘಟ್ಟ ತಾಲೂಕಿನಲ್ಲಿ. ವರದನಾಯಕನಹಳ್ಳಿಯಲ್ಲಿ ಒಂದು ಕಾರ್ಖಾನೆ ರೈತರ ರೇಷ್ಮೆ ಹುಳು ಸಾಕಾಣೆಗೆ ಬಹಳಷ್ಟು ಪರಿಸರ ಸಮಸ್ಯೆ ಉಂಟು ಮಾಡುತ್ತಿತ್ತು. ಎಕೆಜಿ ಕಾರ್ಖಾನೆಯ ಪಿಕೆಟಿಂಗ್‌ನಲ್ಲಿ ಭಾಗವಹಿಸಿದ್ದರು.

ಶಿಡ್ಲಘಟ್ಟದ ಕುಂದಲಗುರ್ಕಿಯಲ್ಲಿ ಒಂದು ಸ್ಮರಣೀಯ ಘಟನೆ ನಡೆಯಿತು. ಪೊಲೀಸರು ಸಾಲಾಗಿ ನಿಂತು ಕಬ್ಜಾ ಮಾಡಬೇಕಿದ್ದ ಜಮೀನಿನೊಳಗೆ ಪ್ರವೇಶಿಸದಂತೆ ಎಕೆಜಿ ಮತ್ತು ಸ್ವಯಂಸೇವಕರನ್ನು ತಡೆದರು. ಎಕೆಜಿ ಪೊಲೀಸರ ಸಾಲಿನ ಸಮೀಪವೇ ಕೂತುಬಿಟ್ಟರು. ನಮ್ಮನ್ನೆಲ್ಲಾ ಕೂತುಬಿಡಲು ಹೇಳಿದರು. ನಂತರ ಎಕೆಜಿ ಒಂದು ಲೋಟ ಹಾಲು ತರಲು ಹೇಳಿದರು. ನಾನು ಅದನ್ನು ಕಾಂ. ವೆಂಕಟೇಶ್ ಮನೆಯಿಂದ ತಂದುಕೊಟ್ಟೆ. ಆ ಹಾಲನ್ನು ಪೊಲೀಸ್ ಪಡೆಯ ನೇತೃತ್ವ ವಹಿಸಿದ್ದ ಕೊಡಗಿನವನಾದ ಸಬ್ ಇನ್ಸ್‌ಪೆಕ್ಟರ್‌ಗೆ ಕೊಡಲು ಹೇಳಿದರು. ಸಬ್ ಇನ್ಸ್‌ಪೆಕ್ಟರ್ ಮೊದಲು ಹಾಲನ್ನು ತೆಗೆದುಕೊಳ್ಳಲು ನಿರಾಕರಿಸಿದ. ಅದನ್ನು ಎಕೆಜಿ ಬಳಿ ವಾಪಾಸು ತರುತ್ತಿದ್ದಂತೆ ಅವರು ಅದನ್ನು ಮತ್ತೆ ಕೊಡುವಂತೆ, ಅದರಲ್ಲಿ ವಿಷ ಬೆರೆಸಿಲ್ಲ ಎಂದು ಹೇಳು ಎಂದರು. ನಾನು ಎಸ್.ಐ.ಗೆ ಎಕೆಜಿ ಹಾಲಿನಲ್ಲಿ ವಿಷ ಬೆರೆಸಿಲ್ಲ ಎಂದು ತಿಳಿಸುವಂತೆ ಹೇಳಿದರು ಎನ್ನುತ್ತಿದ್ದಂತೆ ಆ ಎಸ್.ಐ. ಎಕೆಜಿ ವಿಷ ಕೊಟ್ಟರೂ ನಾನದನ್ನು ನಿರಾಕರಿಸುವುದಿಲ್ಲ ಎಂದು ಹೇಳುತ್ತಾ ಹಾಲನ್ನು ತಗೊಂಡ. ಹಾಲನ್ನು ಆತ ಕುಡಿಯುತ್ತಿದ್ದಂತೆ ಎಕೆಜಿ ಸಾಲನ್ನು ದಾಟುತ್ತಾ ತನ್ನನ್ನು ಮತ್ತು ಗೆರೆ ದಾಟಿದ ಇತರ ಸ್ವಯಂ ಸೇವಕರನ್ನು ಬಂಧಿಸುವಂತೆ ಸಬ್ ಇನ್ಸ್‌ಪೆಕ್ಟರ್‌ಗೆ ಹೇಳಿದರು. ಎಕೆಜಿಗೆ ಬೇಕಿದ್ದದ್ದು ಕಬ್ಜಾದ ಒಂದು ದಾಖಲೆಯನ್ನು ಸೃಷ್ಟಿಸುವುದು. ಅದರಲ್ಲಿ ಅವರು ಯಶಸ್ವಿಯಾಗಿದ್ದರು.



ಕಾಂ. ಇಎಂಎಸ್, ಸುರ್ಜಿತ್ ಮತ್ತು ಎಕೆಜಿ

ಎಕೆಜಿ ಭೂಗ್ರಹಣ ಚಳುವಳಿಗೆ ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಚಿಂತಾಮಣಿ ಮತ್ತು ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ನೇತೃತ್ವ ನೀಡಿದರು.

ಎಕೆಜಿ ಗೆ ತನ್ನ ಸರಳ ವಿಧಾನಗಳಿಂದ ಇಡೀ ಜನಸಮೂಹದಲ್ಲಿ ಸ್ಫೂರ್ತಿ ತುಂಬಲು ಸಾಧ್ಯವಾಗಿತ್ತು. ಎರಡು ತರದ ಜನಗಳಿರುತ್ತಾರೆ ಎಂದವರು ವಿವರಿಸುತ್ತಿದ್ದರು. ಒಂದು ಗುಂಪು ಕಾಂಗ್ರೆಸ್ ಆಳ್ವಿಕೆಯಿಂದ ಪ್ರಯೋಜನ ಗಿಟ್ಟಿಸುವಂತದ್ದು, ಇನ್ನೊಂದು ಅದರಿಂದ ಸುಲಿಗೆಗೆ ಒಳಗಾಗುವಂತದ್ದು. ಕಡಲೆಕಾಯಿ ಬೆಳೆಗಾರನ್ನು ಸುಲಿಯಲಾಗುತ್ತದೆ, ಅದು ಎಣ್ಣೆ ಮಾಲಿಕನಿಗೆ ಪ್ರಯೋಜನವಾಗುತ್ತದೆ ಎಂದವರು ಹೇಳುತ್ತಿದ್ದರು. ಅದೇ ರೀತಿ ಸರ್ಕಾರ ಕಬ್ಬು ಬೆಳೆಗಾರರನ್ನು ಸುಲಿಯುತ್ತದೆ, ಸಕ್ಕರೆ ಮಿಲ್ ಮಾಲಕನಿಗೆ ನೆರವಾಗುತ್ತದೆ ಎನ್ನುತ್ತಿದ್ದರು.

ಅವರ ಭಾಷಣದಲ್ಲಿ ಬಹಳಷ್ಟು ಹಾಸ್ಯ ವಿರುತ್ತಿತ್ತು. ಅದರಿಂದ ಜನ ಅವರೊಂದಿಗೆ ಆತ್ಮೀಯತೆ ಅನುಭವಿಸುತ್ತಿದ್ದರು. ಆಂಧ್ರ ಗಡಿಯಲ್ಲಿರುವ ಒಂದು ದೂರದ ಹಳ್ಳಿಯಲ್ಲಿ ಗಣನಾಯಕಲು ಎಂಬ ಹೆಸರಿನ ಸಂಗಾತಿ ಬಂದು ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾಂ. ಗಣನಾಯಕಲು ಕಡಲೂರು ಜೈಲಿನಲ್ಲಿ ಎಕೆಜಿಯವರ ಜೊತೆಗಿದ್ದರು. ಆತನಿಂದ ಸ್ವಲ್ಪ ತೆಲುಗು ಕಲಿತಿದ್ದರು. ಗಣನಾಯಕಲು ರವರು ಎಕೆಜಿಯವರನ್ನು ಪರಿಚಯ ಮಾಡಿಸುತ್ತಾ 'ಮುಸಲವಾಡು'(ಮುದುಕರು) ಎಂದರು; ಎಕೆಜಿ ತೆಲುಗಿನಲ್ಲಿ 'ಮೇಮು ಮುಸಲವಾಡು ಕಥು', ನನ್ನ ತಲೆಗೂದಲು ನೋಡಿ, ಅದು ಕಪ್ಪಾಗಿದೆ. ಗಣನಾಯಕಲುರವರದ್ದು ಬಿಳಿಗೂದಲು. ಗಣನಾಯಕಲು ನನ್ನನ್ನು ಮುದುಕ ಎಂದರೆ ನನ್ನ ಹೆಂಡತಿ ಅವರಿಗೆ ಹೊಡೆದು ಬಿಡುತ್ತಾರೆ. ಜನ ಹೊಟ್ಟೆ ತುಂಬಾ ನಕ್ಕರು. ಆಗಲೆ ಎಕೆಜಿ ಅವರನ್ನು ತಮ್ಮ ಮಾತುಗಳಿಂದ ಹೋರಾಟಕ್ಕೆ, ಭೂಗ್ರಹಣಕ್ಕೆ ಎಬ್ಬಿಸಿ ಬಿಟ್ಟರು. ಜನ ಸಂತೋಷದಿಂದ ಬೊಬ್ಬೆ ಹಾಕಿದರು - 'ಯೆರ್ರಾ ಜೆಂಡಾನಿಕೆ ಜೈ','ಅರಣ್ಯಭೂಮಿ ಪಂಚುಪಟಲಿ!'

ಒಂದು ರಾತ್ರಿ ಚಿಂತಾಮಣಿಯಲ್ಲಿದ್ದಾಗ ಎಕೆಜಿಯವರಿಗೆ ಮೆಂತ್ಯದ ಗಂಜಿ ಕೊಟ್ಟೆವು. ಅದು ಅವರಿಗೆ ರುಚಿಸಿರಲಿಲ್ಲ. ಎಲ್ಲಾ ಸಂಗಾತಿಗಳಿಗೆ ಅದು ಸಿಹಿ ಮತ್ತು ಮಾಂಸದ ಊಟವಿತ್ತು. ಒಂದು ಗಂಟೆಯಾದರೂ ಎಕೆಜಿ ಗಂಜಿ ಕುಡಿಯುವುದು ಮುಗಿದಿರಲಿಲ್ಲ. ನಿಮಗೆಲ್ಲ ಊಟಕ್ಕೆ ಏನಿತ್ತು ಎಂದು ನನ್ನನ್ನು ಕೇಳಿದರು. ಪಾಯಸ ಕೊಟ್ಟಿದ್ದರು ಎಂದು ಹೇಳಲೇಬೇಕಾಯಿತು. ಎಕೆಜಿಗೆ ಕೊಡದೆ ನೀವು ಹೇಗೆ ಪಾಯಸ ತಿನ್ನಲು ಸಾಧ್ಯ ಎಂದು ಹೇಳಿದರು. ಎಕೆಜಿ ಊಟದ ವಿಷಯದಲ್ಲಿ ನಮ್ಮೊಂದಿಗೆ ಉಪಾಯ ಹೂಡುತ್ತಿದ್ದರು. ಯಾಕೆಂದರೆ ಎಳೆ ನೀರು, ಕೋಕಾಕೋಲಾ ಅವರು ಕುಡಿಯುವಂತಿರಲಿಲ್ಲ ಎಂಬುದು ನಮಗೆ ಗೊತ್ತಿರಲಿಲ್ಲ. ಅವೆರೆಡೂ ಅವರಿಗೆ ಬಹಳ ಇಷ್ಟವಾಗಿದ್ದವು.

• • •

ಇನ್ನೊಂದು ಸಂದರ್ಭದಲ್ಲಿ ಎಕೆಜಿ ಚೇಂಬರ್ ಆಫ್ ಕಾಮರ್ಸ್ ಕಟ್ಟಡದಲ್ಲಿ ರಿಸರ್ವ್ ಬ್ಯಾಂಕ್ ನೌಕರರ ಒಂದು ಸಭೆಯನ್ನು ಉದ್ಘಾಟಿಸಿದರು. ಕಾಂ. ಕೆ.ಟಿ.ಸುಳೆ ಅಧ್ಯಕ್ಷರಾಗಿದ್ದರು. ಸಂಗಾತಿಗಳಾದ ಎಂ.ಎಸ್.ಕೃಷ್ಣನ್ ಮತ್ತು ಸೂರ್ಯನಾರಾಯಣ ರಾವ್ ಮಾತನಾಡಿದರು. ಸೂರಿಯವರು ಮಾತಾನಾಡುತ್ತಿದ್ದಂತೆ ಹಲವು ಸಂಗಾತಿಗಳು ಭಾರಿ ಚಪ್ಪಾಳೆ ತಟ್ಟಿದರು. ನಂತರ ಎಂ.ಎಸ್.ಕೃಷ್ಣನ್ ಮಾತನಾಡುವಾಗ ಆ ಸಂಗಾತಿಗಳು ಪ್ರತಿಭಟಿಸಿ ಎದ್ದುಹೋದರು. ಎಕೆಜಿಗೆ ರೇಗಿತು. ಮರುದಿನ ಜಿಲ್ಲಾ ಸಮಿತಿಯ ಸಭೆ ಹಾಗೂ ಕಾರ್ಯಕರ್ತರ ಸಭೆ ಕರೆಯುವಂತೆ ಬಿ.ಎನ್.ಕುಟ್ಟಪ್ಪರಿಗೆ ಹೇಳಿದರು.

ಜಿಲ್ಲಾ ಸಮಿತಿಯಲ್ಲಿ ಚರ್ಚಿಸಿ ಎದ್ದು ಹೋದವರನ್ನು ಟೀಕಿಸಿದ ಎಕೆಜಿ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಎಡ ಐಕ್ಯತೆಯ ಅಗತ್ಯದ ಬಗ್ಗೆ ದೀರ್ಘವಾಗಿ ಮಾತನಾಡಿದರು. ಆದರೆ ನೀತಿಬದ್ಧ ನಿಲುವಿನ ಮಹತ್ವವನ್ನು ಒತ್ತಿ ಹೇಳಿದರು. ಪ್ರತಿಭಟಿಸಿ ಎದ್ದು ಹೋದ ಸಂಗಾತಿಗಳಿಗೆ ಮೆಚ್ಚುಗೆ ಸೂಚಿಸಬೇಕೆಂದು ಬಯಸುತ್ತೇನೆ. ಅಂತವರು ಎದ್ದು ನಿಲ್ಲಿ ಎಂದರು. ಹಿಂದಿನ ಸಂಜೆ ಸಭೆಯಿಂದ ಎದ್ದು ಹೋದವರು ಹೆಮ್ಮೆಯಿಂದ ನಿಂತರು. ಇದ್ದಕ್ಕಿದ್ದಂತೆ ಎಕೆಜಿಯವರ ಮುಖಚರ್ಯೆ ಬದಲಾಯಿತು - 'ಛಾ' ಎಂದರು. ಅವರಲ್ಲಿ ಪ್ರತಿಯೊಬ್ಬರನ್ನು ಪಕ್ಷದಿಂದ ಹೊರಹಾಕುವಂತೆ ಶಿಫಾರಸು ಮಾಡುತ್ತಿದ್ದೆ, ಆದರೆ ಬೆಂಗಳೂರಿನಲ್ಲಿ ಪಕ್ಷ ದುರ್ಬಲವಾಗಿರುವುದರಿಂದ ಹಾಗೆ ಮಾಡುತ್ತಿಲ್ಲ ಎಂದರು. ಕಾಂ. ಕೆ.ಡಿ.ಸುಳೆಯವರು ಅಧ್ಯಕ್ಷತೆ ವಹಿಸಿದ್ದಾಗ, ಸ್ವತಃ ಎಕೆಜಿ ಉದ್ಘಾಟನೆ ನಡೆಸಿದಾಗ ಅವರು ಹೇಗೆ ಎದ್ದು ಹೋಗಲು ಸಾಧ್ಯ ಎಂದು ಅವರು ಪ್ರಶ್ನಿಸಿದರು.

• • •

ತುರ್ತುಪರಿಸ್ಥಿತಿಯ ಅವಧಿ ಬಹಳ ಬೇಗನೆ ಬಂತು. ಕಾಂ. ಎಕೆಜಿ ಬಂದರು, ನಮ್ಮನ್ನೆಲ್ಲಾ ಸೆಳೆದರು. ನಮ್ಮ ಮನೆಯಲ್ಲಿ ಸುಮಾರು ಒಂದು ವಾರ ಇದ್ದರು. ಹಲವಾರು ಸಭೆಗಳನ್ನು ನಡೆಸಿದರು. ಬಿಇಎಲ್, ಹೆಚ್‌ಎಎಲ್,ಐಟಿಐ ಮತ್ತಿತರ ಹಲವು ಪ್ರದೇಶಗಳಿಗೆ ಹೋದರು. ದೇವರಾಜ ಅರಸು ಎಷ್ಟು ಒಳ್ಳೆಯ ವ್ಯಕ್ತಿಯೆಂದರೆ ನಾವು ಅವರನ್ನು ಟೀಕಿಸುತ್ತಿಲ್ಲ ಮತ್ತು ಆತ ಎಷ್ಟು ಒಳ್ಳೆಯವನೆಂದರೆ ನಮ್ಮ ಮೇಲೆ ಧಾಳಿ ಮಾಡುತ್ತಿಲ್ಲ ಎಂಬುದು ಅವರ ಮಾತಿನ ಧಾಟಿಯಾಗಿತ್ತು.

ಎಕೆಜಿ ಹಿಂದಿರುಗಿದ ಕೆಲವೇ ವಾರಗಳಲ್ಲಿ ನನ್ನನ್ನು ಬಂಧಿಸಿ ಜೈಲಿಗೆ ಕಳಿಸಲಾಯಿತು. ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಎಕೆಜಿ ಸಂಸತ್ತಿನಲ್ಲಿ ಮಾಡಿದ ಭಾಷಣವನ್ನು ಮುದ್ರಿಸಿ, ಹಂಚಿದ್ದಕ್ಕಾಗಿ. ನನ್ನ ಬಂಧನದ ಆಘಾತವನ್ನು ಮೀರಿ ನಿಲ್ಲುವಂತೆ ನನ್ನ ಕುಟುಂಬಕ್ಕೆ ನೆರವಾಗಲು ಎಕೆಜಿ ಎರಡು-ಮೂರು ಬಾರಿ ನಮ್ಮ ಮನೆಗೆ ಬಂದರು. ತನ್ನ ಭಾಷಣದ ಪ್ರಮಾಣಿತ ಪ್ರತಿಯನ್ನು ಪಡೆದು ನನಗೆ ಕೊಟ್ಟರು - ಅದನ್ನು ಪ್ರಕಟಿಸಲು ಸಂಸದೀಯ ವಿಶೇಷಾಧಿಕಾರ ಇದೆ ಎಂದು ನನ್ನ ರಕ್ಷಣೆಗೆ ನ್ಯಾಯಾಲಯದಲ್ಲಿ ಸಲ್ಲಿಸಿದರು. ಒಂದು ವರ್ಷದ ಜೈಲುವಾಸದ ನಂತರ ನನ್ನನ್ನು ಆ ಆಧಾರದ ಮೇಲೆಯೇ ಬಿಡುಗಡೆ ಮಾಡಲಾಯಿತು.

ಅವರು ನನ್ನ ಕುಟುಂಬದ ಪ್ರತಿ ಸದಸ್ಯರೊಂದಿಗೂ ಹೊಂದಿದ್ದ ಆತ್ಮೀಯತೆಯನ್ನು ಅವರು ಈಗಲೂ ನೆನಪಿಸಿಕೊಳ್ಳುತ್ತಾರೆ.

ತುರ್ತುಪರಿಸ್ಥಿತಿ ಅವಧಿಯ ಅಂತ್ಯದ ವೇಳೆಗೆ ಎಕೆಜಿ ಗಂಭೀರ ಅನಾರೋಗ್ಯವುಂಟಾಯಿತು.

22 ಮಾರ್ಚ್ 1977 ರಂದು ಮಧ್ಯರಾತ್ರಿಯ ವೇಳೆಗೆ ಇಂದಿರಾಗಾಂಧಿ ಚುನಾವಣೆಯಲ್ಲಿ ಸೋತರು ಎಂದು ರೇಡಿಯೋ ಪ್ರಕಟಿಸಿತು. ನಾನು ನನ್ನ ಮನೆಯ ಮುಂದೆ ಪಟಾಕಿ ಹಾರಿಸಿದೆ. ಮುಂಜಾನೆ 3 ಗಂಟೆ ಹೊತ್ತಿಗೆ ಬರಸಿಡಿಲಿನಂತೆ ಅದೇ ರೇಡಿಯೋ ಎಕೆಜಿಯ ಸಾವಿನ ಸುದ್ದಿ ಪ್ರಕಟಿಸಿತು. ಇಡೀ ಉತ್ತರ ಭಾರತದಲ್ಲಿ ಕಾಂಗ್ರೆಸ್ಸನ್ನು ಅಳಿಸಿ ಹಾಕಿದ ಸಂತೋಷವೆಲ್ಲಾ ಮಾಯವಾಯಿತು. ಪ್ರೀತಿಯ ಮೂರ್ತಿಯನ್ನೇ ಕಳಕೊಂಡದ್ದನ್ನು ಸಹಿಸಲಾಗದೆ ನೆಲದಲ್ಲಿ ಕೂತುಬಿಟ್ಟೆ.

ಎಕೆಜಿ ದೀರ್ಘಕಾಲ ಸಂಸತ್ತಿನಲ್ಲಿ ವಿರೋಧ ಪಕ್ಷದ ಮುಖಂಡರಾಗಿದ್ದರು. ಆ ಸಂಸತ್ತಿನ ಜೀವನಾವಧಿ ಮುಗಿದ ದಿನವೇ ಅವರ ಜೀವನವೂ ಅಂತ್ಯಗೊಂಡಿತು.

ಅವರು ಸದಾ ಜನತೆಯ ನೇತಾರರಾಗಿದ್ದರು, ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾಗಿದ್ದರು. ಕೇವಲ ಒಂದೇ ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದರು. ಅದೆಂದರೆ ಬೆಂಗಳೂರಿನಲ್ಲಿ ಕಾಫಿಬೋರ್ಡ್ ಲೇಬರ್ ಯೂನಿಯನ್. ಅವರು ಕಾಫಿ ಬೋರ್ಡಿಗೆ ಬಂದು ಅವರೊಂದಿಗೆ ಇರುತ್ತಿದ್ದರು ಹಾಗೂ ನಾವು ಕಾರ್ಮಿಕ ಮುಖಂಡರನ್ನೆಲ್ಲಾ ಕರೆಸಿಕೊಳ್ಳುತ್ತಿದ್ದರು ಹಾಗೂ ಸಿಐಟಿಯು ವನ್ನು ವಶಪಡಿಸಿಕೊಳ್ಳುವುದಾಗಿ ನಮ್ಮನ್ನು ಎದುರಿಸುತ್ತಿದ್ದರು.

ಪ್ರತಿಯೊಬ್ಬ ಕಾರ್ಯಕರ್ತನ ಬಗ್ಗೆಯೂ ಅವರು ಗಮನ ನೀಡುತ್ತಿದ್ದರು. ನಾವು ಒಬ್ಬ ಕಾರ್ಯಕರ್ತನನ್ನು ಪೂರ್ಣಾವಧಿ ಕಾರ್ಯಕರ್ತನಾಗಿ ಮಾಡಬೇಕು ಎಂದು ಅವರು ಬಯಸಿದ್ದರು. ಕಿಟ್ಟಿ ಎಂದಾತನ ಹೆಸರು, ಚಿಂತಾಮಣಿಯವರು. ಎಕೆಜಿ ಆತನಿಗೊಂದು ಶರ್ಟು ಕೊಟ್ಟಿದ್ದರು. ಅದು ಬಹಳ ದೊಡ್ಡದಾಗಿತ್ತು. ಕಿಟ್ಟಿ ಈ ಶರ್ಟನ್ನು ಶ್ರದ್ಧಾಂಜಲಿ ಸಭೆಗೆ ತಂದು ಅಳಲಾರಂಭಿಸಿದ. ಎಕೆಜಿ ಬಳಸುತ್ತಿದ್ದ ಆತ್ಮೀಯತೆ ಅಂತದ್ದು. ಅದನ್ನೆಲ್ಲಾ ಅವರು ಪ್ರತಿಯೊಂದು ಕಡೆ ಜನತಾ ಹೋರಾಟವನ್ನು ಬೆಳೆಸಲು ಬಳಸಿದರು. ○

ದತ್ತಜಯಂತಿ : ಸಂಘ ಪರಿವಾರಕ್ಕೆ ಆಯಿತು ಮುಖಭಂಗ

ದತ್ತಜಯಂತಿ ಮುಗಿದಿದೆ, ಬಾಬಾಬುಡನ್ ಗಿರಿಯಲ್ಲಿ ಮತ್ತು ಸುತ್ತಲೂ ಜಮಾಯಿಸಿದ್ದ ಪೋಲಿಸ್ ಪಡೆಗಳು ನಿಧಾನವಾಗಿ ಕಳಗಿಳಿದು ಬಂದು ಊರಿಗೆ ಮರಳುತ್ತಿವೆ. ತಾರಕಕ್ಕೇರಿದ್ದ ಆತಂಕ, ದುಗುಡ ದೂರಾಗುತ್ತಿವೆ. ದ್ವೇಷದ ವಾತಾವರಣ ನಿಧಾನವಾಗಿ ತಿಳಿಯಾಗುತ್ತಾ ನಿತ್ಯದ ಬದುಕಿಗೆ ಜನ ಹೊಂದಿಕೊಳ್ಳುತ್ತಿದ್ದಾರೆ. ಅಬ್ಬಾ ದತ್ತ ಜಯಂತಿ ಮುಗಿಯಿತಲ್ಲ ಎಂಬ ಜನಸಾಮಾನ್ಯರ ನಿಟ್ಟುಸಿರಿನಲ್ಲಿ ಕಾಣುವುದು ಭಕ್ತಿಗಿಂತ ಭಯವೇ ಜಾಸ್ತಿ, ಹಲವಾರು ತಲೆಮಾರುಗಳಿಂದ ಅಲ್ಲೇ ನೆಲಸಿ -ಬಾಳಿ ಬದುಕುವ ಜನ ಇದೆಲ್ಲಾ ಏನೇನೋ ಕರೆಯದೇ ಬಂತಲ್ಲಾ ಹೊಸ ಕುತ್ತು.... ಹಿಂದೆ ಹೀಗಿರಲಿಲ್ಲೆಂದು ಉದ್ಗರಿಸುತ್ತಾರೆ. ಹೌದು ಹಿಂದೆ ಹೀಗಿರಲಿಲ್ಲ ಈ ಪೋಲಿಸ್ ಲಾರಿ, ಬೂಟುಗಳ ಸಪ್ಪಳ ಬಂದೂಕು, ಬೆಳಗಿನ ಲಾಠಿ-ಠೀಕಿನ ಪರೇಡ್,..

ಊರೇ ಬಂದ್' ಆದಂತೆ, ಯಾವ ಕ್ಷಣದಲ್ಲಿ ಗಲಭೆ ಭುಗಿಲೇಳುತ್ತವೆ ಎಂಬ ದಿಗಿಲು ಅಂಗೈಯಲ್ಲಿ ಜೀವ ಹಿಡಿದು ನೆಮ್ಮದಿಯ ನಾಳೆಗಾಗಿ ಬೆಳಕಿನ ಕಿರಣ ಅರಸಿ ಕತ್ತಲೆಯ ಮನೆ ಸೇರಿದವರು!. ಇಲ್ಲಿ ಹಿಂದೆ ಹೀಗಿರಲಿಲ್ಲ!

ಹೀಗ್ಯಾಕಾಯಿತು, ತಿಳಿಯದ ವಿಚಾರವೇನಲ್ಲ. ನಿಗದಿಯಾದಂತೆ ಸರ್ಕಾರ ದತ್ತಜಯಂತಿ ಆಚರಿಸಿತು, ಡಿಸೆಂಬರ್ 26ಕ್ಕೆ ಈ ಆಚರಣೆ ಮುಗಿಯಿತು, ಎಲ್ಲವೂ ಮುಗಿಯಿತು .ಎಂದು ಎಲ್ಲರೂ ಅಂದುಕೊಳ್ಳುತ್ತಿರುವಾಗ ಆರ್.ಎಸ್.ಎಸ್ ನ ಪಡೆ ಈಗ ಹೇಳುತ್ತಿದೆ 'ಜನವರಿ 9 ರ ವರೆಗೂ ದತ್ತಜಯಂತಿ ಇದೆ' ಎಂದು...ಇನ್ನು ಧರ್ಮ ಮತ್ತು ಸಂಸ್ಕೃತಿ- ನೀತಿ ನಿಯಮಗಳ ಗುತ್ತಿಗೆ ಹಿಡಿದ ಯಜಮಾನರು ಹೇಳಿದ ಮೇಲೆ...ನಡೆಯಲೇಬೇಕಲ್ಲ! 'ಹಾಗೆ ನಡೆಯಲು ಬಿಡೋಲ್ಲ ಎಂದಿತು' ಸರ್ಕಾರ. ಆದ್ದರಿಂದಲೇ 'ನೆಲಕಚ್ಚಿದರೂ ಮೀಸೆ ಮಣ್ಣಾಗಲಿಲ್ಲ...ಅದು ಮಣ್ಣು ಅಲ್ಲೋ ಅಣ್ಣಾ ಮೀಸೆಗೆ ಹಚ್ಚಿದ ಬಣ್ಣ','....ಮಾರ್ಗಶಿರ ಹುಣ್ಣಿಮೆಯಂದೇ ದತ್ತಜಯಂತಿ ಇದು ಸಾವಿರಾರು ವರುಷಗಳ ಆಚರಣೆ' ಎಂದೆಲ್ಲ ಹೇಳಿದ 'ಮಂದಿ' ಈಗ ಜನವರಿ 9 ರ ವರೆಗೂ ಅದನ್ನು ಎಳೆಯ ಬಯುಸಿದ್ದಾರೆ. ಇದು ಚೆಡ್ಡಿ ಪಡೆಗಳು ಅನುಭವಿಸುತ್ತಿರುವ ಹತಾಶೆ!

ಈ ಸಲ ಈ ಮೈತ್ರಿಕೂಟದ ಸರ್ಕಾರಕ್ಕೆ ವಿಶೇಷವಾಗಿ ಮುಖ್ಯಮಂತ್ರಿ ಧರಂಸಿಂಗ್ ಹಾಗೂ

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಚಿಕ್ಕಮಗಳೂರು ಜಿಲ್ಲಾ ಆಡಳಿತ - ಜಿಲ್ಲಾಧಿಕಾರಿ ಪೋಲೀಸ್ ವರಿಷ್ಠಾಧಿಕಾರಿಗಳು ವಹಿಸದ ಕ್ರಮಕ್ಕೆ ಅಭಿನಂದನೆ ಹೇಳಲೇಬೇಕು. ಈ ಬಾರಿಯದು ದೃಢ ನಿರ್ಧಾರ, ಹಿಂದೆ ಹಲವು ವರುಷಗಳಲ್ಲಿ ಚೆಡ್ಡಿ ವೀರರ ಚಿತಾವಣೆಗೆ ಸರ್ಕಾರವೇ ಮಣೆ ಹಾಕಿದ, ನಡೆಸದ ವಿಕೃತಿಗಳಿಗೆ ತಡೆ ಹಾಕಿದ ಸಂದರ್ಭ. ಕಾನೂನು ಕೈಬಿಟ್ಟು ಧಾರ್ಮಿಕತೆ ಸಂಸ್ಕೃತಿಯ ವಿಧ್ವಂಸಕರೆಲ್ಲರೊಂದಿಗೆ ಕೈಜೋಡಿಸಿದ್ದಕ್ಕೆ ವಿದಾಯ ಹೇಳಿದ ಸಂದರ್ಭ...ಹೀಗಾಗಿ ಈ ಬಾರಿ ಹಿಂದಿನಂತೆ ಅಲ್ಲ ಅದು ಬೇರೆಯೇ.. ಎಂಬ ಇಂಗಿತ, ಸಂಕೇತ ತೋರಿಸಲಾರಂಬಿಸಿತು ಸರ್ಕಾರ. ದತ್ತನ ಹೆಸರಲ್ಲಿ ದೊಂಬಿ ಎಬ್ಬಿಸ ಬಯುಸಿದವರಿಗೆ ಅವರು ಸೀಮೆಎಣ್ಣೆ ಕ್ಯಾನ್ ಹಿಡಿದು ಸುರಿದುಕೊಂಡು ಸತ್ತೇ ಹೋಗುತ್ತೇವೆ ಎಂದು ಬ್ಲಾಕ್ ಮೇಲ್ ಮಾಡಿದರೂ ಬೆತ್ತದ ರುಚಿ ತೋರಿಸಿ ಕಾನೂನು ಏನೆಂದು ಸಣ್ಣ ಪಾಠ ಹೇಳಿದ ಸಂದರ್ಭ. ಹೀಗಾಗಿ ಸರ್ಕಾರ ಈ ಬಾರಿ ನ್ಯಾಯಾಲಯದ ನಿರ್ದೇಶನದಂತೆ 1975 ರ ಹಿಂದಿನ ಆಚರಣೆಗಳಿಗೆ ಬದ್ಧವಾಯಿತು. ಯಜ್ಞ, ಯಾಗ, ಹೋಮ - ಮೂರ್ತಿಪೂಜೆ, ಧರ್ಮಸಂಸತ್.... ಎಲ್ಲಕ್ಕೂ ಕಳಶಪ್ರಾಯವಾಗಿ ದ್ವೇಷ ಹೊತ್ತಿಸುತ್ತಿದ್ದ ಶೋಭಾಯಾತ್ರೆ ನಿರ್ಬಂಧಿಸಲ್ಪಟ್ಟಿತು. ಆಟಾಟೋಪ ಆಡಿದವರಿಗೆ, ಕಾನೂನು ಮುರಿದವರಿಗೆ ಲಾಠಿ ಏಟುಗಳ ಊಟವೂ ಆಯಿತು. ಆದ್ದರಿಂದಲೇ ಯಡಿಯೂರಪ್ಪ, ಅನಂತಕುಮಾರ ಬಜರಂಗದಳದವರು ಕೂಗಾಡಿದ್ದು. ನೀವು ಶೋಭಯಾತ್ರೆ ನಿರ್ಭಂದಿಸಿದ್ದೀರಿ, ನಾವೂ ದತ್ತಜಯಂತಿ ಬಹಿಷ್ಕರಿಸುತ್ತೇವೆ. ನೋಡಿ ! ಇಲ್ಲಿ ಸಿಕ್ಕಿಬಿದ್ದರು ಕರಸೇವಕರು!

ಅವರಿಗೆ ಮುಖ್ಯವಾಗಿದ್ದದ್ದು ದತ್ತಜಯಂತಿ ಅಲ್ಲ. ಅತ್ಯಂತ ಅನಾಗರೀಕ-ಅಸಹ್ಯವಾದ, ಮಹಿಳೆಯರನ್ನು, ಧಾರ್ಮಿಕ ಅಲ್ಪಸಂಖ್ಯಾತರನ್ನು ಹೀಯಾಳಿಸುವ, ದ್ವೇಷದ ಕಿಚ್ಚು ಹಚ್ಚುವ, ವಿಭಜನೆಯ ಉದ್ದೇಶದ 'ಶೋಭಾಯಾತ್ರೆ' ನೆಪ ಮಾತ್ರ.... ತಮ್ಮ ರಾಜಕೀಯ ದುರುದ್ದೇಶವನ್ನು ಹುತ್ತನಿಂದ ಹೊರಬಿಟ್ಟ ಹೂವಿನ ಹಿಂದಿರುವ ಮಿಡಿನಾಗರ ಜನರೆದುರು ಹೊರಬಿತ್ತ ಆದ್ದರಿಂದಲೇ ಅನಂತಕುಮಾರ್ ಹತಾಶನಾಗಿ ಕೂಗಿದ್ದು 'ಇದನ್ನು ಇನ್ನೊಂದು ಅಯೋಧ್ಯ ಮಾಡುತ್ತೇವೆ', 'ಇವನ್ನು ಲೋಕಲ್ ದೇಶಭಕ್ತ ಹೇಳಿದ 'ಸಿಪಿಎಂ ನವರ ಮಾತುಕೇಳಿದ ಈ ಸರ್ಕಾರ ಹೀಗೆಲ್ಲಾ ಮಾಡುತ್ತದೆ', ಕಮ್ಯುನಿಷ್ಟರ ಮೇಲೆ ಪ್ರಹಾರವಾಯಿತು... ಜನ ಇವರ ಮಾತು ಕೇಳಲಿಲ್ಲ, ಸಾವಿರಾರು ಜನ ಬೀದಿಗಿಳಿಯಲಿಲ್ಲ, ರಾಜ್ಯದ್ಯಾಂತ ಚಳುವಳಿ ಭುಗಿಲೇಳಲಿಲ್ಲ, ಏನಾದರೂ ವರಸೆ ಮಾಡುವ ಹವಣಿಕೆ, ಸಂಘಪರಿವಾರ ಸುಮ್ಮನೆ ಕೂಡಲ್ಲ, ಹೊಸ ದುಷ್ಟ ಯೋಜನೆ ಮಾಡುತ್ತದೆ ಎಂಬುದನ್ನು ಮರೆಯಬಾರದು.

ಬಾಬಾಬುಡನ್ ಗಿರಿಯಲ್ಲಿ ಸಂಘಪರಿವಾರದ ಹುನ್ನಾರವನ್ನು ವಿರೋಧಿಸಿ ಸೌಹಾರ್ದತೆಗಾಗಿ ನಡೆದ ಕಾರ್ಯಕ್ರಮಗಳು ಗಮನಾರ್ಹ ಯಶಸ್ಸು ಕಂಡವು. ಗುಲ್ಬರ್ಗಾದಲ್ಲಿ ವಿಚಾರಸಂಕಿರಣ ನಡೆದು, ಮಾನವ ಸರಪಳಿಯೂ ಆಯಿತು, ಬೆಂಗಳೂರಿನಲ್ಲಿ ಬೈಕ್ ರ‍್ಯಾಲಿ-ಬಹಿರಂಗ ಸಭೆ, ಉಡುಪಿ, ಬಳ್ಳಾರಿ, ದಕ್ಷಿಣ ಕನ್ನಡ, ಮಂಡ್ಯ, ತುಮಕೂರು, ಉತ್ತರ ಕನ್ನಡ, ಹೀಗೆ ಹಲವಾರುಕಡೆ ವಿದ್ಯಾರ್ಥಿ-ಯುವಜನ ಸಂಘಟನೆಗಳು ....ಹಾಗೆಯೇ ರಾಜ್ಯದ ಅನೇಕ ಕಡೆ ಮಂಗಳೂರು, ಶಿವಮೊಗ್ಗ ಮುಂತಾದೆಡೆ ಬುದ್ದಿಜೀವಿಗಳು, ವಿವಿಧ ಸಂಘಟನೆಗಳಿಂದಲೂ ಕಾರ್ಯಕ್ರಮಗಳಾಗಿವೆ.ಇಷ್ಟೇಲ್ಲಾ ನಡೆದರು ಸಂಘಪರಿವಾರ ಸುಮ್ಮನೇ ಕೂಡುವುದಿಲ್ಲ '..... ಸೌಹಾರ್ದತೆ ಬಯಸುವ ನಾವು ಕೋಮುವಾದದ ಎದುರು ಸೆಣಸುತ್ತಲಿರಬೇಕು. ಮುಗಿಯಿತೆಂದು ಎಲ್ಲರೂ ಸುಮ್ಮನೇ ಕೂಡಬೇಕಿಲ್ಲ. ಸದಾ ಜಾಗೃತಿ ಮತ್ತು ಕ್ರಿಯಾಶೀಲತೆ ಈ ಕ್ಷಣದ ಅಗತ್ಯತೆ, ಕೋಮುವಾದದ ಎಲ್ಲಾ ರೂಪ ಸ್ವರೂಪಗಳನ್ನು ಎದುರಿಸುವ ಹಾದಿಯಲ್ಲಿ ನಮ್ಮ ನಡಿಗೆ.

ವಿಸ್ತರಿಸಿದ ಸಂಪುಟ - ನಿಂತಿಲ್ಲ ಗೊಣಗಾಟ

ಸಚಿವ ಸಂಪುಟದ ವಿಸ್ತರಣೆಯೇ ಒಂದು ಸಾಧನೆಯೆಂದಾದರೆ ಧರಂಸಿಂಗ್ ಸರ್ಕಾರದ್ದು ಘನ ಸಾಧನೆಯೇ ಸರಿ. ಕಾಂಗ್ರೆಸ್ ಮತ್ತು ಜಾತ್ಯತೀತ ಜನತಾದಳದ ಸರ್ಕಾರ ಅಧಿಕಾರಕ್ಕೆ ಬಂದದ್ದು ಮೇ 28, 2004. ಫಲಿತಾಂಶ ಪ್ರಕಟವಾಗಿ ಅದೆಷ್ಟೋ ದಿನಗಳು ಕಳೆದ ಹೋದ ಮೇಲೆ ಕೋಮುವಾದಿಗಳನ್ನು ದೂರವಿಡಬೇಕೆಂಬ ಉದ್ದೇಶ ಹೊತ್ತು ಸರ್ಕಾರವೇ ಅಧಿಕಾರಕ್ಕೆ ಬಂತು. ಆಗ ರಚಿತವಾದುದು ಕೇವಲ 10 ಜನರ ಸಚಿವ ಸಂಪುಟ. ಇಡೀ ಸರ್ಕಾರದ ಕಾರ್ಯಭಾರವನ್ನು ಹೊರಬೇಕಾದ ಅನಿವಾರ್ಯತೆ ಈ ಮಂತ್ರಿಗಳಿಗೆ. ಅದರ ಭಾರ ಅತೀ ಇದ್ದದ್ದೇ ಮುಖ್ಯಮಂತ್ರಿ ಧರಂಸಿಂಗರ ಮೇಲೆ. ಅವರು ಇಲ್ಲಿಯುವರೆಗೂ 24 ಖಾತೆಗಳನ್ನು ದಕ್ಷವಾಗಿ ನಿಭಾಯಿಸಿದರು! ಜನ ಕಷ್ಟ ಸುಖ ಹೇಳಿಕೊಳ್ಳಲೂ ಜಿಲ್ಲೆಯಲ್ಲಿ ಸಚಿವರಿಲ್ಲದೇ, ಅರೆ-ಬರೆ ಆಡಳಿತ ಕಾಲೆಳೆದುಕೊಂಡು ಕುಂಟುತ್ತಾ ಸಾಗಿದರೂ, ಈ ಸರ್ಕಾರದ 'ಕಾಲುಗುಣ-ಕೈಗುಣ' ತೋರಿಸಿ ತೇಪೇ ಹಚ್ಚಿಕೊಂಡು ಬಂದದ್ದು ಜನರನ್ನು ಯಾಮಾರಿಸುವ ಕಲೆಯ ದಾಖಲೆಯಲ್ಲಿ ಒಂದು ಮೈಲುಗಲ್ಲು!

ಸಿಪಿಐ(ಎಂ) ರಾಜ್ಯ ಸಮ್ಮೇಳನ

ಸಿಪಿಐ(ಎಂ) 18ನೇ ಕರ್ನಾಟಕ ರಾಜ್ಯ ಸಮ್ಮೇಳನವು 2005 ಜನವರಿ 21 ರಿಂದ 24 ರವರೆಗೆ ಉಡುಪಿಯಲ್ಲಿ ನಡೆಯಲಿದೆ.

ಸ್ಥಳ : ಶ್ರೀ ನಾರಾಯಣಗುರು ಕಲ್ಯಾಣ ಮಂಟಪ, ಬನ್ನಂಜೆ, ಉಡುಪಿ

ಉಡುಪಿ ಸಿಟಿ ಬಸ್ ನಿಲ್ದಾಣದಿಂದ ಮಲ್ಪೆಗೆ ಹೋಗುವ ದಾರಿ. ಸಿಟಿ ಬಸ್ ನಿಲ್ದಾಣದಿಂದ ಎರಡು ಫರ್ಲಾಂಗ್ ದೂರವಿದೆ. ಸಿಟಿ ಬಸ್ ನಿಲ್ದಾಣ ಹಾಗೂ ಸರ್ವಿಸ್ ಬಸ್ ನಿಲ್ದಾಣದಲ್ಲಿ ಸ್ವಯಂ ಸೇವಕರಿದ್ದು ಪ್ರತಿನಿಧಿಗಳನ್ನು ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡಲಾಗಿದೆ .ಎಂದು ಸ್ವಾಗತ ಸಮಿತಿ ಹೇಳಿದೆ.

ಸಂಪರ್ಕಿಸಬಹುದಾದ

ದೂರವಾಣಿ ಸಂಖ್ಯೆ: 0820 - 2529872 / 2528526

ಮೊಬೈಲ್ : 9448548743 (ಕೆ.ಶಂಕರ್)

ಮಂತ್ರಿಮಂಡಲದ ವಿಸ್ತರಣೆಗೆ ಬಂದ ಆಂತರಿಕ-ಬಾಹ್ಯ ಒತ್ತಡ ಅಷ್ಟಿಷ್ಟಲ್ಲ. ನಿಗದಿಯಾದ ಮೂಹರ್ತಗಳಿಗೂ ಲೆಕ್ಕವಿಲ್ಲ. ಕೊನೆಗೂ ಕಾಲಕೂಡಿ ಬಂದಿದ್ದು 2004 ರ ಈ ಡಿಸೆಂಬರ್ 15 ಕ್ಕೆ. ಸಂಪುಟ ರಚನೆಯಾದ ಬಳಿಕವಾದರು ಆಂತರಿಕ ಒತ್ತಡಗಳು - ಅಧಿಕಾರದ ಹಂಚಿಕೆಯ ಕಿತ್ತಾಟಗಳು, ಗುಂಪುಗಾರಿಕೆ ಆರ್ಭಟ ಗಳೂ ಅಂತ್ಯವಾದವೇ? ಹಾಗೇನಿಲ್ಲ. ಹಳೆಯ ಅತೃಪ್ತಿಗಳು ಉಭಯ ಪಕ್ಷಗಳಲ್ಲಿಯೂ ಬಹಿರಂಗವಾಗಿ ಸಿಡಿಯುತೊಡಗಿವೆ. ಮುಂದೆ ಯಾವ ಸ್ವರೂಪ ಪಡೆದೀತು ಎಂಬುದೇ ಈ ಸಂದರ್ಭದ ಕೌತುಕ!

ಹೈದ್ರಾಬಾದ್ ಕರ್ನಾಟಕದ - ಗುಲ್ಬರ್ಗಾಕ್ಕೆ ಯಾರೂ ಮಂತ್ರಿಗಳಿಲ್ಲ (ಮುಖ್ಯಮಂತ್ರಿಯೇ ಇದ್ದಾರಲ್ಲ ಬಿಡಿ ಎಂಬುದು ಪರಿಸ್ಥಿತಿಯ ಅಣಕ!) ಇಲ್ಲಿಂದಲೇ ಬಂಡಾಯ ಕಹಳೆ ಮೊಳಗಿದೆ, ಹಿಂದೆ ಸಚಿವರಾಗಿದ್ದ, ಚಿಂಚೋಳಿ ಶಾಸಕರಾದ ವೈಜನಾಥ್ ಪಾಟೀಲರು ಬಹಿರಂಗವಾಗಿ ಗುಡುಗಿ ದ್ದಾರೆ. ಅವರು ಈ ಬಾರಿ ಬಂಡಾಯದ ಬಾವುಟ ಎತ್ತಿರುವುದು ಜೆಡಿ(ಎಸ್) ನ ಅಧ್ಯಕ್ಷರಾದ ದೇವೇಗೌಡರ ವಿರುದ್ಧ. ಇನ್ನು ಕೆಲವು ಆಕಾಂಕ್ಷಿಗಳು ಅಥವಾ ಮಂತ್ರಿ 'ಆ'ಬೇಕಾದವರು ಒಳಗೊಳಗೆ ಕುದಿಯುತ್ತಿದ್ದಾರೆ. ಕೆಲವು ಸಂಘಟನೆಗಳು ವಿಶೇಷವಾಗಿ 'ವೀರಶೈವ ವೇದಿಕೆ'ಯಂತಹವು ದೇವೇಗೌಡರು ಅದ್ಹೇಗೆ ಬರುತ್ತಾರೆ ಎಂದು ಆಕ್ರೋಶ ತೋರಿಸಿದ್ದಾರೆ. ಇಂತಹ ಆಕ್ರೋಶಗಳು - ಅತೃಪ್ತಿಗಳು ಯಾವ ವಿಕಾರ ಸ್ವರೂಪ ತಾಳಬಹುದು? ಜೆಡಿ(ಎಸ್) ಗೆ ಅತ್ಯಧಿಕ ಶಾಸಕರನ್ನು ಕೊಟ್ಟ ಗುಲ್ಬರ್ಗಾದಲ್ಲಿಯೇ ಇಂತಹ ಬಂಡಾಯವು ಹೊಂಚು ಹಾಕುತ್ತಿರುವ ಬಿಜೆಪಿಯನ್ನು ಬಲಗೊಳಿಸಿ ಬಿಟ್ಟರೆ ಎಂಬುದು ಆತಂಕ. ಕಾಂಗ್ರೆಸ್ - ಜೆಡಿ(ಎಸ್)ನ ಮೈತ್ರಿಕೂಟದ ಉದ್ದೇಶ ಏನಾದೀತು? ಈ ಉದ್ದೇಶವನ್ನು ಇಬ್ಬರೂ ನೆನಪಿನಲ್ಲಿಟ್ಟಿದ್ದಾರೆಯೇ? ಎಂಬ ಪ್ರಶ್ನೆ. ಇಂತಹ ಅತೃಪ್ತಿ ಇತರೆ ಜಿಲ್ಲೆಗಳಲ್ಲಿಯೂ ಇಲ್ಲದಿಲ್ಲ. ನಿಗಮ-ಮಂಡಳಿ, ಸಂಪುಟ ಕಾರ್ಯದರ್ಶಿ ಎಂದೆಲ್ಲಾ ಪದವಿಗಳನ್ನು ತೋರಿಸಿ ಸಾಂತ್ವನಗೊಳಿಸಲಾಗುತ್ತಿದೆ.

ಸಂಪುಟದ ಖಾತೆಗಳ ಹಂಚಿಕೆ ಬಗ್ಗೆ ಗೊಣಗಾಟವಿದೆ. ಲಾಟರಿ - ತಂತ್ರಜ್ಞಾನದ ಖಾತೆ ಸಚಿವರಾಗಿರುವ ಬಸರಾಜ ಹೊರಟ್ಟಿ ಶಿಕ್ಷಕರ ನಡುವೆ ಅಪಾರ ಕೆಲಸ ಮಾಡಿದ ಅನುಭವವಿರುವುದರಿಂದ ತಮಗೆ ಶಿಕ್ಷಣ ಖಾತೆ ಬೇಕೆಂದಿದ್ದಾರೆ. ಸದಾ ಕೈಗಾರಿಕಾ ಸಚಿವರಾಗಿದ್ದ ಆರ್.ವಿ.ದೇಶಪಾಂಡೆಗೀಗ ಸಹಕಾರ. ರಾಮಲಿಂಗಾರೆಡ್ಡಿಗೆ ಶಿಕ್ಷಣ ಖಾತೆ. ಅಬ್ಕಾರಿ ಗುತ್ತಿಗೆದಾರ ಅನ್ಸಾರಿಗೆ ವೈದ್ಯಕೀಯ ಶಿಕ್ಷಣ, ಗೃಹ-ಕನ್ನಡ ಸಂಸ್ಕೃತಿ, ಐಟಿ, ಬಿಟಿ, ಆಡಳಿತ ಸುಧಾರಣೆ ಮುಖ್ಯವಾದ ಖಾತೆಗಳು ಇನ್ನೂ ಧರಂ ಸಿಂಗರ ಕೈಯಲ್ಲಿವೆ.

ಎರಡನೇ ಹಂತದ ವಿಸ್ತರಣೆಯಲ್ಲಿ ಒಟ್ಟು 20 ಸಚಿವರು, ಪ್ರಮಾಣ ವಚನ ಸ್ವೀಕರಿಸಿದವರಲ್ಲಿ ಜೆಡಿ(ಎಸ್) 11, ಕಾಂಗ್ರೆಸ್ 9. ಈಗ ಅವಕಾಶವಿರುವುದು 34 ಸಚಿವರಿಗೆ, ಈಗಿರುವುದು 32. ಉಳಿದ ಎರಡು ಖಾಲಿ ಸ್ಥಾನಗಳು ಕಾಂಗ್ರೆಸ್ಸಿನ ಪಾಲಿನವು. ಮುಂದೆ ತುಂಬಿಕೊಳ್ಳಲಾಗುವುದು ಎನ್ನಲಾಗಿದೆ. ಈಗಿನ 20 ಜನರಲ್ಲಿ 13 ಹೊಸಬರಿದ್ದಾರೆ. ವಿಶೇಷವೆಂದರೆ ದೇವೇಗೌಡರು 'ಕಳಂಕಿತರು' ಎಂದು ಬಿಗಿಪಟ್ಟು ಹಿಡಿದಿದ್ದ ಕಾಂಗ್ರೆಸ್‌ನ ಡಿ.ಕೆ.ಶಿವಕುಮಾರ್, ರೋಷನ್ ಬೇಗ್, ಎ.ಕೃಷ್ಣಪ್ಪ ಸಚಿವರಾಗಿಲ್ಲ. ಆದರೆ ಕಳಂಕಿತರ ಪಟ್ಟಿಯಲ್ಲಿದ್ದ ದೇಶಪಾಂಡೆ ಮತ್ತೇ ಸಚಿವರಾಗಿದ್ದಾರೆ. ಇವೆಲ್ಲಕ್ಕಿಂತ ಗೌಡರ ಪಾಳಯದಲ್ಲಿ ಸಿಟ್ಟು ತರಿಸಿರುವುದು ಹಾಸ ಜಿಲ್ಲೆಯವರೇ ಆದ (ನಾಲ್ಕು ಬಾರಿ ಸತತ ಶಾಸಕ) ಕಾಂಗ್ರೆಸ್‌ನ ಗಂಡಸಿ ಶಿವರಾಮರನ್ನು ಸಚಿವರನ್ನಾಗಿಸಿರುವುದು. ಈ ಖಾತೆಗಳ ಹಂಚಿಕೆ ಕಾಂಗ್ರೆಸ್‌ನಲ್ಲೂ ಅತೃಪ್ತಿಯನ್ನು ಹುಟ್ಟುಹಾಕಿ ಎಸ್.ಎಂ.ಕೃಷ್ಣರ ಗುಂಪಿನ ಡಿ.ಕೆ.ಶಿವಕುಮಾರ್ ಪತ್ರಿಕಾಗೋಷ್ಠಿ ನಡೆಸಿ ದೇವೇಗೌಡರ ಮೇಲೆ - ಧರಂಸಿಂಗರ ಮೇಲೆ ಬಹಿರಂಗವಾಗಿಯೇ ಕಿಡಿಕಾರಿದ್ದಾರೆ. ಧರಂಸಿಂಗ್ ಉತ್ತರಿಸಿಯೂ ಆಗಿದೆ.



ಈ ಬಾರಿಯ ವಿಸ್ತರಣೆಯ ಬಳಿಕ ಜೆಡಿ(ಎಸ್) ಹೇಗೆ ತಾನು ಕಾಂಗ್ರೆಸ್‌ಗಿಂತ ಭಿನ್ನ ಎಂದು ತೋರಿಸಿಕೊಳ್ಳುತ್ತದೆ, ಭಿನ್ನವಾಗಿ ಜನರಿಗೆ ಸ್ಪಂದಿಸುತ್ತದೆ ಎಂಬ ಪ್ರಶ್ನೆಯೇ ಮುಖ್ಯವಾಗಿದೆ. ಅದರ ಬದಲು ಒಬ್ಬರು ಒಬ್ಬರನ್ನು 'ಮುಗಿಸುವ' ಆ ಮೂಲಕ ಮೇಲುಗೈ ಸಾಧಿಸಲಾಗುವುದು ಎಂಬುದಕ್ಕೆ ಅರ್ಥವಿಲ್ಲ. ಹಾಗಾದಲ್ಲಿ ಮೊದಲ ಸ್ಥಾನದಲ್ಲಿರುವ ಬಿಜೆಪಿಯ ಬಾಯಿಗೆ ಕರ್ನಾಟಕವನ್ನು ದೂಡುವ ಕ್ರಮಗಳಾದವು ಎಂಬುದನ್ನು ಗಮನಿಸಬೇಕು. ಜೆಡಿ(ಎಸ್) ಮತ್ತು ಕಾಂಗ್ರೆಸ್ ನವರರು ಪರಸ್ಪರ ಕತ್ತಿ ಮಸಿಯುವುದಕ್ಕಿಂತ ರಾಜ್ಯದ ವರ್ತಮಾನದ ರಾಜಕೀಯವನ್ನು ವಾಸ್ತವವಾಗಿ ಗ್ರಹಿಸಿ, ಅವರೇ ಘೋಷಿಸಿಕೊಂಡಂತೆ ಕೋಮುವಾದಿ ಗಳನ್ನು ಎದುರಿಸಿ ಹೋರಾಡಲು ಆದ್ಯತೆ ನೀಡುವುದು. ಆದರೆ ಮಂತ್ರಿಗಿರಿ ಸಿಗೋಲ್ಲ ಎಂದು ಅನಿಸಿದಾಗಲೆಲ್ಲಾ ಜೆಡಿ(ಎಸ್) ನ ಶಾಸಕರ ಒಂದು ಗುಂಪು ಬಿಜೆಪಿಯತ್ತ ನೋಡುವುದು ಆತ್ಮಘಾತಕ ಬೆಳವಣಿಗೆಯಾಗುತ್ತದೆ. ಇದು ಆತಂಕದ ವಿಷಯ. ಕಾಂಗ್ರೆಸ್ ವಿರೋಧವೂ ಕೂಡ ಕುರುಡುತನದಿಂದ ಕೂಡಿದ್ದಾಗಿರಬೇಕಿಲ್ಲ. ಕರ್ನಾಟಕದ ಸ್ಥಿತಿಯಲ್ಲಿ ಜವಾಬ್ದಾರಿಯುತ ಉಭಯ ಪಕ್ಷಗಳು ಅರಿಯುವುದು ಒಳಿತು. ಇಲ್ಲವಾದರೆ ಅವರ ವಿರುದ್ಧದ ಮಾತುಗಳು ಸಂದರ್ಭಸಾಧಕತೆಯ ಭಿನ್ನ ಆವೃತ್ತಿಯಾದಾವು.

ಈಗ ಸಂಪುಟದ ವಿಸ್ತರಣೆಯಾಗಿದೆ. ಗೊಣಗಾಟದ ಕೈಬಿಟ್ಟು ಪೂರ್ಣವಾಗಿ ನೊಂದ ಜನರಿಗೆ ಪರಿಹಾರ ಒದಗಿಸುವ ದರತ್ತ ಪ್ರಾಮಾಣಿಕ ಯತ್ನಕ್ಕೆ ಮುಂದಾಗಲಿ.

ಸಚಿವ ಸ್ಥಾನಕ್ಕೆ ಯಾವುದು ಮಾನದಂಡ?

ವಿಸ್ತರಣೆಯಾದ 20 ಸಚಿವರಲ್ಲಿ 13 ಜನ ಹೊಸಬರು. 27 ಜಿಲ್ಲೆಗಳಲ್ಲಿ 8 ಜಿಲ್ಲೆಗಳಿಂದ ಯಾರೂ ಸಚಿವರಿಲ್ಲ. 10 ಜಿಲ್ಲೆಗಳಿಂದಲೇ 23 ಸಚಿವರಿದ್ದಾರೆ. ಜಾತಿವಾರು ಲೆಕ್ಕದಲ್ಲಿ ಒಕ್ಕಲಿಗರು, ಲಿಂಗಾಯತರು, ಹಿಂದುಳಿದವರು, ಪ.ಜಾತಿ, ಅಲ್ಪ ಸಂಖ್ಯಾತರು ಇತ್ಯಾದಿ ಲೆಕ್ಕಾಚಾರವೂ ಪ್ರಧಾನವಾಗಿದೆ. ಆದರೆ ಮಹಿಳಾ ಸಚಿವರು ಒಬ್ಬರು ಮಾತ್ರ. ಮಹಿಳಾ ಸಚಿವರ ಪ್ರಮಾಣ ನಗಣ್ಯ ಎನ್ನುವಷ್ಟು ಇರುವುದು ಈಗ ಮಾತ್ರವಲ್ಲ, ಹಿಂದಿನ ಹಲವಾರು ದಶಕಗಳಿಂದಲೂ ಕರ್ನಾಟಕದಲ್ಲಿ ಪಾಲಿಸಿಕೊಂಡು ಬಂದ ನೀತಿ.

ಗಂಗಾವತಿ : ಭೂಮಾಲೀಕರಿಂದ ದಲಿತ ಕೃಷಿ ಕೂಲಿಕಾರನ ಕೊಲೆ

ಭೂಮಾಲಕ ಶಕ್ತಿಗಳು ಮತ್ತು ಪೊಲೀಸರು ಪರಸ್ಪರ ಕೈಜೋಡಿಸಿದರೆ ಏನಾಗಬಹುದು ಎಂಬುದು ಗಂಗಾವತಿ ತಾಲ್ಲೂಕಿನ ಗ್ರಾಮಗಳಲ್ಲಿ ಕಾಣಬಹುದು. ಕೃಷಿ ಕೂಲಿಕಾರರ ಮೇಲೆ ಹಲ್ಲೆ ಮಾಡಿದರೂ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸುವಂತಿಲ್ಲ. ಮಹಿಳೆಯರ ಮೇಲೆ ಅತ್ಯಾಚಾರ ನಡೆದರೂ ಅಪರಾಧಿಗಳ ವಿರುದ್ಧ ಕಾನೂನು ಕ್ರಮ ಜರುಗುವುದಿಲ್ಲ. ಕೊಲೆಯೊಂದರ ದೂರು ಸಲ್ಲಿಸಿದರೂ ಪ್ರಕರಣ ದಾಖಲಾಗುವುದಿಲ್ಲ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿ ಶ್ರೀಮಂತ ಭೂಮಾಲೀಕರಿಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ಕೃಷಿ ಕೂಲಿಕಾರರಿಗೂ ನಡುವೆ ವರ್ಗ ಸಂಘರ್ಷ ತೀವ್ರವಾಗುತ್ತಿದೆ. ಕೃಷಿ ಕೂಲಿಕಾರರು ಸಂಘಟಿತರಾಗಿ ತಮ್ಮ ಕೂಲಿ, ಭೂಮಿ ಮೊದಲಾದ ಹಕ್ಕು ಗಳಿಗಾಗಿ ಹೋರಾಟ ನಡೆಸುತ್ತಿರುವುದು ಇಲ್ಲಿಯ ಶ್ರೀಮಂತ ಭೂಮಾಲೀಕರಿಗೆ ಸಹಿಸಲಾರದಾಗಿದೆ. ದಲಿತ ಕುಟುಂಗಳಿಗೆ ಕಳೆದ ಎರಡು ಮೂರು ದಶಕಗಳಿಂದ ಮಂಜೂರಾದ ಸರ್ಕಾರಿ ಭೂಮಿಯನ್ನು ದೌರ್ಜನ್ಯದಿಂದ ಕಬಳಿಸಿಕೊಂಡಿರುವ ಭೂಮಾಲೀಕರು ಕೂಲಿಕಾರರು ಸಂಘಟಿತರಾಗುತ್ತಿರುವುದನ್ನು ನೋಡಿ, ಅಕ್ರಮವಾಗಿ ಸಂಪಾದಿಸಿದ ನೀರಾವರಿ ಭೂಮಿಯನ್ನು ಕಳೆದುಕೊಳ್ಳುವ ಭೀತಿಗೆ ಒಳಗಾಗಿದ್ದಾರೆ. ತಾವು ಕಬಳಿಸಿರುವ ಸರ್ಕಾರಿ ಜಾಗೆಯಲ್ಲಿ ಗುಡಿಸಲು ಕಟ್ಟಿ ಕಬಳಿಸಿರುವ ಸರ್ಕಾರಿ ಜಾಗೆಯಲ್ಲಿ ಗುಡಿಸಲು ಕಟ್ಟಿಕೊಳ್ಳಲು ಬಯಸುವ



ನಿವೇಶನರಹಿತ ಕೂಲಿಕಾರ ರಿಂದ ಸಾವಿರಾರು ರೂಪಾಯಿಗಳನ್ನು ಪಡೆಯುವ ದಂಧೆ ಬಂದ್ ಆಗುವ ಆತಂಕಕ್ಕೆ ಒಳಗಾಗಿದ್ದಾರೆ.

ಆದ್ದರಿಂದಲೇ ಕೃಷಿ ಕೂಲಿಕಾರರಲ್ಲಿ ಭಯ ಭೀತಿ ಹುಟ್ಟಿಸಿ. ಅವರು ಸಂಘಟಿತರಾಗುವುದನ್ನು ತಡೆಯಲು ಕೂಲಿಕಾರರ ಮೇಲೆ ದೌರ್ಜನ್ಯಗಳನ್ನು ತೀವ್ರಗೊಳಿಸಿದ್ದಾರೆ. ಯಥಾ ಪ್ರಕಾರ ಪೋಲೀಸ್ ಇಲಾಖೆ ಮತ್ತು ಸ್ಥಳೀಯ ಆಡಳಿತ ಭೂಮಾಲೀಕ ಶಕ್ತಿಗಳನ್ನು ಬೆಂಬಲಿಸುತ್ತಾ ಅಪರಾಧಿಗಳಿಗೆ ರಕ್ಷಣೆ ನೀಡುತ್ತಿದೆ.

ಕಳೆದ ಐದಾರು ತಿಂಗಳುಗಳಿಂದ ತಾಲ್ಲೂಕಿನ ಗೋನಾಳ ಮತ್ತು ಹೇರೂರು ಗ್ರಾಮಗಳಲ್ಲಿ ಕೃಷಿ ಕೂಲಿಕಾರರ ಮೇಲೆ, ದಲಿತ ಕೃಷಿ ಕೂಲಿಕಾರರ ಮಹಿಳೆಯರ ಮೇಲೆ ಅವ್ಯಾಹತವಾಗಿ ದೌರ್ಜನ್ಯ ನಡೆಯುತ್ತಿದ್ದರೂ ಪೊಲೀಸರು ಆರೋಪಿ ಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ವಿಫಲವಾಗಿರುವುದರಿಂದ ಭೂಮಾಲೀಕ ಶಕ್ತಿಗಳಿಗೆ ಕುಮ್ಮಕ್ಕು ಸಿಕ್ಕಿದ್ದು ಕೂಲಿಕಾರರನ್ನು ಕೊಲ್ಲುವುದಕ್ಕೂ ಮುಂದಾಗಿದ್ದಾರೆ.


ಬಸವರಾಜ ವಿರೂಪಣ್ಣ ತೊಂಡಿಹಾಳ, ಪರಿಶಿಷ್ಟ ಪಂಗಡಕ್ಕೆ ಸೇರಿದ ಕೃಷಿ ಕೂಲಿಕಾರ, ತನ್ನ ಹೆಂಡತಿ ತಿಪ್ಪಮ್ಮ ಮತ್ತು ಒಬ್ಬ ಮಗಳೊಂದಿಗೆ ಕಳೆದ ಹತ್ತು ಹದಿನೈದು ವರ್ಷಗಳಿಂದ ಗೋನಾಳ ಕ್ಯಾಂಪ್‌ನಲ್ಲಿ ಗುಡಿಸಲು ಕಟ್ಟಿಕೊಂಡು ವಾಸವಾಗಿದ್ದ. ಕೆಲವು ವರ್ಷಗಳಿಂದ ಈತನು ಭೂಮಾಲೀಕ ಅಮರೇಶಪ್ಪ ಶಿವಪ್ಪ ಗೋನಾಳ ಇವರಲ್ಲಿ ವಾರ್ಷಿಕ ಸಂಬಳದ ಆಳಾಗಿ ದುಡಿಯುತ್ತಿದ್ದ. ಗೋನಾಳ ಕ್ಯಾಪಿನ ಕೃಷಿ ಕೂಲಿಕಾರರು ಸಂಘವನ್ನು ರಚಿಸಿಕೊಂಡು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಲು ಆರಂಭಿಸಿರುವುದನ್ನು ಗಮನಿಸಿದ ಆತ ಸಂಘದ ಕಡೆ ಆಕರ್ಷಿತನಾಗಿ ಸಂಘದ ಸದಸ್ಯತ್ವವನ್ನು ಪಡೆದಿದ್ದಾನೆ. ಇದರಿಂದ ಕುಪಿತನಾದ ಅಮರೇಶಪ್ಪ ಬಸವರಾಜ ಮತ್ತು ಸಂಘದ ಬಗ್ಗೆ ಒಲವುಳ್ಳ ಇನ್ನೂ ಇಬ್ಬರು ಆಳುಗಳನ್ನು ಕೆಲಸದಿಂದ ತೆಗೆದುಹಾಕಿದ್ದಾನೆ. ಇದರಿಂದ ವಿಚಲಿತನಾಗದ ಬಸವರಾಜನು ಸಂಘದೊಂದಿಗೆ ದೃಢವಾಗಿ ನಿಂತಿದ್ದಾನೆ. ಹೇರೂರು ಮತ್ತು ಗೋನಾಳ ಕ್ಯಾಂಪಿನ ಮಹಿಳೆಯರು ತಮ್ಮ ಮೇಲೆ ಭೂಮಾಲೀಕರು ಮತ್ತು ಅವರ ಬಾಡಿಗೆ ಗುಂಡಾಗಳು ಹಲ್ಲೆ ನಡೆಸಿದ್ದನ್ನು ಪ್ರತಿಭಟಿಸಿ, ಮುಖ್ಯಮಂತ್ರಿ ಮನೆಯ ಮುಂದೆ ಸತ್ಯಾಗ್ರಹ ನಡೆಸಲು ಬೆಂಗಳೂರಿಗೆ ಹೊರಟಾಗ ಬಸವರಾಜನೂ ಅವರ ಸಂಗಡ ಬೆಂಗಳೂರಿಗೆ ತೆರಳಿದ್ದಾನೆ. ಕಳೆದ ಎರಡು ತಿಂಗಳುಗಳಿಂದ ಕೆಲಸ ಇಲ್ಲದೆ ಅಲ್ಲಿ ಇಲ್ಲಿ ಕೂಲಿನಾಲಿ ಮಾಡಿಕೊಂಡು ಜೀವನ ಸಾಗಿಸಿದ್ದಾನೆ.



ಎಸ್.ಐ. ಬಸವರಾಜು

ಕುಟುಂಬದ ನಿರ್ವಹಣೆಗೆ ತೊಂದರೆಯಾದಾಗ ಸಾರಾಯಿ ಕುಡಿದು ಅಮರೇಶಪ್ಪನನ್ನು ಬೈಯುತ್ತಿದ್ದುದನ್ನು ಕೇಳಿದವರಿದ್ದಾರೆ. ಯಃಕಶ್ಚಿತ್ ಕೂಲಿಕಾರನೊಬ್ಬ ತಮ್ಮ ಗುಟ್ಟು ರಟ್ಟು ಮಾಡಲು ಹೊರಟಿರುವುದನ್ನು ನಿಲ್ಲಿಸಲು ಅಮರೇಶಪ್ಪ ತಂತ್ರವೊಂದನ್ನು ರೂಪಿಸಿದ್ದಾನೆ.

ಡಿಸೆಂಬರ್ 20ರಂದು ಏಕಾಏಕಿ ಯಾಗಿ ಅಮರೇಶಪ್ಪನ ಇಬ್ಬರು ಆಳುಗಳು; ಕುಮಾರ ಮತ್ತು ಮಲ್ಲಿಕಾರ್ಜುನ, ಎಂಬುವರು ಬಸವರಾಜನ ಗುಡಿಸಲಿಗೆ ಬಂದು ಧಣಿಗಳು ಕೆಲಸಕ್ಕೆ ಕರೆದಿದ್ದಾರೆ ಎಂದು ಹೇಳುತ್ತಾರೆ. ಬಸವರಾಜನ ಹೆಂಡತಿ ಆಕ್ಷೇಪಿಸುತ್ತಾಳೆ. ಅಮರೇಶಪ್ಪನ ಆಳುಗಳ ಒತ್ತಾಯಕ್ಕೆ ಮರುಳಾಗಿ ಬಸವರಾಜ ಅವರ ಸಂಗಡ ಹೋಗುತ್ತಾನೆ. ಮೂವರು ಜೊತೆಗೂಡಿ ಹೋಗುವುದನ್ನು ಕ್ಯಾಂಪಿನ ಜನ ನೋಡಿದ್ದಾರೆ. ಮತ್ತೆ ಅವರು ಬಸವರಾಜನನ್ನು ನೋಡಿದ್ದು ಶವವಾಗಿ 2 ದಿನಗಳ ಬಳಿಕ ಗ್ರಾಮದ ಪಕ್ಕದ ಒಂದು ಹಳ್ಳದಲ್ಲಿ ಶವವೊಂದು ಬಿದ್ದಿರುವುದನ್ನು ದನ ಕಾಯುವ ಹುಡುಗರು ತಿಳಿಸಿದಾಗ ಅದು ಬಸವರಾಜನ ಶವವೆಂದು ತಿಳಿದುಬಂದಿದೆ. ಹಳ್ಳದಲ್ಲಿ ದೇಹ ಮುಳುಗುವ್ಟು ಸಹ ನೀರು ಹರಿಯುತ್ತಿರ'ಲಿಲ್ಲ. ದೇಹದ ಮೇಲೆ ಗಾಯಗಳು ಮಾತ್ರವಲ್ಲ ಕೈಕಾಲುಗಳನ್ನು ತಿರುವಿದ ಗುರುತುಗಳು ಕಂಡು ಬರುತ್ತಿದ್ದವು.



ಹತ್ಯೆಯಾದ ಬಸವರಾಜ್

ಕೊಲೆಯಾಗಿದ್ದ ಬಸವರಾಜನ ಹೆಂಡತಿ ತಿಪ್ಪಮ್ಮ ಗ್ರಾಮೀಣ ಪೊಲೀಸ್ ಠಾಣೆಗೆ ಹೋಗಿ ತನ್ನ ಗಂಡನನ್ನು ಕೊಲೆ ಮಾಡಿದ್ದಾರೆಂದೂ ತನಗೆ ಅಮರೇಶಪ್ಪನ ಮೇಲೆ ಸಂಶಯವಿದೆ ಎಂದೂ ದೂರು ನೀಡಿದ್ದಾಳೆ. ಆದರೆ ಗ್ರಾಮೀಣ ಪೊಲೀಸ್ ಠಾಣೆಯ ಪಿ.ಎಸ್.ಐ. ಗುರುಬಸವ ರಾಜಪ್ಪ ಆ ಮಹಿಳೆಗೆ ಸರ್ಕಾರದಿಂದ ದುಡ್ಡು ಕೊಡಿಸುವ ಆಮಿಷವೊಡ್ಡಿ ಅವಳಿಂದ ಬೇರೊಂದು ಹೇಳಿಕೆಯನ್ನು ಪಡೆದಿದ್ದಾನೆ. ಶವ ಪರೀಕ್ಷೆ ನಡೆಸಿದ ಸರ್ಕಾರಿ ವೈದ್ಯನ ಮೇಲೆಯೂ ಪ್ರಭಾವ ಬೀರಲು ಯತ್ನಿಸಿದ್ದಾನೆ.

ಎರಡೇ ತಿಂಗಳುಗಳ ಹಿಂದೆ ಇದೇ ಅಮರೇಶಪ್ಪ ಬಾಡಿಗೆ ಗುಂಡಾಗಾಳನ್ನು ಕರೆದುಕೊಂಡು ಬಂದು ಗೋನಾಳ ಕ್ಯಾಂಪಿನಲ್ಲಿ ದಲಿತ ಕೂಲಿಕಾರ ಹುಲುಗಪ್ಪನ ಗುಡಿಸಲನ್ನು ಧ್ವಂಸ ಮಾಡಿ ದಲಿತ ಮಹಿಳೆ ದುರ್ಗಮ್ಮನ ಮೇಲೆ ಹಲ್ಲೆ ಮಾಡಿ, ಆಕೆಯ ಬಟ್ಟೆಯನ್ನು ಹರಿದು ಅವಮಾನಿಸಿದ್ದಲ್ಲದೆ ಜೀವದ ಬೆದರಿಕೆಯನ್ನು ಹಾಕಿದ್ದರು. ನೆರವಿಗೆ ಧಾವಿಸಿದ ಇತರ ಮಹಿಳೆಯರನ್ನು ಕಾಲಿನಿಂದ ಒದ್ದು ಹಲ್ಲೆ ಮಾಡಿದ್ದರು. ಆ ಪ್ರಕರಣದಲ್ಲೂ ಪಿ.ಎಸ್.ಐ. ಗುರುಬಸವರಾಜ ಅನ್ಯಾಯಕ್ಕೆ ಒಳಗಾದ ದಲಿತರಿಗೆ ರಕ್ಷಣೆ ನೀಡುವ ಬದಲು ದೌರ್ಜನ್ಯ ವೆಸಗಿದವರ ಏಜೆಂಟರಾಗಿ ವರ್ತಿಸಿದ್ದಾನೆ. ಅಪರಾಧಿಗಳನ್ನು ತನ್ನ ಜೀಪಿನಲ್ಲೇ ಕರೆದುಕೊಂಡು ಹೋಗಿ ಹಲ್ಲೆ ನಡೆದ ಸ್ಥಳಕ್ಕೆ ಹತ್ತಿರದಲ್ಲಿ ಬಿಟ್ಟುಹೋಗಿದ್ದಾನೆ. ದಲಿತ ಮಹಿಳೆಯ ಮೇಲೆ ಹಲ್ಲೆ ಮಾಡಿದವರ ವಿರುದ್ಧ ಪ್ರಕರಣವನ್ನು ದಾಖಲು ಮಾಡದೆ ಅವರಿಗೆ ದೌರ್ಜನ್ಯವನ್ನು ಮುದುವರೆಸಲು ಕುಮ್ಮಕ್ಕು ನೀಡಿದ್ದಾನೆ. ಭೂಮಾಲಿಕರ ಪರವಾಗಿ ಈತನೇ ಬಡ ಕೂಲಿಕಾರರಿಗೆ ಬೆದರಿಕೆ ಹಾಕುತ್ತಾನೆ. ಸಂಘದ ಕಾರ್ಯಕರ್ತರಿಗೆ ಹೇಳಿಕೆ ನೀಡಲು ಅವಕಾಶವನ್ನು ನಿರಾಕರಿಸುತ್ತಾನೆ. ಬೆಲೆ ಬಾಳುವ ಸರ್ಕಾರಿ ಭೂಮಿಯನ್ನು ಕಬಳಿಸಲು ಸ್ಥಳೀಯ ಭೂಮಾಲಕರ ಸಲಹೆಗಾರನಾಗಿ ಕೆಲಸ ಮಾಡುತ್ತಾನೆ. ಕೃಷಿ ಕೂಲಿಕಾರರ ಮೇಲೆ ದೌರ್ಜನ್ಯಗಳು ನಡೆಯ ಆರಂಭಿಸಿದಾಗ ದೃಢವಾದ ಕ್ರಮ ಜರುಗಿಸಿದ್ದರೆ ಇಂದು ಬಸವರಾಜ ಕೊಲೆಯಾಗುತ್ತಿರಲಿಲ್ಲ.

ಪ್ರತಿಭಟನೆ : ಬಸವರಾಜನನ್ನು ಚಿತ್ರಹಿಂಸೆ ನೀಡಿ ಕೊಲೆ ಮಾಡಲಾಗಿದ್ದು ಕೊಲೆಗಾರರನ್ನು ಪತ್ತೆ ಹಚ್ಚಿ ಬಂಧಿಸಬೇಕೆಂದು ಒತ್ತಾಯಿಸಿ ಗೋನಾಳ ಕ್ಯಾಂಪಿನ ಕೂಲಿಕಾರರು ತಹಶೀಲ ಕಛೇರಿಯವರೆಗೆ ಪಾದಯಾತ್ರೆಯಲ್ಲಿ ಬಂದು ತಹಶಿಲ್ದಾರರಿಗೆ ಮನವಿ ಸಲ್ಲಿಸಿದ್ದಾರೆ. ಪ್ರಕರಣವನ್ನು ತಿರುಚಿ ಅಪರಾಧಿಗಳಿಗೆ ರಕ್ಷಣೆ ನೀಡುತ್ತಿರುವ ಪಿ.ಎಸ್.ಐ. ಗುರುಬಸವರಾಜ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಲಾಗಿದೆ ಅಲ್ಲದೆ ಗೋನಾಳ, ಹೇರೂರು, ಗುರಮ್ಮ ಕ್ಯಾಂಪ್‌ನ ಕೃಷಿ ಕೂಲಿಕಾರರ ಕುಟುಂಬಗಳಿಗೆ ಸೂಕ್ತ ರಕ್ಷಣೆ ನೀಡಬೇಕೆಂದು ಆಗ್ರಹಿಸಲಾಗಿದೆ.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ರಾಜ್ಯ ಕೃಷಿ ಕೂಲಿಕರರ ಸಂಘದ ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ ಅವರು ಕೊಲೆ ಆರೋಪಿಗಳನ್ನು ತಕ್ಷಣ ಬಂಧಿಸದಿದ್ದರೆ ರಾಜ್ಯಾದ್ಯಂತ ಎಲ್ಲಾ ಪೊಲೀಸ್ ಠಾಣೆಗಳ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಅವರು ಸಹ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಅನಂತರ ಪ್ರತಿಭಟನಾಕಾರರು ಗ್ರಾಮೀಣ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಬಸವರಾಜನ ಸಾವನ್ನು ಕೊಲೆ ಎಂದು ಪ್ರಕರಣ ದಾಖಲು ಮಾಡಿ ಆರೋಪಿಗಳನ್ನು ಬಂಧಿಸಿ ಕ್ರಮ ಜರುಗಿಸಬೇಕೆಂದು ಆಗ್ರಹಿಸಲಾಯಿತು. ಮುಖಂಡರಾದ ಕೆ.ಬಾಳಪ್ಪ, ಗಂಗಾಧರ ಸ್ವಾಮಿ, ಲಿಂಗಪ್ಪ ಹಣವಾಳ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಎಸ್.ಪ್ರಸನ್ನ ಕುಮಾರ್ ಅವರು ಗಂಗಾವತಿಯಲ್ಲಿ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿ ಕೂಲಿಕಾರ ಬಸವರಾಜನು ಸಂಶಯಾಸ್ಪದ ರಿತಿಯಲ್ಲಿ ಸಾವನ್ನಪ್ಪಿದ್ದು ಮೇಲ್ನೋಟಕ್ಕೆ ಕೊಲೆ ಎಂದು ಕಂಡು ಬರುತ್ತಿದ್ದು ಸಮಗ್ರ ತನಿಖೆಯಾಗಬೇಕೆಂದು ಆಗ್ರಹಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಗಳು ಜಂಟಿಯಾಗಿ ರಾಜ್ಯಾದಯಂತ ಪೊಲೀಸ್ ಠಾಣೆಗಳ ಎದುರು ಪ್ರತಿಭಟನೆ ನಡೆಸಲು ನಿರ್ಧರಿಸಿವೆ. ಎರಡೂ ಸಂಘಟನೆಗಳ ವತಿಯಿಂದ ರಾಜ್ಯದ ಗೃಹ ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿಗಳಿಗೆ ಮನವಿಯೊಂದನ್ನು ಸಲ್ಲಿಸಲಾಗಿದೆ. ತಾಲ್ಲೂಕಿನ ಸಾವಿರಾರು ಕೃಷಿ ಕೂಲಿಕಾರರು ಪಾಲ್ಗೊಳ್ಳುವ ಒಂದು ಬೃಹತ್ ರ್‍ಯಾಲಿಯನ್ನು ಗಂಗಾವತಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ.

- ಚಂದ್ರಪ್ಪ ಹೊಸ್ಕೇರಾ

ಚಿಂತನೆ

ವರ್ತನೆಯ ವರ್ಗಮೂಲ?

ಮಾಜಿ ನ್ಯಾಯಾಧೀಶರ ಅನಿಸಿಕೆ

ಭೇದಭಾವವಿಲ್ಲದೆ ಪಕ್ಷಪಾತ ಮಾಡದೆ ಇರಬೇಕೆಂದು ಎಲ್ಲ ಪ್ರಯತ್ನಗಳನ್ನು ಮಾಡುವಾಗಲೂ ನಮ್ಮನ್ನು ಬೆಳೆಸಿದ ರೀತಿ ಮತ್ತು ನಮ್ಮ ಸಾಮಾಜಿಕ ಸ್ಥಾನಮಾನ ನ್ಯಾಯಾಧೀಶರ ರೀತಿಗಳನ್ನು ಪ್ರಭಾವಿತಗೊಳಿಸುತ್ತದೆಂದು ನನಗನಿಸುತ್ತದೆ.

ನಾನಾ ಮಂಗಳೂರು ಜಿಲ್ಲೆಯ ಬಂಟ್ವಾಳದಲ್ಲಿ ಮ್ಯಾಜಿಸ್ಟೇಟ್ ಆಗಿದ್ದ ಕಾಲವದು. ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ ರೈತ ಸಂಘದ ನಾಯಕರುಗಳನ್ನು ಅವರು ನ್ಯಾಯಬಾಹಿರವಾಗಿ ಒಂದೆಡೆ ಸೇರಿ ಗಲಭೆ ಉಂಟು ಮಾಡಿದ ಅಪರಾಧಕ್ಕಾಗಿ ವಿಚಾರಣೆಗೊಳಪಡಿಸಲಾಗುತ್ತಿತ್ತು.

ಈ ಪ್ರಕರಣ ನನ್ನ ಕೋರ್ಟಿನಲ್ಲಿ ಇತ್ಯರ್ಥಕ್ಕಾಗಿ ಕಾಯುತ್ತಿರುವ ಸಮಯದಲ್ಲಿ ಒಬ್ಬ ಆರೋಪಿ (ರೈತ ಸಂಘದ ಒಬ್ಬ ಮುಖಂಡರು) ನನ್ನ ಮನೆಗೆ ಬಂದು ಕರೆಗಂಟೆ ಬಾರಿಸಿದರು. ಬಾಗಿಲು ತೆರೆಯುತ್ತಿದ್ದಂತೆ ಅವರನ್ನು ನೋಡಿದ ನಾನು ಉದ್ವಿಘ್ನಗೊಂಡು ಆತ ಯಾಕೆ ಬಂದರೆಂಬುದನ್ನೂ ವಿಚಾರಿಸದೆ ಆತ ಕೂಡಲೇ ಅಲ್ಲಿಂದ ಜಾಗ ಖಾಲಿ ಮಾಡದಿದ್ದರೆ ಪೊಲೀಸರನ್ನು ಕರೆಯುವುದಾಗಿ ಕೂಗಿದೆ. ಸಹಜವಾಗಿ ಆತ ಹೊರಟುಹೋದರು.

ಇದಾಗಿ ಸುಮಾರು ಆರು ತಿಂಗಳ ನಂತರ ಪಾಣೆ ಮಂಗಳೂರಿನ ಪಂಚಾಯ್ತಿ ಅಧ್ಯಕ್ಷರು ನನ್ನ ಮನೆಗೆ ಬಂದರು. ನಾನು ಅವರನ್ನು ಮನೆಯೊಳಕ್ಕೆ ಕರೆದು ಚಹವನ್ನು ನೀಡಿದೆ. ಆತ ಅನಂತರ ಪಾಣೆ ಮಂಗಳೂರಿನ ಮಾರುಕಟ್ಟೆಯಲ್ಲಿ ಮೀನು ಮಾರುತ್ತಿರುವುದರಿಂದ ಗಬ್ಬುನಾತ ಹರಡುತ್ತಿರುತ್ತದೆ. ಆದ್ದರಿಂದ ಈ ಮಾರಾಟದ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದ್ದು ಈ ಪ್ರಕರಣಗಳಲ್ಲಿ ಈ ಮಾರಾಟವನ್ನು ತೀವ್ರ ದಂಡಿಸಿ ತೀರ್ಪು ನೀಡಬೇಕೆಂದು ಕೇಳಿದ.

ನಾನು ಬಹಳ ಸಭ್ಯವಾಗಿ ಆತನಿಗೆ ಆತ ನಮ್ಮ ಮನೆಗೆ ಬರಲು ಸ್ವಾಗತವಿದೆ. ಆದರೆ ಆತ ಈ ಪ್ರಕರಣಗಳಲ್ಲಿ ನನ್ನನ್ನು ಪ್ರಭಾವಿಸುವ ಪ್ರಯತ್ನ ಮಾಡುತ್ತಿರುವುದು ಪೂರ್ತಿ ತಪ್ಪೆಂದು ಹೇಳಿದೆ. ಆತ ಕ್ಷಮೆ ಕೇಳಿ ಅಲ್ಲಿಂದ ಬಿಳ್ಕೊಂಡ.

ಈ ಘಟನೆಗಳ ನಂತರದಲ್ಲಿ ನಾನು ವಿಚಾರ ಮಾಡಿದಾಗ ಈ ಎರಡು ಪ್ರಕರಣಗಳಲ್ಲಿ ನಾನೇಕೆ ಹೀಗೆ ನಡೆದುಕೊಂಡೆ ಎಂದು ಅಚ್ಚರಿಯಾಗುತ್ತದೆ. ಬಹುಶಃ ನಾನು ಬೆಳೆದುಬಂದ ರೀತಿ ನನ್ನ ಮಧ್ಯಮ ವರ್ಗದ ಗುಣ ನಾನು ಈ ಎರಡು ಘಟನೆಗಳಲ್ಲಿ ಭಿನ್ನವಾಗಿ ನಡೆದುಕೊಳ್ಳುವಂತೆ ಮಾಡಿರಬೇಕು. ಯಾಕೆಂದರೆ ಈ ಎರಡೂ ಘಟನೆಗಳಲ್ಲಿ ಬಂದ ವ್ಯಕ್ತಿಗಳು ನನ್ನ ಮುಂದೆ ಇದ್ದ ಪ್ರಕರಣಗಳ ಬಗ್ಗೆ ಮಾತನಾಡಲು ಬಂದಿದ್ದರು.

- ಶ್ರೀ ಉ. ವೆಂಕಟ್‌ರಾವ್
ನಿವೃತ್ತ ನ್ಯಾಯಾಧೀಶರು.


(ಕೃಪೆ : ಸ್ಟಾರ್ ಆಫ್ ಮೈಸೂರು, ಆಂಗ್ಲ ಸಂಜೆ ದಿನಪತ್ರಿಕೆ - 8.12.04)

ಹೊಸ ವರುಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ ಜಗತ್ತಿನ ಜನತೆಯ ಮೇಲೆ ಸಾಮ್ರಾಜ್ಯಶಾಹಿ ಧಾಳಿಗಳನ್ನು ಮತ್ತು ಅದರ ವಿರುದ್ಧ ಮೂಡಿಬರುತ್ತಿರುವ ಪ್ರತಿರೋಧವನ್ನು, ಹೊಸ ಬೆಳವಣಿಗೆಗಳನ್ನು ಲೇಖಕರು ಗುರುತಿಸಿದ್ದಾರೆ. ಹೊಸ ಅರಿವಿನೊಂದಿಗೆ ಹೊಸ ವರುಷಕ್ಕೆ ಕರೆದೊಯ್ಯುತ್ತಿದ್ದಾರೆ ಕಾಂ. ಸುರ್ಜಿತ್

2005 ಕ್ಕೆ ಪಾದಾರ್ಪಣೆ

ಸಾಮ್ರಾಜ್ಯಶಾಹಿ ಪ್ರತಿರೋಧ ತೀವ್ರಗೊಳಿಸಬೇಕು ಜನಪ್ರಿಯ ಮಧ್ಯಪ್ರವೇಶ ಹೆಚ್ಚಬೇಕು

ಹರಿಕಿಶನ್‌ಸಿಂಗ್ ಸುರ್ಜಿತ್



ಇರಾಕ್‌ನಲ್ಲಿನ ಸಶಸ್ತ್ರ ಪ್ರತಿರೋಧ ಹಾಗೂ ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿನ ಜನಸಮೂಹಗಳ ಜಾಗೃತಿಯು 2 ಪ್ರಧಾನ ಅಂಶಗಳೊಂದಿಗೆ ವಿಶ್ವಾದ್ಯಂತ ಹೆಚ್ಚಿದ ಸಾಮ್ರಾಜ್ಯಶಾಹಿ ವಿರೋಧಿ ಪ್ರತಿಭಟನೆಗಳಿಗೆ 2004 ಸಾಕ್ಷಿಯಾಗಿದೆ. ತನ್ನ ಯಜಮಾನಿಕೆಯನ್ನು ತೀವ್ರಗೊಳಿಸಲು ಅಮೇರಿಕಾ ನಡೆಸಿದ ಯತ್ನ ಹಾಗೂ ಪ್ರಮಾಣಕ್ಕನುಗುಣವಾಗಿ ಈ ಪ್ರತಿರೋಧ ಹೆಚ್ಚುತ್ತಿದೆ.

ಎರಡನೆ ಬಾರಿಗೆ ಜಾರ್ಜ್ ಬುಷ್

2004 ರ ಪ್ರಮುಖ ಘಟನೆ ಎಂದರೆ ಅಮೇರಿಕಾ ಅಧ್ಯಕ್ಷ ಸ್ಥಾನಕ್ಕೆ ಜಾರ್ಜ್ ಬುಷ್ ಎರಡನೆ ಬಾರಿಗೆ ಆಯ್ಕೆಯಾಗಿರುವುದು ಮೊದಲ ಬಾರಿ ಆಯ್ಕೆಯಾಗುವಾಗ ಅವರು ಎಸಗಿದ ಅಕ್ರಮ - ಕಳಂಕವನ್ನು ಈ ಭಾರಿ ಗೆಲುವಿಗೂ ಎಸಗಿದ್ದಾರೆ ಎಂಬುದು ಗಮನಾರ್ಹ ಅಂಶ.

ಹೇಗಾದರೂ - ಏನು ಮಾಡಿಯಾದರೂ ಗೆಲ್ಲಿಸಲೇಬೇಕೆಂಬ ಹಂಬಲದೊಂದಿಗೆ ಬುಷ್‌ನ ಚುನಾವಣಾ ವ್ಯವಸ್ಥಾಪಕರು ಬಳಸಿದ ಅಕ್ರಮಗಳನ್ನು ಅನೇಕ ಅಂತರಾಷ್ಟ್ರೀಯ ವೀಕ್ಷಕರು ಗುರುತಿಸಿದ್ದಾರೆ. ನಿಗ್ರೋ, ಹಿಸ್ಪಾನಿಕ್ ಮುಂತಾದ ಜನಾಂಗದವರಿಗೆ ಮತ ಚಲಾಯಿಸಲು ಬಿಡದಿರುವ, ಚಲಾಯಿಸಲಾದ ಮತಗಳಿಗಿಂತ ಹೆಚ್ಚು ಮತಗಳ ಲೆಕ್ಕ ಮತ ಎಣಿಕೆ ಸಮಯದಲ್ಲಿ ಲಭ್ಯವಾಗಿರುವ, ಎಣಿಕೆ ಪ್ರಕ್ರಿಯೆ ಸಮಯದಲ್ಲಿ ರಿಗ್ಗಿಂಗ್ ನಡೆಸಿರುವ ವರದಿಗಳು ಸಹಾ ಬಂದಿವೆ.

ಚುನಾವಣಾ ಪ್ರಚಾರದ ಸಮಯದಲ್ಲೂ ಸಹ ಸೆಪ್ಟೆಂಬರ್ 11 ರಂತೆ ಮತ್ತೆ ಆಲ್‌ಖೈದಾ ದಾಳಿ ಎಸಗುವುದೆಂಬ ಬೆದರಿಕೆಯನ್ನು ಅಮೇರಿಕಾ ಮತದಾರರಿಗೆ ಒಡ್ಡಲಾಗಿದೆ. ಅಮೇರಿಕಾ ಇತಿಹಾಸದಲ್ಲೇ ಮೊದಲ ಬಾರಿಗೆ "ನಾಗರೀಕತೆಗಳ ಸಂಘರ್ಷ" ಎಂಬ ಕುಖ್ಯಾತ "ಹನ್‌ಟಿಂಗ್‌ಟನ್ ತೀಸಿಸ್" ನಿಲುಮೆಯ ಪ್ರತಿಪಾದನೆಯಂತೆ ಧಾರ್ಮಿಕ ಭಾವನೆಗಳನ್ನು ದುರುಪಯೋಗಪಡಿಸಿಕೊಳ್ಳಲು ಕ್ರೈಸ್ತರು ಮತ್ತು ಯೆಹೂದಿಯರನ್ನು ಮುಸ್ಲಿಂರು ಮತ್ತು ಕನ್‌ಫ್ಯೂಶನ್ಸ್ ವಿರುದ್ಧ ಎತ್ತಿಕಟ್ಟುವ ಯತ್ನ ನಡೆಸಿದರು.

ಎರಡನೆ ಭಾರಿಯ ತಮ್ಮ ಅಧಿಕಾರ ಪದಗ್ರಹಣಕ್ಕೂ ಮುನ್ನವೆ ಬುಷ್ ತಮ್ಮ ಮುಂದಿನ ಅವಧಿ ಮತ್ತಷ್ಟು ಆಕ್ರಮಣಕಾರಿಯಾಗಿರಲಿದೆ ಎಂದಿದ್ದಾರೆ. ಅವರ ವಿದೇಶಾಂಗ ಕಾರ್ಯದರ್ಶಿ ಕಾಲಿನ್ ಪೊವೆಲ್ ಸೌಮ್ಯವಾದಿಯಲ್ಲದಿದ್ದರೂ, ಅವರು ಸೌಮ್ಯವಾದಿಯೆಂದು ಬದಲಾಯಿಸಲಾಗಿದೆ. ಅವರ ಸ್ಥಾನಕ್ಕೆ ನೇಮಿಸಲಾಗಿರುವ ಶ್ರೀಮತಿ ಕಾಂಡೊಲಿಜಾ ರೈಸ್ ಅಮೇರಿಕಾದ ಆಳುವವರ್ಗಗಳ ಹಿತಾಸಕ್ತಿ ಪ್ರತಿಪಾದನೆಗೆ ಹೇಳಿಮಾಡಿಸಿದವರೆಂದು ಪರಿಗಣಿಸಲಾಗಿದೆ.


ಬುಶ್ ಜಯಗಳಿಸಿದ್ದಾರೆಂಬ ಘೋಷಣೆಯಾಗುತ್ತಿದ್ದಂತೆ ಉತ್ತರ ಕೋರಿಯಾದ ಅಣು ಶಕ್ತಿ ಕಾರ್ಯಕ್ರಮದ ವಿಷಯ ಪ್ರಸ್ತಾವಿಸಿ ಆ ಸಮಾಜವಾದಿ ರಾಷ್ಟ್ರದ ಮೇಲೆ ಹರಿಯಾಯ್ದಿದ್ದಾರೆ. ಪ್ಯಾಲಿಸ್ಟೇನಿ ಸ್ವತಂತ್ರ ಹೋರಾಟಗಾರರನ್ನು ಮಣಿಸಲು ಪಶ್ಚಿಮ ಏಷ್ಯಾದಲ್ಲಿ ಮತ್ತಷ್ಟು ತೀವ್ರ ಮಧ್ಯಪ್ರವೇಶದ ಮಾತನಾಡಿದ್ದಾರೆ. ಇಸ್ರೇಲಿ ಜಿಯೋನಿಸ್ಟ್ ಪರ ತಮ್ಮ 2002 ರ ನಿಲುಮೆಯ ಪರಿಹಾರವನ್ನೇ ಪ್ರತಿಪಾದಿಸಿದ್ದಾರೆ. ಯಾಸರ್ ಅರಾಫತ್ ಸಾವು ಹಾಗೂ ನಂತರದ ನಾಯಕತ್ವ ಪ್ರಶ್ನೆ ದುರುಪಯೋಗಪಡಿಸಿಕೊಳ್ಳಲು ಮುಂದಾಗಿದ್ದಾರೆ.

ಅಣುಶಕ್ತಿ ನೆಪದಲ್ಲಿ ಇರಾನ್ ಅನ್ನು ಭಯಗ್ರಸ್ತಗೊಳಿಸಲು, ಅದಕ್ಕಾಗಿ ವಿಶ್ವಸಂಸ್ಥೆಯ ಅಂತರಾಷ್ಟ್ರೀಯ ಅಣುಶಕ್ತಿ ಏಜೆನ್ಸಿಯನ್ನು ದುರುಪಯೋಗಿಸಲು ಬುಷ್ ಆಡಳಿತ ಮುಂದಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಬುಷ್ ಎರಡನೇ ಬಾರಿಯ ಆಯ್ಕೆ ವಿಶ್ವಶಾಂತಿಗೆ ದೊಡ್ಡ ಸವಾಲನ್ನೇ ಒಡ್ಡಿದೆ.

ಅಮೇರಿಕಾ ಮಧ್ಯಪ್ರವೇಶ:

ಅಫಘಾನಿಸ್ತಾನದ ಅಧ್ಯಕ್ಷೀಯ ಚುನಾವಣೆ ಸಾಧಾರಣ ಶಾಂತಿಯ ವಾತಾವರಣ ರೂಪಿಸಿದೆ. ಆಂತರಿಕ ದಂಗೆ-ಯುದ್ಧದಿಂದ ಜರ್ಜರಿತವಾದ ಅಫಘಾನಿಸ್ತಾನವನ್ನು ಪುನರ್ ನಿರ್ಮಿಸಲು ಒಂದು ಅವಕಾಶವನ್ನು ಅಫಘನ್ ಜನತೆಗೆ ನೀಡಿದೆ. ಈಗಾಗಲೇ ಈ ಯುದ್ಧವು ಅಲ್ಲಿನ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಮೂಲೆಗುಂಪಾಗಿಸಿದೆ. ಅಮೇರಿಕಾ ಪರ ಅಭ್ಯರ್ಥಿಯೆ ಚುನಾವಣೆಯಲ್ಲಿ ಗೆದ್ದಿರುವುದು.




ಫಿಡೆಲ್ ಕ್ಯಾಸ್ಟ್ರೋ


ಛಾವೇಜ್

ತಮ್ಮ ಪ್ರಜಾಸತ್ತೆಯನ್ನು ಬಲಪಡಿಸಿಕೊಳ್ಳಲು ಅಲ್ಲಿನ ವಿವಿಧ ಜನಾಂಗಗಳಿಗೆ ಅವಕಾಶ ಕಲ್ಪಿಸಲು ಈ ಕೂಡಲೇ ಅಮೇರಿಕಾ ಅಲ್ಲಿಂದ ಹೊರಬರಬೇಕು. ಅದಕ್ಕೆ ಅಮೇರಿಕಾದ ಯುದ್ಧ ಪಿಪಾಸುಗಳು ಅನುವುಗೊಳಿಸುವರೆ ಎಂಬ ಆತಂಕ ಒಂದೆಡೆ ಇದೆ ಮತ್ತೆ ಆಂತರಿಕ ಗಲಭೆ ಸೃಷ್ಟಿಸಿ ಮತ್ತೆ ದೇಶದಿಂದ ಹೊರಹೋಗಲು ಸಾಧ್ಯವಾಗದು ಎಂಬ ಕುಂಟು ನೆಪ ಹೇಳಲು ಅಮೇರಿಕಾಗೆ ನೆರವಾಗಬಹುದು.



ಮಾಜಿ ಸೋವಿಯತ್ ರಾಷ್ಟ್ರವಾದ ಉಕ್ರೇನ್‌ನಲ್ಲಿ ಅಮೇರಿಕಾ ಮೂಗು ತೂರಿಸಿದೆ. ಸೋವಿಯತ್ ನಂತರದ ಕಾಲಘಟ್ಟದಲ್ಲಿ ಉಕ್ರೇನ್ ಅಮೇರಿಕಾದೊಂದಿಗೆ ಇದೆ. ಇರಾಕ್‌ಗೂ ಸಹ ಸೈನ್ಯ ಕಳುಹಿಸಿತ್ತು. ಆದರೂ ಅದು ಅಮೇರಿಕಾಗೆ ಸಾಕಾಗಿಲ್ಲ. ತನ್ನ ನೇರ ಪ್ರತಿನಿಧಿಯನ್ನು, ಈ ಹಿಂದೆ ಜಾರ್ಜಿಯಾದಲ್ಲಿ ಪ್ರತಿಸ್ಥಾಪಿಸಿದಂತೆ, ಇಲ್ಲೂ ನಡೆಸಿದೆ. ಎನ್‌ಎಟಿಒ ಯುದ್ಧ ಮೈತ್ರಿಕೂಟವನ್ನು ಪೂರ್ವಕ್ಕೆ ವಿಸ್ತರಿಸುವ ಯತ್ನದ ಭಾಗವಾಗಿ ಅಮೇರಿಕಾ ಇದನ್ನು ನಡೆಸಿದೆ. ಇದರಿಂದಾಗಿ ರಷ್ಯನ್ ಒಕ್ಕೂಟಕ್ಕೆ ತಲೆನೋವು ಹೆಚ್ಚಾದಂತಾಗಿದೆ. ವಿಶ್ವಶಾಂತಿಗಾಗಿ ಇತರೆ ರಾಷ್ಟ್ರಗಳನ್ನು ಅಣಿನೆರೆಸುವ ಮೂಲಕ ರಷ್ಯ ಒಕ್ಕೂಟವು ಈ ಅಪಾಯವನ್ನು ಎದುರಿಸಬಹುದು. ಶಾಂಗಾಯ್-6 ರ ಮತ್ತಷ್ಟು ಬಲಗೊಳಿಸುವಿಕೆ ಮತ್ತು ವಿಸ್ತರಣೆ ಈ ಅಪಾಯವನ್ನು ಎದುರಿಸಲು ಸಹಕಾರಿಯಾಗಬಹುದು. -

ಐರೋಪ್ಯ ಒಕ್ಕೂಟ ವಿಸ್ತರಣೆ:

ಐರೋಪ್ಯ ಒಕ್ಕೂಟ ತನ್ನ ಸದಸ್ಯ ರಾಷ್ಟ್ರಗಳ ಸಂಖ್ಯೆಯನ್ನು 15 ರಿಂದ 25 ಕ್ಕೆ ಹೆಚ್ಚಿಸಿಕೊಳ್ಳುವ ಮೂಲಕ ವಿಸ್ತರಣೆಗೊಂಡಿದೆ. ಈ ಹೊಸ ಸದಸ್ಯರಲ್ಲಿ ಮಾಜಿ ಸಮಾಜವಾದಿ ರಾಷ್ಟ್ರಗಳು ಹಾಗೂ ಸೋವಿಯತ್ ರಾಷ್ಟ್ರಗಳು ಎಂಬುದನ್ನು ಗಮನಿಸಬೇಕು. ಟರ್ಕಿ ಮತ್ತಿತರು ಸೇರುವ ಹಾದಿಯಲ್ಲಿದ್ದಾರೆ. 37 ಕೋಟಿ 50 ಲಕ್ಷದ ಐರೋಪ್ಯ ಒಕ್ಕೂಟದ ಜನಸಂಖ್ಯೆ 45 ಕೋಟಿಗೆ ಹೆಚ್ಚಿದೆ. ಅದರೆ ಅದರ ಒಟ್ಟಾರೆ ಉತ್ಪನ್ನ ಕೇವಲ ಶೇ.5 ರಷ್ಟು ಹೆಚ್ಚಿದೆ.

ಅಮೇರಿಕಾವು ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳನ್ನು ತನ್ನ ಹಿತ್ತಲಾಗಿಸಿಕೊಂಡಿದ್ದಂತೆ ಐರೋಪ್ಯ ಒಕ್ಕೂಟದಲ್ಲಿ ಸಹ ಮುಂದುವರಿದ ಪಶ್ಚಿಮ ಯುರೋಪ್ ರಾಷ್ಟ್ರಗಳು ಹಿಂದುಳಿದ ಪೂರ್ವ ಯುರೋಪಿನ ರಾಷ್ಟ್ರಗಳು ಮತ್ತು ಮಾಜಿ ಸೋವಿಯತ್ ರಾಷ್ಟ್ರಗಳನ್ನು ತನ್ನ ಹಿತ್ತಲಾಗಿಸಿಕೊಳ್ಳಲಿವೆ. ಅಲ್ಲಿನ ಹಗ್ಗದ ಸಂಪನ್ಮೂಲ ಹಾಗೂ ಶ್ರಮಿಕರನ್ನು ಶೋಷಿಸಲಿದೆ. ಇದು ಪರೋಕ್ಷವಾಗಿ ತೃತೀಯ ಜಗತ್ತಿನ ಶ್ರಮಿಕರು ಹಾಗೂ ಸಂಪನ್ಮೂಲದ ಬೇಡಿಕೆಯನ್ನು ಕುಗ್ಗಿಸಲಿದೆ. ಉದಾಹರಣೆಗೆ ಜೆಕ್ ಗಣರಾಜ್ಯದ ಜವಳಿ ವಸ್ತುಗಳಿಗೆ ಐರೋಪ್ಯ ಒಕ್ಕೂಟದ ಮಾರುಕಟ್ಟೆಯಲ್ಲಿ ಆದ್ಯತೆ ಕೊಡಲಾಗುವುದೆಂದು ಹೇಳಲಾಗುತ್ತಿದೆ. ಹಾಗಾದಲ್ಲಿ ಭಾರತ ಹಾಗೂ ಪಾಕಿಸ್ತಾನದ ಜವಳಿಗೆ ಪೆಟ್ಟು ಬೀಳಲಿದೆ.

ಐರೋಪ್ಯ ಒಕ್ಕೂಟದ ಬಲಗೊಳ್ಳುವಿಕೆ ಅಮೇರಿಕಾಗೂ ಹೊಡೆತ ನೀಡಲಿದೆ. ಅಮೇರಿಕಾದ ಆರ್ಥಿಕತೆ ಸುಧಾರಿಸುತ್ತಿದೆ ಎಂದರು ಸಹ ಅದು ನಿರೀಕ್ಷಿತ ಪ್ರಮಾಣದಲ್ಲಿಲ್ಲ. ಪರಿಣಾಮವಾಗಿ ಐರೋಪ್ಯ ಒಕ್ಕೂಟ ಮತ್ತು ಜಪಾನ್‌ನ ಸವಾಲು ಆರ್ಥಿಕವಾಗಿ ಅಮೇರಿಕಾಗೆ ಹೆಚ್ಚಲಿದೆ. ಅಮೇರಿಕಾ ಯಜಮಾನಿಕೆ ತನ್ನ ಮಿಲಿಟರಿ ಪ್ರಾಬಲ್ಯದಿಂದಾಗಿ ಮುಂದಿದೆ. ಆದರೂ ಅದರ ಆರ್ಥಿಕತೆ ಸರಿಹೋಗದೆ ಆದರ ಯಜಮಾನಿಕೆ ಎಷ್ಟು ಕಾಲ ನಡೆಯಲಿದೆ ಎಂಬುದು ಪ್ರಶ್ನೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಜರ್ಮನಿ ಮತ್ತು ಫ್ರಾನ್ಸ್ ಅಮೇರಿಕಾ ನಿಲುಮೆಯನ್ನು ಬೆಂಬಲಿಸಲಿಲ್ಲ. ತನ್ನ ಸೈನ್ಯವನ್ನು ಇರಾಕ್‌ಗೆ ಕಳುಹಿಸಲಿಲ್ಲ. ಜೊತೆಗೆ ಐದು ವರ್ಷಗಳ ಹಿಂದೆಯೇ ಐರೋಪ್ಯ ಒಕ್ಕೂಟವು ತನ್ನದೆ ಆದ

ಪುಟ 11 ಕ್ಕೆ


ಭಾರತ- ಪಾಕ್ ಮಾತುಕತೆ:

2004 ಭಾರತ- ಪಾಕ್ ಮಾತುಕತೆ ಮುನ್ನಡೆದಿರುವ ಸಂಬಂಧ ಸುಧಾರಣೆಯ ವರ್ಷವಾಗಿಯೂ ನಮ್ಮ ಮುಂದಿದೆ. 2003 ರಲ್ಲಿ ಆರಂಭವಾದ ಮಾತುಕತೆ ಸರಿದಿಕ್ಕಿನಲ್ಲಿ 2004 ರಲ್ಲಿ ಅದರಲ್ಲೂ ಕೋಮುವಾದಿ ಬಿಜೆಪಿ ಸರ್ಕಾರ ಹೊರಹೋದ ನಂತರ ನಡೆದಿರುವುದು ಪ್ರಮುಖ.

ಎರಡೂ ರಾಷ್ಟ್ರಗಳು ಕಡಿಮೆ ಸಂಕೀರ್ಣ ವಿಷಯಗಳನ್ನು ಮೊದಲು ಮಾತುಕತೆ ಮೂಲಕ ಪರಿಹರಿಸಿ, ಜನರ-ಜನರ ನಡುವಿನ ಸಂಬಂಧ ಸುಧಾರಿಸಿ, ದ್ವಿಪಕ್ಷೀಯ ವಿಶ್ವಾಸವನ್ನು ವೃದ್ಧಿಸುವ ಕಾರ್ಯ ನಡೆದಿದೆ. ಇದನ್ನೇ ಸಿಪಿಐ(ಎಂ) ಒತ್ತಾಯಿಸುತ್ತಾ ಬಂದಿದ್ದು ಆದರೂ ಸಮಸ್ಯೆಗಳಿವೆ. ಎರಡೂ ರಾಷ್ಟ್ರಗಳು ತಮ್ಮ ನೆಚ್ಚಿನ ವಿಷಯಗಳಿಗೆ ಅಂಟಿಕೊಂಡು ಉದಾಹರಣೆಗೆ ಪಾಕ್‌ಗೆ ಕಾಶ್ಮೀರ್ ವಿಷಯ ಭಾರತಕ್ಕೆ ಗಡಿಯಾಚೆಗಿನ ಭಯೋತ್ಪಾದಕತೆ ಕೆಲವೊಮ್ಮೆ ಪ್ರಧಾನವಾಗಿ ಮಾತುಕತೆಯನ್ನು ಹಾದಿ ತಪ್ಪಿಸುವ ಸಾಧ್ಯತೆ ಇದೆ. ಆದರೆ ಮಾತುಕತೆಯ ಪ್ರಕ್ರಿಯೆ ಹಾದಿ ತಪ್ಪದಂತೆ ಹಾಗೂ ಸಾಮ್ರಾಜ್ಯಶಾಹಿಗಳು ಅದರ ದುರ್ಲಾಭ ಪಡೆಯದಂತೆ ಎರಡೂ ರಾಷ್ಟ್ರಗಳು ಎಚ್ಚರವಹಿಸಬೇಕಿದೆ.

ದಕ್ಷಿಣ ಏಷ್ಯಾ ಹಾಗೂ ಅಭಿವೃದ್ಧಿ ಸಾರ್ಕ್ ಅನ್ನು ಅರ್ಥಪೂರ್ಣಗೊಳಿಸಲು ಭಾರತ-ಪಾಕ್ ಮಾತುಕತೆ-ಸಂಬಂಧ ಸುಧಾರಣೆ ಉತ್ತಮ ಕೊಡುಗೆ ನೀಡಲಿದೆ. ವಿಶ್ವ ವಿದ್ಯಮಾನಗಳ ಲೆಕ್ಕದಲ್ಲೂ ಸಹ ಭಾರತ-ಪಾಕ್ ಎರಡೂ ಅಣ್ವಸ್ತ್ರ ರಾಷ್ಟ್ರವಾಗಿರುವ ಕಾರಣ ಈ ಮಾತುಕತೆ ಸಂಬಂಧ ಸುಧಾರಣೆ ಕೊಡುಗೆ ನೀಡಲಿದೆ.

ಈ ನಿಟ್ಟಿನಲ್ಲಿ 2005 ಅನ್ನು ಸ್ವಾಗತಿಸೋಣ.



ಶತಮಾನದ ಅತ್ಯಂ
ಕಡಲು ಅಬ್ಬರಿಸಿ ಅಟ್ಟಿಸಿಕೆ

ಜಗತ್ತಿನಲ್ಲೇ ಅತ್ಯಂತ ಭೀಕರ ಪ್ರಾಕೃತಿಕ ದುರಂತ ಪುನಃ ನಮ್ಮ ದೇಶದ ಪೂರ್ವ ಕರಾವಳಿಯಲ್ಲಿ ಸಂಭವಿಸಿದೆ. ಸುನಾಮಿ ಎಂದು ಕರೆಯಲಾಗುವ ಈ ದುರಂತ ಭಾರತ ಮಹಾಸಾಗರದಲ್ಲಿ ಅಪರೂಪ. ಭಾರತ, ಶ್ರೀಲಂಕಾ, ಇಂಡೋನೇಶ್ಯಾ, ಥ್ಯಾಲೆಂಡಿನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಬಲಿತೆಗೆದುಕೊಂಡ ಈ ದುರಂತದ ಬಗ್ಗೆ ಏಳುವ ಪ್ರಶ್ನೆಗಳ ಉತ್ತರ ನೀಡುವ ಪ್ರಯತ್ನ ಇದು.

ಶರತ್‌ಚಂದ್ರ


ಹಡೆದೊಡಲು ಹುಡಿಯಾದಾಗ.....

ಇತ್ತೀಚಿನ ಸುನಾಮಿ ದುರಂತದಲ್ಲಿ ನಡೆದದ್ದು ಏನು?

ಡಿಸೆಂಬರ್ 26ರ ಭಾನುವಾರದ ಸುನಾಮಿ ದುರಂತದ ಮೂಲ ಉತ್ತರ ಇಂಡೋನೇಶ್ಯಾದ (ಸುಮಾತ್ರ ದ್ವೀಪದ) ಅಸೆಳ್ ಪ್ರಾಂತ್ಯದ ಬಳಿ ಸಾಗರತಳದಲ್ಲಿ ನಡೆದ ಭೂಕಂಪ. ಈ ಭೂಕಂಪದ ಕೇಂದ್ರ ಚೆನ್ನೈನಿಂದ ಸುಮಾರು ಎರಡು ಸಾವಿರ ಕಿ.ಮೀ. ದೂರದಲ್ಲಿದೆ. ಈ ಭೂಕಂಪ ಒಂದು ಶತಮಾನಗಳ ಕಾಲದಲ್ಲೇ ಅತ್ಯಂತ ತೀವ್ರವಾದ ಭೂಕಂಪವಾಗಿತ್ತು.

ಭೂಕಂಪಗಳನ್ನು ಅಳೆಯುವ ರಿಕ್ಟರ್ ಮಾಪನದಲ್ಲಿ 8.9 ಆಗಿತ್ತು. ರಿಕ್ಟರ್ ಮಾಪಕದಲ್ಲಿ 10 ಅತ್ಯಂತ ಹೆಚ್ಚಿನ ಸಂಖ್ಯೆ. 8-9 ಅತ್ಯಂತ ತೀವ್ರ ಭೂಕಂಪ ಎಂದು ಪರಿಗಣಿಸಲಾಗುತ್ತದೆ. 6ಕ್ಕಿಂತ ಹೆಚ್ಚು ರಿಕ್ಟರ್‌ನ ಭೂಕಂಪಗಳು ತೀವ್ರ ಎಂದು ಪರಿಗಣಿಸಲಾಗುತ್ತದೆ. ರಿಕ್ಟರ್ 6 ಕ್ಕಿಂತ ಹೆಚ್ಚಿನ ಭೂಕಂಪಗಳು ಕಳೆದ ಒಂದು ಶತಮಾನದಲ್ಲಿ ಸಂಭವಿಸಿರುವುದು ಇಪ್ಪತ್ತು. ರಿಕ್ಟರ್ 8ಕ್ಕಿಂತ ಹೆಚ್ಚಿನ ಭೂಕಂಪ ಸಂಭವಿಸಿರುವುದು ನಾಲ್ಕು. ಭೂಕಂಪ ಸಂಭವಿಸಿದ ಕೇಂದ್ರದಿಂದ ಕೇವಲ ಮೂರು ಗಂಟೆಗಳಲ್ಲಿ ಶ್ರೀಲಂಕಾ ಮತ್ತು ಭಾರತದ ಪೂರ್ವ ಕರಾವಳಿ (ತಮಿಳುನಾಡು)ನ್ನು ಸುನಾಮಿಯ ದೈತ್ಯ ಅಲೆಗಳು ಮುಟ್ಟಿದ್ದವು. ಅಂಡಮಾನ್ ನಿಕೋಬಾರ್ ದ್ವೀಪವನ್ನೂ ಮುಟ್ಟಿದ್ದವು. ಇಂಡೋನೇಶ್ಯಾ ಮತ್ತು ಥ್ಯಾಲೆಂಡಿನ ತೀರವನ್ನು ಇನ್ನೂ ಮೊದಲೇ ಮುಟ್ಟಿದ್ದವು. ತಮಿಳುನಾಡು, ಅಂಡಮಾನ್- ನಿಕೋಬಾರ್ ಮತ್ತು ಶ್ರೀಲಂಕಾದ ಕಡಲ ತೀರದಲ್ಲಿ ಹಲವು ಕಡೆ 20 ಮೀಟರ್ ಎತ್ತರದ ಅಲೆಗಳು ಭಾರಿ ವೇಗದಲ್ಲಿ ನುಗ್ಗಿ ಭಾರಿ ಹಾನಿ ಮಾಡಿದವು. ಹಲವು ಕಡೆ ನೂರಾರು ಮೀಟರ್‌ಗಳಷ್ಟು ಸಾಗರದ ನೀರು ತೀರ ಪ್ರದೇಶದ ಒಳಗೆ ನುಗ್ಗಿ ಕೆಲವು ದಿನಗಳವರೆಗೆ ನೀರಲ್ಲಿ ಮುಳುಗಿದ್ದವು. ದೈತ್ಯ ಅಲೆಗಳ ಅಪ್ಪಳಿಸುವ ಭೀಕರ ಶಕ್ತಿಗೆ ತುತ್ತಾಗಿ ಹಲವು ಮನೆ-ಕಟ್ಟಡಗಳು ಕುಸಿದವು. ಬೀಳುವ ಕಟ್ಟಡಗಳ ಅಡಿಯಲ್ಲಿ ಸಿಕ್ಕಿ, ನೀರಲ್ಲಿ ಮುಳುಗಿ ಅಥವಾ ಕೊಚ್ಚಿ ಹೋಗಿ ಹೆಚ್ಚಿನ ಸಾವು-ನೋವು ಸಂಭವಿಸಿದೆ. ಕಡಲ ತೀರದಲ್ಲಿರುವ ಹಲವು ಸಣ್ಣ ದ್ವೀಪಗಳು ಪೂರ್ಣವಾಗಿ ಮುಳುಗಿ ಹೋಗಿವೆ. ಭಾರತ ಮಹಾಸಾಗರದಲ್ಲಿ ಇರುವ ಮಾಲ್‌ಡೀವ್ಸ್ ದ್ವೀಪ ಮೂರನೇ ಒಂದು ಭಾಗ ನೀರಲ್ಲಿ ಮುಳುಗಿತ್ತು. ದೂರದ ಆಫ್ರಿಕಾದ ಸೊಮಾಲಿಯಾದಲ್ಲಿ ನೂರಾರು ಜನ ಸಾವಿಗೀಡಾದರು. ಭಾರತದ ದಕ್ಷಿಣ-ಪಶ್ಚಿಮ ಕರಾವಳಿ (ಕೇರಳ, ದಕ್ಷಿಣ ಕನ್ನಡ ಜಿಲ್ಲೆ)ಯಲ್ಲೂ ಹಲವು ಕಡೆ ದೈತ್ಯ ಅಲೆಗಳು ತೀರಕ್ಕೆ ನುಗ್ಗಿ ಹಾನಿ ಮಾಡಿವೆ.

ಸುನಾಮಿ ಅಪರೂಪದ ದುರಂತವೇ?

ಇಡೀ ಜಗತ್ತಿನ ಎಲ್ಲಾ ಸಾಗರಗಳನ್ನು ತೆಗೆದುಕೊಂಡರೆ ಸುನಾಮಿ ಅಷ್ಟೇನೂ ಅಪರೂಪ ಪ್ರಾಕೃತಿಕ ದುರಂತವಲ್ಲ. ಹತ್ತು ಸಾವಿರಕ್ಕೂ ಹೆಚ್ಚು ಸಾವಿಗೆ ಕಾರಣವಾದ ದಾಖಲಾದ 13 ಸುನಾಮಿ ದುರಂತಗಳು ಸಂಭವಿಸಿವೆ. ಇವುಗಳಲ್ಲಿ ಹತ್ತು ಶಾಂತ ಸಾಗರದಲ್ಲಿ ಸಂಭವಿಸಿವೆ. ಉಳಿದ ಮೂರು ಭಾರತ ಮಹಾಸಾಗರ, ಅಟ್ಲಾಂಟಿಕ್ ಮತ್ತು ಮೆಡಿಟರೇನಿಯನ್ ಸಾಗರದಲ್ಲಿ ಸಂಭವಿಸಿವೆ. ಈ 13 ದುರಂತಗಳಲ್ಲಿ 6 ದುರಂತಗಳ ಮೂಲ ಜಪಾನಿನ ಬಳಿ ಇತ್ತು. ಭಾರತ ಮಹಾಸಾಗರದಲ್ಲಿ ಭಾರಿ ಸಾವು-ನೋವು ಉಂಟುಮಾಡಿದ ಸುನಾಮಿ ಇದೇ ಮೊದಲನೆಯದಾದರೂ, ಎರಡು ಬಾರಿ ಭಾರತ ಸುನಾಮಿ ಕಂಡಿದೆ. ಇಡೀ ದೇಶ 1941ರಲ್ಲಿ ಒಂದು ಬಾರಿ, ಹಿಂದೆ 1881ರಲ್ಲಿ ಒಂದು ಬಾರಿ, 1941ರಲ್ಲಿ ಸುನಾಮಿ ಪಶ್ಚಿಮ ಕರಾವಳಿಗೆ ಬಡಿದಿತ್ತು. ಕರಾಚಿ, ಮುಂಬಯಿ ಯಿಂದ ಹಿಡಿದು ಕಾರವಾರದ ಕರಾವಳಿಯಾಚೆಗೆ ದೈತ್ಯ ಅಲೆಗಳು ಕಂಡುಬಂದಿದ್ದವು.

ಶಾಂತ ಸಾಗರದಲ್ಲಿ ಆಗಾಗ ಬರುವ ಸುನಾಮಿ ಯಾಗುವ ಶೀಘ್ರ ಅಪಾಯದ ಮುನ್ನೆಚ್ಚರಿಕೆ ವ್ಯವಸ್ಥೆ ರೂಪಿಸಲಾಗಿದ್ದು ಸಾವು-ನೋವುಗಳ ಸಂಖ್ಯೆ ಕಡಿಮೆಯಾಗಿದೆ. ಕಂಪ್ಯೂಟರ್-ಮಾದರಿಗಳ ಮೂಲಕ ಯಾವ ತೀರ ಪ್ರದೇಶಗಳಿಗೆ ಅಪ್ಪಳಿಸಬಹುದು ಎಂಬುದನ್ನು ಗುರುತಿಸುವುದು. ಇಂತಹ ವ್ಯವಸ್ಥೆಗೆ ಸ್ವಾಭಾವಿಕವಾಗಿ ಒಂದು ಸಾರಗದ ಅಂಚಿನಲ್ಲಿರುವ ಎಲ್ಲಾ ದೇಶಗಳು ಸಹಕರಿಸಬೇಕಾಗುತ್ತದೆ. ಸಮಗ್ರ ವ್ಯವಸ್ಥೆ, ಸಂಪರ್ಕ ರೂಪಿಸಬೇಕಾಗುತ್ತದೆ. ಇಂತಹ ವ್ಯವಸ್ಥೆಯನ್ನು 26 ಶಾಂತಸಾಗರದ ಅಂಚಿನ ದೇಶಗಳೂ ರೂಪಿಸಿವೆ.

ಭಾರತ ಮಹಾಸಾಗರದಲ್ಲಿ ಸುನಾಮಿ ಅಪರೂಪವಾದದ್ದರಿಂದ ಇಂತಹ ವ್ಯವಸ್ಥೆಗೆ ಯಾರೂ ಗಮನ ಕೊಟ್ಟಿರಲಿಲ್ಲ. ಆದರೂ ಭೂಕಂಪ ಮಾಪನ/ದಾಖಲೆ ವ್ಯವಸ್ಥೆ ವ್ಯಾಪಕವಗಿದ್ದು ಈ ಭೂಕಂಪವನ್ನು ಗುರುತಿಸಲಾಗಿತ್ತು. ಸುನಾಮಿ ದುರಂತ ಮುನ್ನೆಚ್ಚರಿಕೆ ವ್ಯವಸ್ಥೆಯ ಇನ್ನೆರಡು ಭಾಗಗಳು ಇಲ್ಲದಿದ್ದರೂ, ಸುನಾಮಿ ದುರಂತ ಊಹಿಸಬಹುದಿತ್ತು. ಎಲ್ಲಾ ಸಾಗರವಾದ ಭೂಕಂಪಗಳು ಸುನಾಮಿ ಅಲೆಗಳನ್ನು ಉಂಟು ಮಾಡುವುದಿಲ್ಲ. ಆದರೂ ಭೂಕಂಪದ ತೀವ್ರತೆ ಗಮನಿಸಿ, ನೇರವಾಗಿ ತೀರದ ಪ್ರದೇಶಗಳಲ್ಲಿ ಜನರನ್ನು ಸ್ಥಳಾಂತರಿಸಬಹುದಿತ್ತು ಎಂದು ಹಲವು ತಜ್ಞರ ಅಭಿಪ್ರಾಯ. ಅಲ್ಲದೆ, ಭೂಕಂಪ ದಾಖಲೆಯ ನಂತರ ಸುಮಾರು ಮೂರು ಗಂಟೆಯಷ್ಟು ಸಮಯ ಇತ್ತು. - ಭಾರತ ಶ್ರೀಲಂಕಾದ ತೀರದಲ್ಲಿ ಪ್ರಮುಖ ಕಾರ್ಯಚರಣೆ ಕೈಗೊಳ್ಳಲು ಎಂದು ಹಲವು ತಜ್ಞರ ಅಭಿಪ್ರಾಯ. ಮುಖ್ಯವಾಗಿ ಪ್ರಾಕೃತಿಕ ದುರಂತಗಳ ಬಗ್ಗೆ ಮಾಹಿತಿ ವಿನಿಮಯ ಮತ್ತು ಪೂರ್ವ ಕಾರ್ಯಾಚರಣೆಯ ಬಗ್ಗೆ ವ್ಯವಸ್ಥೆ ಇಲ್ಲದಿರುವುದೇ ಕಾರಣ.

ಮುನ್ನೆಚ್ಚರಿಕೆ ವ್ಯವಸ್ಥೆ ಭಾಗವಾಗಿ, ಮುನ್ನೆಚ್ಚರಿಕೆ ದೊರೆತ ಕೂಡಲೇ ಶೀಘ್ರವಾಗಿ ಜನರಿಗೆ ಅಪಾಯ ಸೂಚನೆ ನೀಡಿ ಅವರನ್ನು ಸ್ಥಳಾಂತರಿಸಲು ಅಗತ್ಯ ಸಂಪನ್ಮೂಲಗಳ ಸಿದ್ಧತೆ, ಆ ಬಗ್ಗೆ ತರಬೇಕಾದ ಆಡಳಿತಾತ್ಮಕ ಯಂತ್ರವೂ ಅಷ್ಟೇ ಅಗತ್ಯ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಸುನಾಮಿ ಅಥವಾ

ಸುನಾಮಿ ದುರಂತದ ಸಾವು-ನೋವು ತಡೆಯಬಹುದಿತ್ತೆ?

ಭಾರತ ಮಹಾಸಾಗರದಲ್ಲಿ ಸಂಭವಿಸಿದ ಮೊದಲ ದೊಡ್ಡ ಸುನಾಮಿ ದುರಂತದ ಸಾವು-ನೋವು ತಡೆಯಬಹುದಿತ್ತೆ? ಈ ಪ್ರಶ್ನೆ ಎಲ್ಲೆಡೆಗೂ ಕೇಳಲಾಗುತ್ತಿದೆ. ಸರಳ ಉತ್ತರ ಹೌದು. ಶಾಂತಸಾಗರದಲ್ಲಿ ಸುನಾಮಿ ದುರಂತದ ಅಪಾಯದ ಮುನ್ನೆಚ್ಚರಿಕೆ ವ್ಯವಸ್ಥೆ ಭಾರತದ ಮಹಾಸಾಗರಕ್ಕೂ ರೂಪಿಸಿದರೆ, ಜನರನ್ನು ಅಪಾಯದ ಸ್ಥಳಗಳಿಂದ ಸ್ಥಳಾಂತರಿಸಿದ್ದರೆ ಒಂದು ಅಂದಾಜಿನ ಪ್ರಕಾರ ಶೇಕಡಾ 90 ಜೀವಗಳನ್ನು ಉಳಿಸಬಹುದಿತ್ತು.

ಸುನಾಮಿ ಅಪಾಯ ಮುನ್ನೆಚ್ಚರಿಕೆ ವ್ಯವಸ್ಥೆಯಲ್ಲಿ ಮೂರು ಭಾಗಗಳಿವೆ. ಮೊದಲನೆಯದು ಭೂಕಂಪ ಮತ್ತು ಅದರ ತೀವ್ರತೆ ದಾಖಲಿಸುವಂತಹುದು. ಎರಡನೆಯದು ಸಾಗರದಲ್ಲಿ ನೀರಿನ ಮಟ್ಟ ಏರಿಕೆ, ಸಾಗರದೊಳಗೆ ನೀರಿನ ಒತ್ತಡ ಮತ್ತು ಅಲೆಗಳ ವೇಗ ಉದ್ದಗಳ ಅಳತೆ. ಮೂರನೆಯ ಭಾಗ ಸುನಾಮಿ ದೈತ್ಯ ಅಲೆಗಳು ಯಾವ ಕಡೆ ಚಲಿಸಬಹುದು ಎಂಬ ಬಗ್ಗೆ

ಹತ್ತು ಸಾವಿರಕ್ಕೂ ಹೆಚ್ಚು ಬಲಿ ತೆಗೆದುಕೊಂಡ ಅತ್ಯಂತ ಭೀಕರ ಹತ... ದುರಂತಗಳ ವಿವರ ಇಲ್ಲಿದೆ. ದುರಂತದ ವರ್ಷ/ ತಿಂಗಳು, ಮು... ಸಾವು-ನೋವು ಸಂಖ್ಯೆ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

	ಅವಧಿ	ಮೂಲ	ಸಾ
1.	ಡಿಸೆಂಬರ್ 2004	ಸುಮಾತ್ರಾ	1 ಲಕ್ಷ 20
2.		ಗ್ರೀಸ್	
3.	ನವೆಂಬರ್ 1755	ಪೋರ್ಚುಗಲ್	
4.	ಮೇ 1782	ತೈವಾನ್	
5.	ಅಗಸ್ಟ್ 1883	ಜಪಾನ್	3
6.	ಸೆಪ್ಟೆಂಬರ್ 1498	ಜಪಾನ್	
7.	ಅಕ್ಟೋಬರ್ 1707	ಜಪಾನ್	
8.	ಜೂನ್ 1896	ಜಪಾನ್	
9.	ಅಗಸ್ಟ್ 1898	ಚಿಲಿ	
10	ಮೇ 1293	ಜಪಾನ್	



ಸುನಾಮಿ ಎಂದರೇನು?

ಸುನಾಮಿ ಜಪಾನಿ ಭಾಷೆಯ ಒಂದು ಶಬ್ದ. ಸು ಎಂದರೆ ಬಂದರು, ನಾಮಿ ಎಂದರೆ ಅಲೆಗಳು. ಶಾಂತ ಸಾಗರದಲ್ಲಿ ಜಪಾನಿನ ಸುತ್ತ ಮುತ್ತ ಸಾಮಾನ್ಯವಾದ ದೈತ್ಯ ಕಡಲ ಅಲೆಗಳ ಸರಣಿಗೆ ಸುನಾಮಿ ಎನ್ನುತ್ತಾರೆ. ಸುನಾಮಿ ಸಾಮಾನ್ಯವಾಗಿ ಕಡಲ ತಳದಲ್ಲಿ ಸಂಭವಿಸುವ ತೀವ್ರ ಭೂಕಂಪ ಅಥವಾ ಜ್ವಾಲಾಮುಖಿ ಭುಗಿಲೆದ್ದಾಗ ಕಡಲಲ್ಲಿ ಏಳುವ ದೈತ್ಯ ಅಲೆಗಳು ವೇಗವಾಗಿ ಧಾವಿಸಿ ಕಡಲತೀರಗಳಿಗೆ ಅಪ್ಪಳಿಸಿದಾಗ ಉಂಟಾಗುತ್ತವೆ. ಸುನಾಮಿ ಕಡಲ ತೀರಕ್ಕೆ ಅಪ್ಪಳಿಸಿದಾಗ ಇಪ್ಪತ್ತು - ಮೂವತ್ತು ಮೀಟರ್ ಎತ್ತರದ ದೈತ್ಯ ಅಲೆಗಳೊಂದಿಗೆ ಕಡಲ ತೀರ ಪ್ರವೇಶಿಸಿ ಭಾರಿ ಸಾವು- ನೋವು ಹಾನಿ ಉಂಟು ಮಾಡಬಹುದು. ಭೂಕುಸಿತ ಅಥವಾ ಭಾರಿ ಸ್ಫೋಟಗಳು ಸುನಾಮಿಯನ್ನು ಉಂಟು ಮಾಡಬಹುದು. ಸಾಗರ ತಳದಲ್ಲಿ ಅಣುಸ್ಫೋಟ, ಅಂತರಿಕ್ಷ ಕಾಯಗಳು ಬೀಳುವುದರಿಂದಲೂ ಸುನಾಮಿ ಉಂಟಾಗಬಹುದು. ಆದರೆ ಇದು ಸುಂಟರಗಾಳಿ, ಬಿರುಗಾಳಿ, ಚಂಡಮಾರುತಗಳಿಂದ ಭಿನ್ನವಾದದ್ದು. ಸುನಾಮಿ ಭೂಕಂಪದ ಮೂಲದಲ್ಲಿ 500-600 ಕಿ.ಮೀ. ನಷ್ಟು ವೇಗದಲ್ಲಿ ಮೀಟರ್ ಕಿಂತ ಕಡಿಮೆ ಉತ್ತರದ ಅಲೆಗಳಾಗಿರಬಹುದು. ಆದರೆ ಕೆಲವೇ ಗಂಟೆಗಳಲ್ಲಿ ಸಾವಿರಾರು ಕಿ.ಮೀ. ಚಲಿಸಿ ಕಡಲ ತೀರ ಅಪ್ಪಳಿಸಿರುವ ವೇಗ ಕಡಿಮೆಯಾಗುತ್ತದೆ. (40-50 ಕಿ.ಮೀ.). ಆದರೆ ಅಲೆಗಳ ಎತ್ತರ 20-30 ಮೀಟರ್‌ನಷ್ಟಾಗಬಹುದು. ಈ ವೇಗ ಮತ್ತು ಅಲೆಗಳ ಎತ್ತರವೇ ಸುನಾಮಿ ಅಲೆಗಳಿಗೆ ದೈತ್ಯ ವಿನಾಶಕ ಶಕ್ತಿ ಕೊಡುವುದು.





ಭಾರಿ ಪ್ರಾಕೃತಿಕ ದುರಂತದ ಸಂದರ್ಭದಲ್ಲಿ ಶೀಘ್ರ ಮತ್ತು ತಕ್ಕ ಪರಿಹಾರ ಕಾರ್ಯಕ್ಕೆ ಧುಮುಕುವ ವ್ಯವಸ್ಥೆಯೇ ನಮ್ಮಲ್ಲಿ ದುರ್ಬಲವಾಗಿದೆ. ಸಾವಿರಾರು ಸಂಖ್ಯೆಯಲ್ಲಿ ಜನರನ್ನು ಸಂತ್ರಸ್ತ ಪ್ರದೇಶಗಳಿಗೆ ದೂರದ ಸ್ಥಳಗಳಿಗೆ ಸಾಗಿಸಲು ಬೇಕಾದ ವ್ಯವಸ್ಥೆ ಯಾವಾಗಲೂ ದುರ್ಬಲ. ದೊಡ್ಡ ಸಂಖ್ಯೆಯ ಜನರನ್ನು ಸಂತ್ರಸ್ತ ಪ್ರದೇಶಗಳಲ್ಲಿ ರಕ್ಷಿಸುವುದು, ತಾತ್ಕಾಲಿಕ ಆಹಾರ/ ವಸತಿ/ ಬಟ್ಟೆ ಒದಗಿಸುವುದರಲ್ಲೂ ಸಾಕಷ್ಟು ಲೋಪದೋಷಗಳು ಇವೆ. ಇಂತಹ ಪ್ರಾಕೃತಿಕ ದುರಂತಗಳಲ್ಲಿ ಸಾಮಾನ್ಯವಾದ ಭಾರಿ ಸಂಖ್ಯೆಯ ಶವಗಳನ್ನು ಸಾಗಿಸಿ ಸುಡುವ ವ್ಯವಸ್ಥೆಯೇ ದೊಡ್ಡ ಸವಾಲು. ಅಲ್ಲದೆ ಕೊಳೆತು

ಇಂತಹ ದೌರ್ಬಲ್ಯಗಳು ಬೇರೆ ಪ್ರಾಕೃತಿಕ ದುರಂತಗಳಂತೆ ಈ ಸುನಾಮಿ ದುರಂತದಲ್ಲೂ ಬೆಳಕಿಗೆ ಬಂದಿವೆ. ಇದರಿಂದ ಸಂತ್ರಸ್ತರಿಗೆ ಪರಿಹಾರ ತಕ್ಕ ಪ್ರಮಾಣದಲ್ಲಿ ಅಗತ್ಯವಾದ ತುರ್ತಿನಲ್ಲಿ ತಲುಪಿಲ್ಲ. ಪರಿಹಾರ ಕಾರ್ಯ ಕುಂಟಿಕೊಂಡೇ ಸಾಗಿದೆ.

ಆದರೆ ಈ ಎಲ್ಲಾ ವ್ಯವಸ್ಥೆಯ, ಸಂಘಟನಾ ದೌರ್ಬಲ್ಯಗಳನ್ನೂ ಮೀರಿ ಎಂದಿನಂತೆ ಜನರ ಅನುಕಂಪ, ಸಹಾನುಭೂತಿ, ಸೌಹಾರ್ದಭಾವದ ಅಲೆ ಎದ್ದಿದೆ. ದೇಶದಾದ್ಯಂತ ಅಂತರರಾಷ್ಟ್ರೀಯವಾಗಿಯೂ, ನೆರವಿನ ಮಹಾಪೂರವೇ ಹರಿದು ಬಂದಿದೆ. ಪರಿಹಾರ ಸಾಮಗ್ರಿ, ಧನಸಹಾಯ, ಸ್ವಯಂ-ಸೇವಕರ ತಂಡಗಳ ಮೂಲಕ ಜನ ತಮ್ಮ ಕಾಣಿಕೆ

ಭೀಕರ ದುರಂತ
...ಡು ಬಂದಾಗ..........



...ತರ ಯಾವುದೇ ದೊಡ್ಡ ಪ್ರಾಕೃತಿಕ ದುರಂತಗಳಿಗೆ ಇಂತಹ ವ್ಯವಸ್ಥೆ ಸಮಾನವಿದ್ದು, ...ರತ-ಶ್ರೀಲಂಕಾ ಸೇರಿದಂತೆ ಕೆಲ ದೇಶಗಳಲ್ಲಿ ಇಂತಹ ವ್ಯವಸ್ಥೆಯೂ ದುರ್ಬಲ ಎಂಬುದು ಈ ...ರಿ ಸಾವು-ನೋವಿಗೆ ಮೂಲ ಕಾರಣ.

ಸುನಾಮಿ ದುರಂತ ಪರಿಹಾರ ತೃಪ್ತಿಕಾರಕವಾಗಿದೆಯೆ?

ಈಗಾಗಲೇ ಹೇಳಿದ ಹಾಗೆ ಯಾವುದೇ

ನಾರುವ ಶವಗಳು - ಮುಂತಾದವುಗಳೂ ಹರಡಬಹುದಾದ ಸಾಂಕ್ರಾಮಿಕ ರೋಗಗಳನ್ನು ತಡೆಯುವುದು, ಆರಂಭವಾಗಿ ಅದಕ್ಕೆ ಬೇಕಾದ ವೈದ್ಯಕೀಯ ವ್ಯವಸ್ಥೆ ಇನ್ನಷ್ಟು ದೊಡ್ಡ ಸವಾಲು. ಸಾಮಾನ್ಯ ಪರಿಸ್ಥಿತಿಯಲ್ಲೇ ಎಲ್ಲಾ ಪ್ರದೇಶಗಳಲ್ಲಿ ತಕ್ಕ ವೈದ್ಯಕೀಯ ವ್ಯವಸ್ತೆ (ಸಾಕಷ್ಟು ಸಂಖ್ಯೆಯಲ್ಲಿ ಸಿಬ್ಬಂದಿ, ಔಷಧಿ, ಉಪಕರಣಗಳು) ದುರ್ಬಲವಾಗಿಯೂ ಇದು ಸ್ವಾಭಾವಿಕವೇ.

ನೀಡಿದ್ದಾರೆ. ಸರ್ಕಾರಿ ಯಂತ್ರವೂ ಸ್ವಲ್ಪ ನಿಧಾನವಾಗಿಯಾದರೂ ಕೆಲಸ ಮಾಡಲು ಆರಂಭಿಸಿದೆ. ಆದರೆ ಈ ಎಲ್ಲಾ ಮಾನವ-ಸಹಜ ವ್ಯವಸ್ಥೆ, ಯಂತ್ರದ ದೌರ್ಬಲ್ಯಗಳನ್ನು ಅಳಿಸಿ ಹಾಕಲಾರದು. ○

ನಾವೇನು ಮಾಡಬೇಕು?

ಸಾಮಾನ್ಯ ಜನತೆಯ ಸಂಕಟಗಳಿಗೆ, ಇಂತಹ ಪ್ರಾಕೃತಿಕ ದುರಂತಗಳ ಬಗ್ಗೆ ನಮ್ಮ ಆಳುವ ವರ್ಗಗಳ ಸರ್ಕಾರಗಳ ಧೋರಣೆ ಬಗ್ಗೆ ನಮಗೆಲ್ಲಾ ಗೊತ್ತಿದೆ. ದುರಂತದ ಸಮಯದಲ್ಲಿ ಸಾರ್ವಜನಿಕ ಒತ್ತಡದಿಂದ, ಪರಿಹಾರದಲ್ಲಿ ಚುರುಕು ಬಂದರೂ ಕಾಲಕ್ರಮೇಣ ಮಧ್ಯಕಾಲದ, ದೂರಗಾಮಿ ಪರಿಹಾರದ ಬಗ್ಗೆ ಆಸಕ್ತಿ ಹೊಸತೇನೂ ಅಲ್ಲ. ಸಾಮಾನ್ಯ ಪರಿಸ್ಥಿತಿಯಲ್ಲೂ, ಇಂತಹ ತುರ್ತು ಪರಿಸ್ಥಿತಿಯಲ್ಲೂ ಕನಿಷ್ಠ ಆಹಾರ-ವಸತಿ-ಬಟ್ಟೆ ಪೂರೈಕೆಯ ಬಗ್ಗೆ ಸರ್ಕಾರ ಸಾರ್ವತ್ರಿಕ ಜವಾಬ್ದಾರಿ ಬಗ್ಗೆ ವ್ಯಾಪಕ ಅರಿವು ಮಾಡಿಸುವುದು ಅಗತ್ಯ. ಸುನಾಮಿಯ ಬಗ್ಗೆ ನಿರ್ದಿಷ್ಟವಾಗಿ ಮತ್ತು ಇತರ ಪ್ರಾಕೃತಿಕ ಮುತುವರ್ಜಿಯನ್ನು ಎದುರಿಸಲು ಬೇಕಾದ ಸಮಗ್ರ ವ್ಯವಸ್ಥೆ ಬಗ್ಗೆ ಸಾರ್ವತ್ರಿಕ ಅರಿವೂ ಸಾರ್ವಜನಿಕ ಒತ್ತಡ ರೂಪಿಸುವುದೂ ಪ್ರಜ್ಞಾವಂತ ನಾಗರಿಕರ ಕರ್ತವ್ಯ.

ಎಲ್ಲಾ ಪ್ರಾಕೃತಿಕ ದುರಂತಗಳು ಸಂಭವಿಸಿದಾಗ, ಅದಕ್ಕೆ ಮೂಲ ಕಾರಣ ದೇವರ ಕೋಪವೋ, ನಮ್ಮೆಲ್ಲರ ಪಾಪದ ಬುತ್ತಿ ಭರಿತವಾಗಿದೆಯೋ ಎಂಬ ಮೂಢನಂಬಿಕೆಗಳು ಗಟ್ಟಿಯಾಗಿಯೂ - ವ್ಯಾಪಕವಾಗಿ ಕೇಳುವುದೇ ಸಾಮಾನ್ಯ. ಅದಕ್ಕೆ ಶಾಂತಿ, ಧಾರ್ಮಿಕ ಪರಿಹಾರಗಳನ್ನು ಒಡ್ಡುವುದು ಸಾಮಾನ್ಯ. ಇಂತಹ ಗೊಡ್ಡು ನಂಬಿಕೆ ಹರಿಸುವ ವಿರುದ್ಧ ಅರಿವು ಮೂಡಿಸುವುದು ಅಷ್ಟೇ ಅಗತ್ಯ. ಇಂತಹ ಪ್ರಾಕೃತಿಕ ದುರಂತಗಳ ನಿಜವಾದ ಕಾರ್ಯಗಳ ವೈಜ್ಞಾನಿಕ ಅರಿವು ಮತ್ತು ಪರಿಹಾರ ಕ್ರಮಗಳ ಬಗ್ಗೆ ಪರಿಜ್ಞಾನ ಮೂಡಿಸುವುದು ತುರ್ತಿನ ಅಗತ್ಯ.



ಇಂತಹ ದುರಂತ ಸಂಭವಿಸದಂತೆ ಏನು ಮಾಡಬಹುದು?

ಸುನಾಮಿ ಅಪಾಯ ಗುರುತಿಸುವ ಮುನ್ನೆಚ್ಚರಿಕೆ ವ್ಯವಸ್ತೆ ರೂಪಿಸಿವುದು ಮೊದಲ ಕೆಲಸವಾಗಬೇಕು. ಭಾರತ ಮಹಾಸಾಗರದ ತೀರದ ದೇಶಗಳ ಸಹಕಾರದೊಂದಿಗೆ ಇಂತಹ ವ್ಯವಸ್ಥೆ ರೂಪಿಸಬೇಕು. ಈ ಪ್ರದೇಶದಲ್ಲೇ ವೈಜ್ಞಾನಿಕ - ತಾಂತ್ರಿಕ ಮತ್ತು ಇತರ ಸಂಪನ್ಮೂಲ ಹೊಂದಿರುವಭಾರತ ಇದರಲ್ಲಿ ನಾಯಕತ್ವ ವಹಿಸಬೇಕು. ಸಾಗರದಡಿಯಲ್ಲಿ ನೀರಿನ ಒತ್ತಡ/ ಅಲೆ ಮಾಪಕಗಳನ್ನು ವಿಭಾಗ ಮಾಡಿ ಸ್ಥಾಪಿಸುವ ಕೆಲಸ ಆಗಬೇಕು. ಇಡೀ ಪ್ರದೇಶದ ಸಾಗರ ಮತ್ತು ತೀರ ಪ್ರದೇಶದ ಕಂಪ್ಯೂಟರ್ ಮಾಡೆಲ್ ಮಾಡಿ ಇಡೀ ವ್ಯವಸ್ಥೆಯನ್ನು ರೂಪಿಸಲು ಭಾರತ ಮಹತ್ವದ ಪಾತ್ರ ವಹಿಸಬೇಕು.

ಆದರಷ್ಟೇ ಮಹತ್ವದ್ದು ಸುನಾಮಿ ಸೇರಿದಂತೆ ಎಲ್ಲಾ ಪ್ರಾಕೃತಿಕ ದುರಂತಗಳಿಗೆ ಸಾಮಾನ್ಯವಾದ (ಮತ್ತು ನಿರ್ದಿಷ್ಟ ಅಗತ್ಯಗಳನ್ನು ಪೂರೈಸುವ) ಸಮಗ್ರ ತುರ್ತು ಪರಿಹಾರ ವ್ಯವಸ್ಥೆಯ ದೌರ್ಬಲ್ಯಗಳನ್ನು ನಿವಾರಿಸುವುದು. ಎಲ್ಲಾ ದುರಂತಗಳಿಗೆ ಪ್ರತಿಕ್ರಿಯಿಸಿ ಪರಿಹಾರ ಕಾರ್ಯ ಸಂಯೋಜನೆ ಮಾಡಲು ರಾಷ್ಟ್ರೀಯ ಪ್ರಾಕೃತಿಕ ದುರಂತ ಪರಿಹಾರ ಕಮೀಶನ್ ಕೆಲಸದಲ್ಲಿ ಸಮಗ್ರ ಬದಲಾವಣೆ ಆಗಬೇಕು. ಅದಕ್ಕೆ ಅಗತ್ಯ ಸಂಪನ್ಮೂಲ, ಆಡಳಿತ ಯಂತ್ರದ ಬೆಂಬಲ ಒದಗಿಸಬೇಕು. ಜಿಲ್ಲಾ ಮತ್ತು ಕೆಳಗಿನ ಮಟ್ಟದ ಆಡಳಿತ ಯಂತ್ರವನ್ನು ಇದಕ್ಕಾಗಿ ತರಬೇತಿ ಮಾಡಬೇಕು. ಸಮಗ್ರ ವೈದ್ಯಕೀಯ ವ್ಯವಸ್ಥೆಯನ್ನು ರೂಪಿಸುವ ಅತ್ಯಂತ ತುರ್ತಿನ ಕ್ರಮ.

ಸಾಮಾನ್ಯ ಪರಿಸ್ಥಿತಿಯಲ್ಲೇ, ವೈದ್ಯಕೀಯ, ವಸತಿ, ಆಹಾರ ಸರಬರಾಜು ವ್ಯವಸ್ಥೆಯ ನ್ಯೂನ್ಯತೆಗಳನ್ನು ಸರಿಪಡಿಸುವುದು ಅಷ್ಟೇ ಅಗತ್ಯ. ಸಾಮಾನ್ಯ ಪರಿಸ್ಥಿತಿಯಲ್ಲಿ ಉತ್ತಮ ವ್ಯವಸ್ಥೆ ರೂಪಿತವಾದಾಗ ಮಾತ್ರ ತುರ್ತಿನ ಪರಿಸ್ಥಿತಿಯಲ್ಲಿ ಶೀಘ್ರ ಪರಿಹಾರ ಪೂರೈಕೆ ಸಾಧ್ಯ.

ಸುನಾಮಿ ಸಂತ್ರಸ್ತರ ನೆರವಿಗೆ ಧಾವಿಸಿ.....

ಹಿಂದೆಂದೂ ಕಂಡರಿಯದ, ಸುನಾಮಿ ಎಂಬ ಹೆಸರಿನ ಸಮುದ್ರದ ಭೀಕರ ಅಲೆಗಳು ಭಾರತವೂ ಸೇರಿದಂತೆ ಜಗತ್ತಿನ ವಿವಿಧ ದೇಶಗಳ ಲಕ್ಷಕೂ ಹೆಚ್ಚೂ ಜನರನ್ನು ನುಂಗಿ ಹಾಕಿದೆ. ಇದರಲ್ಲಿ ಭಾರತ, ಶ್ರೀಲಂಕಾ, ಇಂಡೋನೇಶ್ಯದ್ದು ಸಿಂಹಪಾಲು. ಭಾರತದಲ್ಲಿ ತಮಿಳುನಾಡು, ಪಾಂಡಿಚೇರಿ, ನಿಕೋಬರ್‌ನ ಕರಾವಳಿ ಪ್ರದೇಶಗಳು ತೀವ್ರವಾಗಿ ಹಾನಿಗೆ ಒಳಗಾಗಿದ್ದರೆ, ಆಂಧ್ರ, ಕೇರಳ, ಕರ್ನಾಟಕ ಮತ್ತಿತರ ರಾಜ್ಯಗಳಿಗೂ ಧಕೆ ಉಂಟಾಗಿದೆ

ತಂದೆ ತಾಯಿಗಳನ್ನು ಕಳೆದುಕೊಂಡು ತಬ್ಬಲಿಗಳಾದ ಮಕ್ಕಳ ಆಕ್ರಂದನ ಒಂದೆಡೆಯಾದರೆ, ತಮ್ಮವರನ್ನೆಲ್ಲ ಕಳೆದುಕೊಂಡ ಒಬ್ಬಂಟಿಗಳು ಹಲವರು. ಮನೆ, ಮಠ ಆಸ್ತಿಪಾಸ್ತಿಗಳನ್ನೆಲ್ಲ ಕಳೆದುಕೊಂಡು ಅನಾಥರಾದವರು ಹಲವರಾಧರೆ, ಇಡೀ ಕುಟುಂಬವೇ ಕಣ್ಮರೆಯಾದ ದಾರುಣಕಥೆ ಕಣ್ಮುಂದೆ ಬರುತ್ತದೆ.

ಈಗ ಸುನಾಮಿಯ ಅಬ್ಬರ ಇಳಿದಿದೆ.ಆದರೆ ಮುಂದೇನು ಎಂಬುದು ಎದುರಾಗಿದೆ. ಸಮುದ್ರದ ನೀರಿನ ಧಾಳಿ ನಿಂತಿದ್ದರೂ, ಕುಡಿಯುವನೀರಿನ ಹಾಹಾಕಾರ ಆರಂಭವಾಗಿದೆ. ಸಾಂಕ್ರಮಿಕ ರೋಗಗಳು ಹಬ್ಬುವ ಭೀತಿ. ಔಷಧಿ, ಬಟ್ಟೆ, ಅನ್ನ, ನೀರು, ವಸತಿ ತುರ್ತು ಬೇಕಾಗಿದೆ. ರಸ್ತೆ, ಶಾಲೆ, ಆಸ್ಪತ್ರೆ ಇತ್ಯಾದಿ ಸೌಲಬ್ಯಗಳು ಆದಷ್ಟು ಬೇಗನೆ ಪೂರ್ಣ ಗೊಳ್ಳಬೇಕು. ನಿರಾಶ್ರಿತರ ಶಿಬಿರಗಳಲ್ಲಿ ರೋಗ ಹರಡದಂತೆ ತಡೆಗಟ್ಟಬೇಕು.

ಈ ಹಿನ್ನೆಲೆಯಲ್ಲಿ ಸಹಾಯದ ಮಾಹಾಪೂರವೇ ಹರಿದು ಬರಬೇಕು .ಹರಿದು ಬರುತ್ತಿದೆ ಕೂಡಾ. ಅನಾಥರಾದ ಜನರ ಸಂಕಷ್ಟಗಳಿಗೆ ಇತರರು ಸ್ಪಂದಿಸುತ್ತಿದ್ದಾರೆ. ಅಂತವರನ್ನು ನಾವು ಮುಟ್ಟಬೇಕಾಗಿದೆ

ಮಾರ್ಕ್ಸ್‌ವಾದಿ ಕಮ್ಯುನಿಷ್ಟ ಪಕ್ಷ-ಸಿಪಿಐ(ಎಂ)ಸಂತ್ರಸ್ತರ ನೆರವಿಗೆ ಧಾವಿಸಲು ಪಕ್ಷದ ಘಟಕಗಳಿಗೆ, ಜನ ಸಮುದಾಯಕ್ಕೆ ಕರೆ ನೀಡಿದೆ. ಪಕ್ಷದ ಪ್ರಧಾನಕಾರ್ಯದರ್ಶಿ ಹರಕಿಶನ್ ಸಿಂಗ್ ಸುರ್ಜಿತ್ ಮತ್ತು ಪಕ್ಷದ ಸಂಸತ್ ಸದಸ್ಯರಾದ ನಿಲೋತ್ಪಲ ಬಸು ಹಾಗೂ ಹನನ್ ಮುಲ್ಲ ಅವರೊಂದಿಗೆ ತೆರಳಿ 10 ಲಕ್ಷರೂಗಳ ಚೆಕ್ಕನ್ನು ಈಗಾಗಲೇ ಪ್ರಧಾನ ಮಂತ್ರಿಯವರ ಪರಿಹಾರ ನಿಧಿಗೆ ನೀಡಿದ್ದಾರೆ. ಇನ್ನು ದೊಡ್ಡರೀತಿಯಲ್ಲಿ ಹಣ, ಔಷಧಿ, ಬಟ್ಟೆಬರೆ ಸಂಗ್ರಹಿಸಲು ಪಕ್ಷದಿಂದ ಕರೆನೀಡಲಗಿದೆ.

2004 ರ ಚುನಾವಣೆಯಲ್ಲಿ ಕೋಮುವಾದಿಗಳ ಕೂಟವನ್ನು ಅಧಿಕಾರದಿಂದ ತೊಲಗಿಸಿದ ಜನತೆ, ಪ್ರಕೃತಿಯ ವಿಕೋಪದಿಂದ ಉಂಟಾದ ವಿಪತ್ತು ಅಷ್ಟೇ ಧೀರತನದಿಂದ ಎದುರಿಸುತ್ತಾರೆ ಎಂಬ ವಿಶ್ವಾಸ ಸಿಪಿಐ(ಎಂ) ಗೆ ಆ ನಿಟ್ಟಿನಲ್ಲಿ ಎಲ್ಲರೂ ಒಂದಾಗೋಣ, ಸಹಾಯಕ್ಕಾಗಿ ಮುಂದಾಗೋಣ.

ತಮ್ಮ ಸಹಾಯವನ್ನು ಸಿಪಿಐ(ಎಂ) ರಾಜ್ಯ ಸಮಿತಿಸ ವಿಳಾಸಕ್ಕೆ ಕಳುಹಿಸಬಹುದು. ಸುನಾಮಿ ನಿರಾಶ್ರಿತರ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆಯಲಾಗುವುದು.



ಬೆಂಗಳೂರಿನಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿಯಿಂದ ಸಂಗ್ರಹ ಆರಂಭ ಶಿವಾಜಿನಗರದಲ್ಲಿ - ರಾಜ್ಯ ಕಾರ್ಯದರ್ಶಿ ನಾಗರಾಜ್ ಹಾಗೂ ರಾಜ್ಯ ಸಮಿತಿ ಸದಸ್ಯರಿಂದ ಕೋರಿಕೆ.

ಜಿಲ್ಲೆಯಲ್ಲಿ ಕೋಮುವಾದದ ಅಪಾಯ ಮತ್ತು ಅಭಿವೃದ್ಧಿಯ ಸ್ವರೂಪದ ಬಗ್ಗೆ ಚರ್ಚಿಸಿದ

ಸಿಪಿಐ(ಎಂ) ಉ.ಕ. ಜಿಲ್ಲಾ 6ನೇ ಸಮ್ಮೇಳನ

ಸ್ವಾತಂತ್ರ್ಯ ಸಂಗ್ರಾಮದಲ್ಲಿ - ನಂತರದಲ್ಲೂ ಹಲವಾರು ಧೀಮಂತ ಜನ ಚಳುವಳಿಗಳ ಇತಿಹಾಸವಿರುವ ಉತ್ತರ ಕನ್ನಡ ಜಿಲ್ಲೆಯ ಪ್ರಸಕ್ತ ಸವಾಲುಗಳ ಬಗ್ಗೆ ಆಳವಾಗಿ ಚರ್ಚಿಸಿ ಸಿಪಿಐ(ಎಂ) ಸಮ್ಮೇಳನ ಪರ್ಯಾಯ ಹಾದಿಯನ್ನು ನಿಖರವಾಗಿ ಗುರುತಿಸಿದೆ. ಪ್ರಬಲವಾದ ಜನಾಂದೋಲನ ರೂಪಿಸಲು ನಿರ್ಧರಿಸಿದೆ. ಸಮ್ಮೇಳನದ ಪ್ರಮುಖ ಕಲಾಪಗಳ ವರದಿ ಇಲ್ಲಿದೆ. ಉತ್ತರಕನ್ನಡ ಹಿಂದಿನಂತಿಲ್ಲ. ಹಾಗಾದರೆ ಆಗುತ್ತಿರುವ ಬದಲಾವಣೆ ಏನು?

ಉ.ಕ. ಜಿಲ್ಲೆಯ ಕಮ್ಯುನಿಸ್ಟ್ ಚಳುವಳಿಯಲ್ಲಿ ಶಿರಸಿ ಮಹತ್ವದ ಪಾತ್ರ ವಹಿಸಿದೆ. ಸ್ವಾತಂತ್ರ್ಯ ಪೂರ್ವದಿಂದಲೇ ಕಾರವಾರ ತಾಲೂಕು ಮತ್ತು ಶಿರಸಿ ತಾಲ್ಲೂಕು ಕೆಂಬಾವುಟದಡಿಯಲ್ಲಿ ಅನೇಕ ಮಹತ್ವದ ಹೋರಾಟವನ್ನು ನಡೆಸಿ ಜನಮನ್ನಣೆ ಗಳಿಸುತ್ತಲೇ ಬಂದಿವೆ. ಹಾಗಾಗಿ ಕೆಂಬಾವುಟ ಎಂದೊಡನೆ ರೈತ ಹೋರಾಟ, ನಯಾ ಪೈಸೆ ಚಳುವಳಿ, ಕಟ್ಟಿಗೆ ಹೋರಾಟ, ಬಗರ ಹುಕುಂ, ಭೂಮಿ ಹೋರಾಟ... ಇತ್ಯಾದಿಗಳು ಈ ಭಾಗದ ಹಿರಿಯರಿಗೆ ತಟ್ಟನೆ ನೆನಪಾಗದೆ ಇರದು. ಇಂದು ಸಣ್ಣಪುಟ್ಟ ಅಂಗಡಿಗಳಿಂದ ತುಂಬಿದ ಬಿಡರ್ ಬೈಲ್‌ನಲ್ಲಿ ಕಮ್ಯುನಿಸ್ಟ್ ಪಕ್ಷದ ಅಡಿಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಾವಿರಾರು ಜನ ಪಾಲ್ಗೊಂಡಿದ್ದು ಇಂದಿಗೆ ಇತಿಹಾಸ.

ದಿವಂಗತ ಕಾಂ. ಎನ್.ಎಲ್. ಉಪಾಧ್ಯಾಯ, ಎನ್.ಕೆ. ಉಪಾಧ್ಯಾಯರಂತಹ ಹಿರಿಯ ಕಮ್ಯುನಿಸ್ಟ ಚೇತನಗಳು ಈ ಜಿಲ್ಲೆಯಲ್ಲಿ ಪಕ್ಷ ಕಟ್ಟಲು ಪ್ರಾರಂಭಿಸಿದ್ದೇ ಈ ಶಿರಸಿ, ಕಾರವಾರಗಳ ಮೂಲಕ. ಶಿರಸಿಯಲ್ಲಿ ಪ್ರಸಿದ್ಧ ವಕೀಲರಾದ ಕಾಂ. ಎಂ. ಎಸ್.ಧಾರೇಶ್ವರ, ಕಾಂ. ಪಿ.ಜಿ. ಮಶಾಲ್ದಿ, ಕಾಂ. ಮಂಜುನಾಥ ಫುಲ್ಕರ್ ಮುಂತಾದವರು ಈ ಚಳುವಳಿಯ ಭಾಗವಾಗಿ ಹೋರಾಟ ಬೆಳೆಸಿದರು.


ಅಂದು ಕೇವಲ ರೈತರು, ಕೂಲಿಕಾರರ, ಮಧ್ಯೆ ಇದ್ದ ಕಮ್ಯುನಿಸ್ಟ್ ಪಕ್ಷದ ಚಳುವಳಿಯ ಪ್ರಭಾವ ಇಂದು ವಿಸ್ತಾರವಾಗಿದೆ. ವಿವಿಧ ಜನ ವಿಭಾಗಗಳ ಮಧ್ಯೆ, ವಿವಿದ ರಂಗಗಳ ಮಧ್ಯೆ ಹೋರಾಟ ಸಂಘಟಿಸಿ ಯಶಸ್ವಿಯಾಗಿದೆ. ಈ ಜಿಲ್ಲೆಯಲ್ಲಿ ಪ್ರಬವಾಗಿರುವ ವಿದ್ಯಾರ್ಥಿ, ಯುವಜನ, ಕಾರ್ಮಿಕ, ಮಹಿಳೆ, ರೈತರ ಸಂಘಟನೆಗಳ ಮಧ್ಯೆ ಮಹತ್ವದ ಸೈದ್ಧಾಂತಿಕ ಪ್ರವೇಶ ಮಾಡಲು ಪಕ್ಷಕ್ಕೆ ಇಂದು ಸಾಧ್ಯವಾಗಿದೆ. ಜಿಲ್ಲೆಯ ಅನೇಕ ಮಹತ್ವದ ಹೋರಾಟಗಳಿಗೆ ಮೌಲಿಕ ಮಾರ್ಗದರ್ಶನ ಕೊಟ್ಟಿದೆ.

ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಅನೇಕ ಹೋರಾಟಗಳು ನಡೆದಿವೆ. ಕೆಲವು ಹೋರಾಟಗಳು ಆಡಳಿತ ಪಕ್ಷಗಳು, ಕೋಮುವಾದಿ ಪಕ್ಷಗಳು ಜನರನ್ನು ದಾರಿ ತಪ್ಪಿಸಲು ಸಂಘಟಿಸಿದ್ದಾರೆ, ಇನ್ನು ಕೆಲವು ಸ್ವಯಂ ಸ್ಫೂರ್ತಿಯಿಂದ ಪ್ರಾಮಾಣಿಕವಾಗಿ ನಡೆದಿದೆ; ಆದರೆ ಇವೆಲ್ಲ ಹೋರಾಟಗಳಿಗೆ ನಿರಂತರತೆಯ ಕೊರತೆ ಇದೆ. ಮತ್ತೆ ಹೋರಾಟ ಸಾಗುತ್ತಾ -ಸಾಗುತ್ತಾ ಅಪಾಯಕಾರಿಯಾದ ನಡೆಯನ್ನು ಪಡೆದುಕೊಂಡಿದ್ದಿದೆ. ಇದಕ್ಕೆ ಬಹುಮುಖ್ಯ ಕಾರಣ ಆ ಹೋರಾಟ ಒಬ್ಬ ವ್ಯಕ್ತಿಯನ್ನು ನಂಬಿಕೊಂಡಿರುವುದು ಕಾರಣವಾದರೆ ಇನ್ನೊಂದು ಈ ಹೋರಾಟದ ನಾಯಕತ್ವಕ್ಕೆ ಇರುವ ಸೈದ್ಧಾಂತಿಕ ಕಣ್ಣೋಟದ ಕೊರತೆ ಕಾರಣವಾಗಿದೆ. ಆದರೆ ಜಿಲ್ಲೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಾರ್ಗದರ್ಶನದಲ್ಲಿ ನಡೆದ ಎಲ್ಲಾ ಹೋರಾಟಗಳಿಗೆ ಇಂತಹ ಒಂದು ಸೈದ್ಧಾಂತಿಕ ಕಣ್ಣೋಟ ಮತ್ತು ನಿರಂತರತೆ ಇರುವುದರಿಂದ ಇಂದು ಅವು ಯಶಸ್ವಿಯಾಗಿವೆ. ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಕಾರ್ಮಿಕ ಹೋರಾಟ ಮತ್ತು ಅರಣ್ಯ ಭೂಮಿಗಾಗಿ ನಡೆದ ಹೋರಾಟ, ವಿದ್ಯುತ್ ಹೋರಾಟಗಳನ್ನು ಗಮನಿಸಬಹುದು.

ಇದರೊಂದಿಗೆ ಇತ್ತೀಚಿನ ದಿನಗಳಲ್ಲಿ ತೀವ್ರವಾಗಿ ಬೆಳೆಯುತ್ತಿರುವ ಕೋಮುವಾದ ಮತ್ತು ಜನಪ್ರತಿನಿಧಿಗಳಲ್ಲೂ - ಅಧಿಕಾರಿಗಳಲ್ಲೂ ಬೆಳೆಯುತ್ತಿರುವ ಭ್ರಷ್ಟಾಚಾರ ಜಿಲ್ಲೆಯ ಅಭಿವೃದ್ಧಿಗೆ ತೊಡಕಾಗಿದೆ. ರಾಜಕೀಯ ಪಕ್ಷಗಳು, ಚುನಾವಣೆ ಮತದಾನ ಇತ್ಯಾದಿಗಳ ಬಗ್ಗೆ ಜನರು ಅಸಹ್ಯಪಟ್ಟುಕೊಳ್ಳುವ ಸ್ಥಿತಿ ನಿರ್ಮಾಣ ಆಗಿದೆ. ಪ್ರತಿ ವರ್ಷದಿಂದ ವರ್ಷಕ್ಕೆ ಮತದಾನದ ಪ್ರಮಾಣ ಕೂಡ ಕಡಿಮೆ ಆಗುತ್ತಿದೆ. ಇದಕ್ಕಿಂತ ಭಿನ್ನವಾದ ಒಂದು ವ್ಯವಸ್ಥೆಯೇ ಇರಲಿಕ್ಕಿಲ್ಲ. 'ಒಬ್ಬ ಅಕ್ಕಿ ತಿನ್ನುವವನಾದರೆ ಇನ್ನೊಬ್ಬ ನೆಲ್ಲನ್ನೇ ತಿನ್ನುವವ' ಎಂದು ಜನ ಭ್ರಮನಿರಸನಗೊಳ್ಳುತ್ತಿರುವಾಗ ಒಂದು ಪರ್ಯಾಯವನ್ನು ಜನರಿಗೆ ತೋರಿಸಬೇಕಾಗಿದೆ; ಕಾಂಗ್ರೆಸ್, ಬಿಜೆಪಿ, ಜನತಾದಳ ಇತ್ಯಾದಿಗಳಿಗಿಂತ ಭಿನ್ನವಾಗಿ ಯೋಚಿಸುವ, ರಾಜಕೀಯದಲ್ಲಿ ನೈತಿಕತೆಯನ್ನು ಆಮೂಲಾಗ್ರವಾಗಿ ಅಳವಡಿಸಿ ಕೊಂಡಿರುವ, ನಿಜವಾದ ಜನತಾ ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿರುವ ಪಕ್ಷವೊಂದಿದೆ ಎನ್ನುವುದನ್ನು ಸಾರಿ ಹೇಳುವ ಎಂದಿಗಿಂತ ಹೆಚ್ಚು ಅಗತ್ಯವಿರುವ ಈ ಸಂದರ್ಭದಲ್ಲಿ ಉ.ಕ. ಜಿಲ್ಲಾ 6ನೇ ಸಮ್ಮೇಳನ ನಡೆಯುತ್ತಿರುವುದು, ಇವೆಲ್ಲ ಅಂಶಗಳ ಬಗ್ಗೆ ಚರ್ಚಿಸಿರುವುದು ಈ ಸಮ್ಮೇಳನದ ಮಹತ್ವದ ಅಂಶವಾಗಿದೆ.

ಜನಮನ ಸೆಳೆದ ಸೌಹಾರ್ದ ರ್‍ಯಾಲಿ

ಸಮ್ಮೇಳನ ಉದ್ಘಾಟನೆಯ ಮೊದಲು ಶಿರಸಿ ನಗರದಲ್ಲಿ ಬೃಹತ್ ರ್‍ಯಾಲಿ ನಡೆಸಲಾಯಿತು. ಜಿಲ್ಲೆಯಲ್ಲಿ ಬೆಳೆಯುತ್ತಿರುವ ಕೋಮುವಾದದ ಅಪಾಯವನ್ನು ಸಾರಿ ಹೇಳುವ ಕಾರಣದಿಂದ 'ಸೌಹಾರ್ದ ರ್‍ಯಾಲಿ' ನಡೆಸಲಾಯಿತು. ನಿರೀಕ್ಷೆಗಿಂತ ಹೆಚ್ಚು ಜನರು ಈ ರ್‍ಯಾಲಿಯಲ್ಲಿ ಪಾಲ್ಗೊಂಡರು. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಂಡು ಆಕರ್ಷಕ ಭಿತ್ತಿ ಪತ್ರ, ಘೋಷಣೆಗಳೊಂದಿಗೆ ಬಿಡ್ಕಬೈಲ್, ನಟರಾಜ ರಸ್ತೆಯ, ದೇವಿಕೆರೆ ಮೂಲಕ ಸಮ್ಮೇಳನ ನಡೆಯುವ ಸಭಾಭವನ ಪ್ರವೇಶಿಸಿದರು; ಸೌಹಾರ್ದತಾ ರ್‍ಯಾಲಿಯನ್ನು ಸಿಪಿಎಂ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ನಿತ್ಯಾದನಂದ ಸ್ವಾಮಿ ಉದ್ಘಾಟಿಸಿ ಮಾತನಾಡುತ್ತಾ 'ಕೋಮುವಾದ, ಮೂಲಭೂತವದವನ್ನು ನಿಷ್ಟುರವಾಗಿ ಸಿಪಿಐ(ಎಂ) ವಿರೋಧಿಸುತ್ತಾ ಬಂದಿದೆ. ಮಂದಿರ ಮಸೀದೆಗಳಿಗಿಂತ ಮುಖ್ಯ ಜನರ ದಿನ ನಿತ್ಯದ ಸಮಸ್ಯೆ, ಕೋಮುದಂಗೆಯಿಂದ ಜನತೆಯ ನೆಮ್ಮದಿ



ಬಹಿರಂಗ ಸಭೆಯಲ್ಲಿ ಪ್ರಸನ್ನ, ನಿತ್ಯಾನಂದಸ್ವಾಮಿ, ಮಶಾಲ್ದಿ, ಶಾಂತರಾಮ ಇತರರು

ಹಾಳಾಗುತ್ತದೆ. ವ್ಯಾಪಾರ ವಹಿವಾಟು ಹಾಳಾಗುತ್ತಿದೆ. ಪ್ರಸ್ತುತ ದಿನಗಳಲ್ಲಿ ರಾಜಕೀಯ ಪಕ್ಷಗಳು ಜಾತಿ, ಧರ್ಮ ಕೋಮುವಾದಿಯ ಹೆಸರಿನಲ್ಲಿ ಜನತೆಯ ಗಮನವನ್ನು ಬೇರೆಡೆಗೆ ಸೆಳೆದು ಬಡಜನರ ಭಾವನೆಯನ್ನು ಹಾಳು ಮಾಡುತ್ತಿದ್ದಾರೆ ಎಂದು ಅವರು ಅಭಿಪ್ರಾಯ ಪಟ್ಟರು. ಇಂತಹ ಪರಿಸ್ಥಿತಿಗೆ ಜನರು ಅವಕಾಶ ನೀಡಬಾರದು ಎಂದು ಕರೆ ನೀಡಿದರು. ರ್‍ಯಾಲಿಯಲ್ಲಿ ಅಂಗನವಾಡಿ ನೌಕರರು, ಸ್ವಸಹಾಯ ಸಂಘ, ಸ್ತ್ರೀ ಶಕ್ತಿ ಸಂಘದ ಸದಸ್ಯರು, ಬಿಸಿ ಊಟದ ನೌಕರರು, ಹಂಚು ಕಾರ್ಮಿಕರು, ಯುವಜನರು, ವಿದ್ಯಾರ್ಥಿಗಳು, ರೈತರು, ಬಿಪಿಎಲ್, ಅರಣ್ಯ ಅತಿಕ್ರಮಣ ಸಕ್ರಮಕ್ಕಾಗಿ ಹೋರಾಡುತ್ತಿರುವ ರೈತರು, ಎಲ್.ಐ.ಸಿ., ಗ್ರಾಮ ಪಂಚಾಯತ್ ನೌಕರರು, ಡಬ್ಲ್ಯು.ಸಿ.ಪಿ.ಎಂ., ನೌಕರರು, ಸಾವರ್ಜನಿಕರು ದೊಡ್ಡ ಸಂಖ್ಯೆಯಲ್ಲಿ ಸ್ವಯಂ ಸ್ಫೂರ್ತಿಯಿಂದ ಪಾಲ್ಗೊಂಡಿದ್ದರು. 'ಹಸಿದ ಜನಗಳ ಬೆವರ ಮೊಗಗಳು ನೊಂದವರೆದೆಯ ನೋವಿನ ಕೂಗು ಮೆರವಣಿಗೆಯಲ್ಲಿ ಪ್ರತಿಧ್ವನಿಸುತ್ತಿತ್ತು. ಈ ಕಾರಣಕ್ಕಾಗಿಯೇ 'ಕೂಲಿ ಜನಗಳ ಗೋಳು ತಡೆಯಲು ನಡೆದಿದೆ, ಹೋರಾಟ........' ಎನ್ನುವ ಹಾಡು ನೆನಪಾಗುತ್ತಿತ್ತು.



ಸಮ್ಮೇಳನ ಉದ್ಘಾಟನೆ :

ಪಕ್ಷದ ಹಿರಿಯ ಸದಸ್ಯರಾದ ಪಿ.ಜಿ. ಮಶಾಲ್ದಿಯವರು ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನ ಅಧೀಕೃತವಾಗಿ ಪ್ರಾರಂಭವಾಯಿತು. ಪಕ್ಷದ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಪ್ರಸನ್ನ ಕುಮಾರ್, ಸೂರ್ಯನಾರಾಯಣರಾವ್ ವೇದಿಕೆಯಲ್ಲಿ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿ 'ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳು ವಿಶ್ವಬ್ಯಾಂಕ್ ನಿರ್ದೇಶಿತ ಆರ್ಥಿಕ ನೀತಿ ಅನುಸರಿಸಿದ್ದರಿಂದ ಜನತೆ ಈ ಎರಡೂ ಸರ್ಕಾರಗಳನ್ನು ಕೇಂದ್ರ ಮತ್ತು ರಾಜ್ಯದಲ್ಲಿ ತಿರಸ್ಕರಿಸಿದರು. ಈಗಲೂ ಅಷ್ಟೆ ಬಡ, ಕೂಲಿ ಕಾರ್ಮಿಕ ವರ್ಗದವರ ಪರವಾಗಿ ನೀತಿಗಳನ್ನು ರೂಪಿಸದಿದ್ದರೆ ಈ ಸರ್ಕಾರಕ್ಕೆ ಉತ್ತಮ ಭವಿಷ್ಯ ಇರಲಾರದು' ಎಂದು ಎಚ್ಚರಿಸಿದರು. ಶಿಕ್ಷಣ ಆರೋಗ್ಯ ಕ್ಷೇತ್ರದಲ್ಲಿ ಸರ್ಕಾರ ಬಡವರ್ಗದವರಿಗೆ ಗರಿಷ್ಠ ಪ್ರಮಾಣದ ರಿಯಾಯತಿ ನೀಡಬೇಕು, ವಿದೇಶಿ ಕಂಪನಿಗಳಿಗೆ ಬೇಕು ಬೇಕಾದಂತೆ ರಿಯಾಯಿತಿ ಕೊಡುವ ಸರ್ಕಾರಗಳು ನಮ್ಮ ಅಸಂಘಟಿತ ಸಮುದಾಯವನ್ನು ಕಡೆಗಣಿಸುವುದು ಸಲ್ಲ' ಎಂದು ನುಡಿದ ಅವರು ಅನೇಕ ವರ್ಷಗಳ ಕಾಲ ಕೈಗಾರಿಕಾ ಸಚಿವರಾಗಿದ್ದ ಆರ್.ವಿ.ದೇಶಪಾಂಡೆ ಯವರಿಗೆ ಜಿಲ್ಲೆಗೆ ಕೈಗಾರಿಕೆಯನ್ನು ತರುವ ಉದ್ದೇಶವೇ ಇದ್ದಂತೆ ಕಾಣುವುದಿಲ್ಲ. ಈ ಜಿಲ್ಲೆಯನ್ನು ಸಂಪೂರ್ಣ ಕಡೆಗಣಿಸಿದರು; ಎಂದರು.

ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರದ ಸಿ.ಆರ್.ಶ್ಯಾನಭಾಗ ಸ್ವಾಗತ ಭಾಷಣ ಮಾಡಿದರೆ, ವಿಠ್ಠಲ ಭಂಡಾರಿ ಶ್ರದ್ಧಾಂಜಲಿ ನಿರ್ಣ ಮಂಡಿಸಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನದ ಸಭಾಭವನ ತುಂಬಿ ಭವನದ ಹೊರಗಡೆಯೂ ಜನ ನಿಂತು ಭಾಷಣ ಕೇಳುತ್ತಿದ್ದರು. ವೇದಿಕೆಯಲ್ಲಿ ಅತಿಥಿಗಳಿಗೆ ಕುಳಿತುಕೊಳ್ಳುವ ಸಣ್ಣ ಸ್ಥಳವೊಂದನ್ನು ಬಿಟ್ಟು ವೇದಿಕೆಯ ತುಂಬೆಲ್ಲಾ ಉದ್ಘಾಟನೆಯ ಸಭೆಗೆ ಬಂದ ಮಹಿಳೆಯರು ಕುಳಿತಿದ್ದರು. ಈ ಸಂದರ್ಭವನ್ನು ನೋಡಿದರೆ 'ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು' ಎನ್ನುವ ಹಾಡು ನೆನಪಿಗೆ ಬರುತ್ತಿತ್ತು.

ಪಕ್ಷದ ಸದಸ್ಯತ್ವಕ್ಕೆ ಅನುಗುಣವಾಗಿ ಜಿಲ್ಲೆಯ ಆರು ತಾಲ್ಲೂಕುಗಳನ್ನು ಪ್ರತಿನಿಧಿಸಿರುವ ಪ್ರತಿನಿಧಿಗಳು ಎರಡು ದಿನಗಳಕಾಲ ವರದಿಯ ಅಡಿಯಲ್ಲಿ ಚರ್ಚಿಸಿದರು. ಒಟ್ಟೂ ಒಂದು ದಿನಗಳ ಕಾಲ ನಡೆದ ವರದಿ ಮಂಡನೆ ಚರ್ಚೆಗಳು ಈ ಜಿಲ್ಲೆಯ ಬಹುಮುಖ್ಯ ಸಮಸ್ಯೆಗಳ ಕಡೆಗೆ ಗಮನ ಸೆಳೆದವು ಅಷ್ಟೇ ಅಲ್ಲ ಈ ಸಮಸ್ಯೆಯ ಪರಿಹಾರಕ್ಕಾಗಿ ಹೋರಾಟವನ್ನು ರೂಪಿಸಿದವು.

ಹಳ್ಳಿ ಹಳ್ಳಿಗಳಲ್ಲಿ ಪ್ರಾರಂಭವಾಗುತ್ತಿರುವ ಭಜರಂಗದಳದ ಘಟಕಗಳು ಬಿತ್ತುತ್ತಿರುವ ಕೋಮುವಾದಿ ವಿಷ ಬೀಜ ಅದರ ಭಾಗವಾಗಿ ಕೋಮು ದ್ವೇಷ ಹಚ್ಚಿ ಸೌಹಾರ್ದತೆ ಕೆಡಿಸುವಲ್ಲಿ ಪ್ರಮುಖ ಘಟನೆಗಳಾದ ಅಂಜುದೀವ್ ದ್ವೀಪ ಪ್ರಕರಣ, ಚಂದಾವರ ಖಬರಸ್ತಾನ ಘಟನೆ, ರಂಜಾನ್ ಮಳಿಗೆ ಘಟನೆ, ಕಸಾಯಿ ಖಾನೆ ವಿರುದ್ಧದ ಪ್ರತಿಭಟನೆ, ಗೋಮಾತೆ ರಕ್ಷಣೆ ಹೆಸರಿನಲ್ಲಿ ರೈತರ ದನದ ಸಾಗಾಟದ ಸಮಸ್ಯೆ ಇತ್ಯಾದಿಗಳ ಕುರಿತು ಚರ್ಚಿಸಲಾಯಿತು.

ಬಿಜೆಪಿ ಅವರ ಬೆಂಗಾವಲಾಗಿ ನಿಂತಿರುವುದು, ಚುನಾವಣೆಯಲ್ಲಿ ಬಿಜೆಪಿಯ ಗೆಲವು, ಕಾಂಗ್ರೆಸ್ ಪಕ್ಷದ ಸೈದ್ಧಾಂತಿಕ ದಿವಾಳಿ ಕೋರ ನೀತಿ, ಪಕ್ಷದಲ್ಲಿಯೇ ಇರುವ ಕೋಮುವದಿ ತಿಳುವಳಿಕೆ, ಚುನಾವಣೆಯಲ್ಲಿ ಅದು ತಳೆದ ತಪ್ಪು ನೀತಿಗಳಿಂದ ಬಿಜೆಪಿಗೆ ಗೆಲುವಾಗಿರುವುದು. ಅನೇಕ ಜನ ಪ್ರತಿನಿಧಿಗಳು ಭ್ರಷ್ಟಾಚಾರದಲ್ಲಿ ತೊಡಗಿರುವುದು, ಕೈಗಾರಿಕೆಗಳು ಮುಚ್ಚುತ್ತಿರುವುದು ಹೊಸ ಕೈಗಾರಿಕೆ ಸ್ಥಾಪನೆಗೆ ಆಡಳಿತ ಪಕ್ಷ ಮುತುವರ್ಜಿ ವಹಿಸದಿರುವುದು ಎಣ್ಣೆ ಸಂಸ್ಕರಣ ಘಟಕ ವಾಪಾಸಾಗಿದ್ದು, ಆರ್ಥಿಕ ಉದಾರೀಕರಣ ಮತ್ತು ಮುಕ್ತ ಆರ್ಥಿಕ ನೀತಿಯಿಂದ ಜಿಲ್ಲೆಯ ಮೇಲಾಗುತ್ತಿರುವ ಪರಿಣಾಮ ನಿರುದ್ಯೋಗದ ಭೀಕರ ರೂಪ, ಅರಣ್ಯ ಅತಿಕ್ರಮಣ ಸಕ್ರಮದಲ್ಲಿ ಸರ್ಕಾರದ ನಿಲಕ್ಷ್ಯ, ಹೋರಾಟದ ಸ್ವರೂಪ, ಬಿಪಿಎಲ್ ಫಲಾನುಭವಿಗಳನ್ನು ಗುರುತಿಸುವಲ್ಲಿ ನಡೆಯುತ್ತಿರುವ ತಪ್ಪು ಮಾನದಂಡ, ಕಾಮಗಾರಿಯಲ್ಲಿ ನಡೆಯುತ್ತಿರುವ ಹಾಡೇಹಗಲು ಭ್ರಷ್ಟಾಚಾರ - ಲಂಚಗುಳಿತನ .... ಇತ್ಯಾದಿಗಳ ಬಗ್ಗೆ ಸವಿವರವಾದ ಚರ್ಚೆ ನಡೆಯಿತು; ಇಂತಹ ಸೂಕ್ಷ್ಮ ಸಂದರ್ಭದಲ್ಲಿ ಪಕ್ಷದ ಮಧ್ಯಪ್ರವೇಶ ಇನ್ನೂ ಉತ್ತಮವಾಗಿ ಮತ್ತು ಸಕ್ರಿಯವಾಗಿ ನಡೆಯಬೇಕಾದ ಅಗತ್ಯದ ಬಗ್ಗೆ ಸಮ್ಮೇಳನ ಚರ್ಚಿಸಿ, ಕೋಮುವಾದಿ ನೀತಿಯ ಜಾರಿ ಮತ್ತು ಜಿಲ್ಲೆಯ ಅಭಿವೃದ್ಧಿಯ ಪ್ರಶ್ನೆಗಳು ಬಂದಾಗ ಪರಿಣಾಮಕಾರಿಯಾದ ಮಧ್ಯಪ್ರವೇಶವನ್ನು ಎಂದಿಗಿಂತ ಇಂದು ತೀವ್ರಗೊಳಿಸಲು ಸಮ್ಮೇಳನ ತೀರ್ಮಾನಿಸಿತು.

ಇದರ ಭಾಗವಾಗಿ ಈ ಕೆಳಗಿನ ಪ್ರಮುಖ ನಿರ್ಣಯವನ್ನು ಸಮ್ಮೇಳನ ಕೈಗೊಂಡಿತು.

1. ಉತ್ತರ ಕನ್ನಡ ಜಿಲ್ಲೆಯ ಸಮಗ್ರ ಅಭಿವೃದ್ಧಿ ಯೋಜನ ಜಾರಿಗೆ ಒತ್ತಾಯ, 2. ಕೋಮುವಾದವನ್ನು ಹಿಮ್ಮೆಟ್ಟಿಸಿ ಕೋಮು ಸೌಹಾರ್ದತೆ ಬಲಪಡಿಸಲು ಒತ್ತಾಯ, 3. ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ತಡೆಗೆ ಮತ್ತು ಕೆಲಸದ ಸ್ಥಳದಲ್ಲಿ ಸೂಕ್ತ ರಕ್ಷಣೆ ಒದಗಿಸುವಂತೆ ಆಗ್ರಹ, 4. ವಿವಿಧ ಯೋಜನೆಗಳಿಂದ ನಿರಾಶ್ರಿತರಾದ ಜನತೆಗೆ ಯೋಗ್ಯ ಪುನರ್‌ವಸತಿ ನೀಡುವುದು ಮತ್ತು ಮನೆಗೊಂದು ಉದ್ಯೋಗ ನೀಡಲು ಆಗ್ರಹ, 5. ಅಂಕೋಲಾ- ಹುಬ್ಬಳ್ಳಿ ನಡುವೆ ರೈಲು ಮಾರ್ಗ ಪೂರ್ಣಗೊಳಿಸಲು ಅಗತ್ಯ ಹಣ ಬಿಡುಗಡೆಗೆ ಒತ್ತಾಯ, 6. ಅರಣ್ಯ ಅತಿಕ್ರಮಣ ಭೂಮಿ ಸಕ್ರಮಕ್ಕೆ ಯೋಗ್ಯ ಕಾನೂನು ಕ್ರಮ ತೆಗೆದುಕೊಳ್ಳಲು ಆಗ್ರಹ, 7. ಹೊಸ ಕೈಗಾರಿಕೆಗಳ ಸ್ಥಾಪನೆ ಮತ್ತು ಜಿಲ್ಲೆಯಲ್ಲಿ ಮುಚ್ಚಿರುವ ಕೈಗಾರಿಕೆಗಳ ಪುನಃಶ್ಚೇತನಕ್ಕೆ ಆಗ್ರಹ, 8.ಕಳಪೆ ಕಾಮಗಾರಿ ಮತ್ತು ಭ್ರಷ್ಟಾಚಾರ ತಡೆಗೆ ಅಗತ್ಯ ಕ್ರಮ ಕೈಗೊಳ್ಳಲು ಆಗ್ರಹ, 9. ಬಿಪಿಎಲ್ ಫಲಾನುಭವಿಗಳನ್ನು ಗುರುತಿಸುವಲ್ಲಿ ನಿಗದಿ ಮಾಡಿದ ವೈಜ್ಞಾನಿಕ ಮನದಂಡವನ್ನು ಕೈಬಿಡಲು ಆಗ್ರಹ ಮತ್ತು ಫೋನ್, ಗ್ಯಾಸ್, ದ್ವಿಚಕ್ರ ವಾಹನ, ಅರೆಕಾಲಿಕ ನೌಕರರಿಗೆ ಬಿಪಿಎಲ್ ಕೊಡಲು ಆಗ್ರಹ, 10. ಜಿಲ್ಲೆಯ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚುತ್ತಿರುವ ಡೊನೇಶನ್ ಹಾವಳಿ ನಿಯಂತ್ರಣಕ್ಕೆ ಆಗ್ರಹ, 11. ಉದ್ಯೋಗದ ಖಾಯಮಾತಿಗೆ ಆಗ್ರಹ, 12. ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆ 2004ನ್ನು ತಕ್ಷಣ ಅಂಗೀಕರಿಸಲು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

ಸಮಾರೋಪ

ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ ಸಮಾರೋಪ ಭಾಷಣ ಮಾಡಿದರು. ಹೋರಾಟಕ್ಕೆ ಸ್ಫೂರ್ತಿ ನೀಡಿದರು. ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಶಾಂತಾರಾಂ ನಾಯಕ್ ಆಯ್ಕೆಯಾದರು.

- ವಿಠ್ಠಲ ಭಂಡಾರಿ

ಆಕ್ರಮಣಕಾರಿ ಪರಿಸ್ಥಿತಿಯನ್ನು ಎದುರಿಸೋಣ - ಪಕ್ಷ ಬಲಪಡಿಸೋಣ

ಸಿಪಿಎಂ 7ನೇ ಬಳ್ಳಾರಿ ಜಿಲ್ಲಾ ಸಮ್ಮೇಳನದ ಕರೆ

ಬಳ್ಳಾರಿ ಜಿಲ್ಲೆಯ ಆರ್ಥಿಕ, ಸಾಮಾಜಿಕ, ರಾಜಕೀಯ ಆಯಾಮಗಳ ಬಗ್ಗೆ ಗಂಭೀರವಾದ ಚಿಂತನ-ಮಂಥನ ನಡೆಸಿದ ಜಿಲ್ಲಾ ಸಮ್ಮೇಳನ ಬದಲಾಗುತ್ತಿರುವ ಸಂದರ್ಭದಲ್ಲಿ ದುಡಿಯುವ ವರ್ಗದ ಚಳುವಳಿಯನ್ನು ತೀವ್ರಗೊಳಿಸಲು ನಿರ್ಧರಿಸಿತು. ದುಡಿಯುವ ವರ್ಗದ ಕಣ್ನೋಟ - ಚಳುವಳಿಯ ಹಾದಿಯ ಕುರಿತು ಸಮ್ಮೇಳನದ ವರದಿ ಇಲ್ಲಿ...

ಭಾರತ-ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ 7ನೇ ಬಳ್ಳಾರಿ ಜಿಲ್ಲಾ ಸಮ್ಮೇಳನ ಡಿಸೆಂಬರ್ 26 ರಿಂದ 28ರವರೆಗೆ ಶಿರಗುಪ್ಪ ಪಟ್ಟಣದ ಮಂಜುನಾಥ ಕಲ್ಯಾಣಮಂಟಪದ ಕಾಂ.ಸೂರ್ಯನಾರಾಯಣರಾವ್ ಸಭಾಂಗಣದಲ್ಲಿ ಅತ್ಯಂತ ಯಶಸ್ವಿಯಾಗಿ ನೆರವೇರಿತು.

26 ರಂದು ಮಧ್ಯಾಹ್ನ 1 ಗಂಟೆಗೆ ಜಿಲ್ಲಾಯಾದ್ಯಂತ ಸಿಪಿಐ(ಎಂ)ನ ಕಾರ್ಯಕರ್ತರು, ಪ್ರತಿನಿಧಿಗಳು, ಬೆಂಬಲಿಗರು 1500ಕ್ಕೂ ಹೆಚ್ಚು ಜನ ಶಿರುಗುಪ್ಪಾ ಪಟ್ಟಣದಲ್ಲಿ ಕೋಮು ಸೌಹಾರ್ದತಾ



ರ್‍ಯಾಲಿ ನಡೆಸಿದರು. ನಂತರ ತಾಲೂಕಾ ಕ್ರೀಡಾಂಗಣದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಾಟುಗೊಂಡರು. ವಿ.ಎಸ್.ಶಿವಶಂಕರ್ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತಪ್ಪ, ಪ್ರಸನ್ನಕುಮಾರ್, ಕೆ.ನೀಲಾ ಮಾತನಾಡಿದರು. ಕರ್ನಾಟಕ ರಾಜ್ಯ ಸರ್ಕಾರ ಬಾಬಾಬುಡನ್‌ಗಿರಿಯಲ್ಲಿ ಸಂಘ ಪರಿಹಾರದ ಕೋಮುವಾದಿ ಆಟವನ್ನು ಯಶಸ್ವಿಯಾಗಿ ಎದುರಿಸುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಾತ್ರವಲ್ಲ ಜನತೆ ಜಾಗೃತಿಯಿಂದ ಸಂಘ-ಪರಿವಾರದ ಕೃತ್ಯಗಳನ್ನು ತಿರಸ್ಕರಿಸಿ ವಿಫಲಗೊಳಿಸಬೇಕೆಂದು ಕರೆ ನೀಡಿದರು. ಅದೇ ಸಂದರ್ಭದಲ್ಲಿ ಕೋಮುವಾದಿ ಬಿಜೆಪಿ ಅಧಿಕಾರಕ್ಕೆ ಬರದಂತೆ ತಡೆದು ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ರಚಿಸಿದ್ದು ಸ್ವಾಗತಾರ್ಹವೆ ಆದರೂ; ಈ ಸರ್ಕಾರ ಚುನಾವಣೆಗಳಲ್ಲಿ ಜನಗಳು ನೀಡಿದ ತೀರ್ಪನ್ನು ಪರಿಗಣಿಸುತ್ತಿಲ್ಲ ಮತ್ತು ಅವರ ಬೇಡಿಕೆಗಳು ಉಪೇಕ್ಷೆಗೊಳಗಾಗಿವೆ. ಒಂದೆರಡು ಅಂಶಗಳನ್ನು ಹೊರತುಪಡಿಸಿದರೆ ಹಿಂದಿನ ಸರ್ಕಾರದ ಧಾಟಿಯಲ್ಲೇ ಮುನ್ನಡೆಯುತ್ತಿರುವುದು ವಿಷಾಧನೀಯವೆಂದರಲ್ಲದೆ ಜನತೆ ಮತ್ತಷ್ಟು ಸಂಘಟಿತವಾಗಿ ಪ್ರತಿರೋಧಿಸಬೇಕೆಂದು ಕರೆ ನೀಡಿದರು. ಯು.ಬಸವರಾಜ್ ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ನೀತಿಗಳಿಂದ ಜಿಲ್ಲೆಯಲ್ಲಾದ ಪರಿಣಾಮಗಳನ್ನು ಹಾಗೂ ಬೆಳವಣಿಗೆಗಳನ್ನು ತೆರೆದಿಟ್ಟರು. ಇದರಿಂದ ಜಿಲ್ಲೆಯ ಕೈಬೆರಳೆಣಿಕೆಯ ಕೆಲವೇ ಶ್ರೀಮಂತರು ಲಾಭ ಪಡೆದರಲ್ಲದೇ ಲಕ್ಷಾಂತರ ದುಡಿಯುವ ಕೂಲಿಕಾರರು, ರೈತರು, ಕಾರ್ಮಿಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆಂದು ವಿವರಿಸಿದರು. ಬಹಿರಂಗ ಸಭೆಯ ಆರಂಭದಲ್ಲಿ ಬಿ.ಆಡಿವೆಪ್ಪ ಶಿರುಗುಪ್ಪ ಸ್ಥಳೀಯ ಸಮಿತಿ ಕಾರ್ಯದರ್ಶಿ ಸ್ವಾಗತಿಸಿದರೆ ಸ್ವಾಗತ ಸಮಿತಿ ಉಪಾಧ್ಯಕ್ಷರಾದ ಹೆಚ್.ತಿಪ್ಪಯ್ಯ ವಂದಿಸಿದರು.

ನಂತರ ಸಂಜೆ ಡಿ.ವೆಂಕಟರಮಣ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು ಧ್ವಜಾರೋಹಣ ನೆರವೇರಿಸುವುದರೊಂದಿಗೆ 7ನೇ ಜಿಲ್ಲಾ ಸಮ್ಮೇಳನ ವಿಧ್ಯುಕ್ತವಾಗಿ ಆರಂಭಗೊಂಡಿತು.

ಉದ್ಘಾಟನೆ : ಸಮ್ಮೇಳನವು ಪ್ರತಿನಿಧಿ ಅಧಿವೇಶನವನ್ನು ನಡೆಸಿಕೊಡಲು ರಾವ್, ತಿಪ್ಪಯ್ಯ, ಬಿ.ಗಣೇಶಪ್ಪ, ಯು.ಎಸ್.ಶಿವಶಂಕರ್ ಹಾಗೂ ಕೆ.ನಾಗರತ್ನಮ್ಮ ಇರುವ ಅಧ್ಯಕ್ಷೀಯ ಮಂಡಳಿಯನ್ನು ಆಯ್ಕೆ ಮಾಡಿತು. ಅದೇ ರೀತಿ ಡಿ.ವೆಂಕಟರಮಣ ಸಂಚಾಲಕರಿರುವ ನಿರ್ಣಯ ಮಂಡಳಿಯನ್ನು ಆಯ್ಕೆ ಮಾಡಿತು. ಎಸ್.ವೈ.ಗುರುಶಾಂತ್ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಪ್ರತಿನಿಧಿ ಅಧಿವೇಶನವನ್ನು ಉದ್ಘಾಟನೆ ಮಾಡಿದರು. ಬಳ್ಳಾರಿ ಜಿಲ್ಲೆಯಲ್ಲಿ ಸಿಪಿಐ(ಎಂ) ಬೆಳೆದು ಬಂದ ಹಾದಿಯನ್ನು ಅವರು ಜ್ಞಾಪಿಸಿದರು. ಸಾದಾ, ಸೀದಾ ಬೆಳೆದದ್ದೆಲ್ಲಾ ತೀವ್ರ ಸಂಘರ್ಷ ನಡೆಸಿ ಈ ದಿನದ ಸಾಧನೆಯನ್ನು ಗೈಯ್ಯಲಾಗಿದೆ. ಹೊಸ ಸನ್ನಿವೇಶದಲ್ಲಿರುವ ಕಠಿಣ ಸವಾಲುಗಳನ್ನು ಎದುರಿಸಲು ಸಮ್ಮೇಳನ ವಿವರವಾಗಿ ಚರ್ಚಿಸಿ ಮುನ್ನಡೆಯಲು ಕರೆ ನೀಡಿದರು. ಕಳೆದ ಚುನಾವಣೆಯಲ್ಲಿ ಜನತೆ ನೀಡಿದ ತೀರ್ಪು ಹಾಗೂ ಸಿಪಿಐ(ಎಂ) ಹಾಗೂ ಎಡಶಕ್ತಿಗಳಿಗೆ ಕೇಂದ್ರದಲ್ಲಿ ಸಿಕ್ಕ ಸ್ಥಾನಮಾನ ಹಾಗೂ ಅವರಿಂದುಂಟಾದ ಪರಿಸ್ಥಿತಿ ಪ್ರಭಾವಗಳಿಂದಾದ ಅವಕಾಶಗಳನ್ನು ಬಳಸಿಕೊಳ್ಳಲು ಗಮನ ಸೆಳೆದರು. ಜಾಗತಿಕವಾಗಿ ಬೆಳೆದುಬರುತ್ತಿರುವ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧದ ಹೋರಾಟಗಳು, ಜನಚಳುವಳಿಗಳ ಮುನ್ನಡೆಯ ಅವಕಾಶವನ್ನು ತೆರೆದಿಟ್ಟಿವೆ ಎಂದು ತೋರಿಸಿಕೊಟ್ಟರು.

ಕಾರ್ಯದರ್ಶಿ ಯು.ಬಸವರಾಜ್‌ರವರು ಕರಡು ವರದಿಯನ್ನು ಮಂಡಿಸಿದರು. ಕಳೆದ 3 ವರ್ಷಗಳಲ್ಲಿ ಜಿಲ್ಲೆಯಲ್ಲಾದ ಬೆಳವಣಿಗೆಗಳನ್ನು ವರದಿ ತೆರೆದು ತೋರಿಸಿದೆ. ಚೀನಾ ದೇಶದ ಜೊತೆ ಜಾಗತೀಕರಣದ ಭಾಗವಾಗಿ ಕುದುರಿದ ಗಣಿ ಉದ್ಯಮ ವ್ಯಾಪಾರವು ಜಿಲ್ಲೆಯ ಆದಾಯವನ್ನು 8-60 ಪಟ್ಟು ಹೆಚ್ಚಿಸಿದೆಯೆಂದು, ಅದರ ಲಾಭದಿಂದಾಗಿ ಬೆಳೆದದ ಗಣಿ ಉದ್ಯಮಗಳು, ರಾಜಕೀಯ ಅಧಿಕಾರವನ್ನು ಬಳಸಿಕೊಂಡು ಜಿಲ್ಲೆಯ ಜನತೆಯ ಮೇಲೆ ಹರಿಬಿಟ್ಟಿರುವ ದಾಳಿಗಳನ್ನು ಬೆರಳು ಮಾಡಿ ತೋರಿಸಿದೆ. ಕೇವಲ 2000 ರೂ.ಗಳಿಗೆ ಒಂದು ಟನ್ ಮಾರಾಟವಾಗುತ್ತಿದ್ದ ಮೈನ್ಸ್ ಧೂಳು ಇದೀಗ ಪ್ರತಿ ಟನ್‌ಗೆ 200 ದಷ್ಟು ಪಡೆಯುತ್ತಿದ್ದು ಜಿಲ್ಲೆಯಲ್ಲಿ ಸಾವಿರಾರು ಕೋಟಿ ರೂ. ಆಸ್ತಿವಂತರನ್ನು ಹತ್ತಾರು ಸಂಖ್ಯೆಯಲ್ಲಿ ಸೃಷ್ಟಿಸಿದೆ. ಇವರ ಗಣಿಗಾರಿಕೆಯಿಂದ ಲಕ್ಷಾಂತರ ರೈತರು ಲಕ್ಷಾಂತರ ಜಾನುವಾರುಗಳು, ಜಿಲ್ಲೆಯ ಎಲ್ಲಾ ಮುಖ್ಯ ರಸ್ತೆಗಳು, ಗಣಿಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರು, ಹಲವು ಗ್ರಾಮಗಳು ಪರಿಸರ ಮಾಲಿನ್ಯದಿಂದ ತೀವ್ರ ತೊಂದರೆಗೊಳಗಾಗಿರುವುದನ್ನು ವಿವರಿಸಿದರು. ಗಣಿ ಉದ್ಯಮಿಗಳೀಗ ಬೆಳೆದು ಜಿಲ್ಲೆಯ ಉನ್ನತ ಅಧಿಕಾರಿಗಳ ಮಾತಿಗೆ ಕಿವಿಗೊಡದೇ ಕಾನೂನನ್ನು ಮೀರಿ ಎಗ್ಗಿಲ್ಲದೆ ಅನಧಿಕೃತ ವಹಿವಾಟು ನಡೆಸುತ್ತಿದ್ದಾರೆ. ಅದೇ ಗ್ರಾಮೀಣ ಪ್ರದೇಶದಲ್ಲಿ ಅವರಲ್ಲೂ ಮುಖ್ಯವಾಗಿ ನೀರಾವರಿ ಪ್ರದೇಶದಲ್ಲಿ ಭೂಮಾಲಕ-ಬಂಡವಾಳಶಾಹಿದಾರರು ಬೆಳೆದು ಪ್ರತಿವರ್ಷ 5 ಕೋಟಿಗೂ ಅಧಿಕ ಲಾಭವನ್ನು ಮಾಡುತ್ತಿದ್ದಾರೆಂದರು. 200-300 ಸಂಖ್ಯೆಯಲ್ಲಿರಬಹುದಾದ ಇವರು ಗ್ರಾಮೀಣ ಪ್ರದೇಶವನ್ನು ತಮ್ಮ ಬಿಗಿಯುವ ಕಪಿಮುಷ್ಟಿಯಲ್ಲಿಟ್ಟುಕೊಂಡಿದ್ದಾರೆ. ಈ ಹಿಂದೆ ಮಧ್ಯಮ ರೈತರು ಸ್ವತಂತ್ರವಾಗಿ ಅನ್ಯಾಯ ಅಕ್ರಮಗಳನ್ನು ಕೇಳುವಂತೆ ಇದ್ದ ಪರಿಸ್ಥಿತಿ ಜಾಗತೀಕರಣ ಮತ್ತು ಇತರ ಬೆಳವಣಿಗೆಯಿಂದ ಅವರು ಸ್ವಾತಂತ್ರ್ಯ ಕಳೆದುಕೊಂಡಿದ್ದಾರೆ.

ಕೂಲಿಕಾರರ ಸಂಖ್ಯೆ ವ್ಯಾಪಕವಾಗಿ ಬೆಳೆದಿದೆ. ಭೂಮಿಯು ಭೂಮಾಲಕರ ಕೈಯಲ್ಲಿ ಭಾರಿ ಪ್ರಮಾಣದಲ್ಲಿ ಕ್ರೋಢೀಕರಣಗೊಳ್ಳುತ್ತಿದೆ. 50 ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಲವು ಜನ ಕೂಲಿಕಾರರು ಹಸಿವಿನಿಂದ ಸತ್ತಿದ್ದಾರೆ. ಯಂತ್ರಗಳ ಹಾವಳಿಯಿಂದ ಕೂಲಿಕಾರರ ಕೆಲಸದ ದಿನಗಳು 30-40 ದಿನಗಳಿಗೆ ಕುಸಿದಿದೆ. ಕಳೆದ 5 ವರ್ಷಗಳಲ್ಲಿ ಜಿಲ್ಲಾಯು 3 ಬಾರಿ ಬರಗಾಲ ಎದುರಿಸಿತು. 200-300 ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ವರದಿಯಾಯಿತು. ಈಗಲೂ ಈ ಹಳ್ಳಿಗಳಲ್ಲಿ ಫ್ಲೋರೈಡ್ ವಿಷವಿರುವ ನೀರೇ ಕುಡಿಯಲು ಬಳಸುತ್ತಿದ್ದು ಕೊನೆಯ ಪಕ್ಷ ಫ್ಲೋರೈಡ್ ಫಿಲ್ಟರ್ ಕೊಡಿಸಲು ಜಿಲ್ಲಾ ಪಂಚಾಯತ್ ವಿಫಲವಾಗಿದೆಯೆಂದು ಟೀಕಿಸಿದರು. ಕಳೆದ 20-25 ವರ್ಷಗಳಿಂದ ಹೊಸ ಪ್ರದೇಶವೂ ನೀರಾವರಿಗೊಳಪಡದೇ ಇದ್ದುದರಿಂದ ಜಿಲ್ಲೆಯೊಳಗೆ ಅಸಮಾನತೆ ಹಾಗೆ ಮುಂದುವರೆದಿದೆ. ಶೇ.70ರಷ್ಟು ಮಳೆಯಾಧಾರಕ್ಕೆ ಬಿತ್ತಿರುವುದರಿಂದ ಜಿಲ್ಲೆಯ ಸರಾಸರಿ ಆಹಾರ ಧಾನ್ಯದ ಉತ್ಪಾದನೆ ಮಳೆಯನ್ನಾಧರಿಸಿ ಏರಿಳಿತ ಹೊಂದಿದೆ. ಸರಾಸರಿ ಉತ್ಪಾದನೆ ಜಿಲ್ಲೆಯ ಜನತೆಯ ಅಗತ್ಯದ ಶೇ.40 ರಷ್ಟು ಆಗುತ್ತಿಲ್ಲ. ಆಹಾರಧಾನ್ಯದ ಉತ್ಪಾದನೆಗೆ ಫಲವತ್ತಾದ ಜಮೀನು, ಸಂಪನ್ಮೂಲ ಹೊಂದಿ ಪರಾವಲಂಬಿಯಾಗಿರುವುದನ್ನು ತಿಳಿಸಿದರು. ಜಿಲ್ಲೆಯಾದ್ಯಂತ ಅಭಿವೃದ್ಧಿ ಉದ್ಯೋಗರಹಿತ ಅಭಿವೃದ್ಧಿಯಾಗಿದೆ. ಈ ಅವಧಿಯಲ್ಲೆ ಸಕ್ಕರೆ ಕಾರ್ಖಾನೆಗಳು ಹಾಗೂ ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್ ಮುಚ್ಚಿ ಹೋಗಿ ಸಾವಿರಾರು ಕಾರ್ಮಿಕ ಕುಟುಂಬಗಳನ್ನು ಬೀದಿ ಪಾಲು ಮಾಡಿವೆಯೆಂದರು. ಎಸ್.ಎಂ.ಕೃಷ್ಣ ಸರ್ಕಾರ ನಿರ್ವಹಿಸಿದ ರೀತಿಯಿಂದ ಬೇಸತ್ತ ಜಿಲ್ಲೆಯ ಜನತೆ ಕಾಂಗ್ರೆಸ್ಸನ್ನು ತೀವ್ರವಾಗಿ ಸೋಲಿಸಿದ್ದು, ಇದನ್ನು ಸೋಲಿಸಲು 3 ಕ್ಷೇತ್ರಗಳಲ್ಲಿ ಜೆ.ಡಿ(ಎಸ್) ಬಳಸಿದರೆ ಇನ್ನೂ 3 ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಜನತೆ ಆಯ್ಕೆ ಮಾಡಿಕೊಂಡರಲ್ಲದೇ, ಜನತಾದಳ(ಎಸ್)ನೊಳಗಿನ ಅತೃಪ್ತಿಯನ್ನು ಹಾಗೂ ಒಳಜಗಳ ಬಳಸಿಕೊಂಡು ಪಾರ್ಲಿಮೆಂಟ್ ಸ್ಥಾನವನ್ನು ಬಿಜೆಪಿ ಪಡೆದು ಗಣನೀಯವಾದ ಶಕ್ತಿಯಾಗಿ ಬೆಳೆದು ಬಂದಿರುವುದನ್ನು ಹಾಗೂ ಅದು ಆರ್‌ಎಸ್‌ಎಸ್‌ನ ಮಾರ್ಗದರ್ಶನದಲ್ಲಿ ಜಿಲ್ಲೆಯ ಸಮಾಜಶೀಲ ಜನವಿಭಾಗಗಳನ್ನು ಜಂಟಿ ಸಂಘಟನೆ ಆಧಾರದಲ್ಲಿ ತನ್ನ ತಳಹದಿ ಮಾಡಿಕೊಂಡು ಮುನ್ನಡೆಯುತ್ತಿರುವುದು ಅಪಾಯಕಾರಿ ಪರಿಸ್ಥಿತಿಯೆಡೆಗೆ ಜಿಲ್ಲೆಯು ಸಾಗುತ್ತಿರುವುದನ್ನು ವರದಿ ತೆರೆದು ತೋರಿಸಿದೆ. ಕೋಮುವಾದಿ ಶಕ್ತಿಗಳು ಈಗ ಜಿಲ್ಲೆಯ ಪ್ರತಿಷ್ಠಿತ ಹಣಕಾಸು ಸಂಸ್ಥೆಯನ್ನು ಹಾಗೂ ರಾಜಕೀಯ ಶಕ್ತಿಗಳ ಆಶ್ರಯದಲ್ಲಿರುವ ಮಾಫಿಯಾವನ್ನು ದಾಳವಾಗಿ ಬಳಸುತ್ತಿರುವುದು ಜನತೆಯ ಮೇಲೆ ಮುಂಬರುವ ದಾಳಿಗಳ ಮುನ್ಸೂಚನೆಯಾಗಿದೆ ಎಂದು ವಿವರಿಸಿದರು.

ಪಕ್ಷದ ಸದಸ್ಯತ್ವದಲ್ಲಿ ಏರಿಳಿತವಿದೆ. ಕಳೆದ ಸಮ್ಮೇಳನದಿಂದ ನಮ್ಮ ಸದಸ್ಯತ್ವ ಕುಸಿತವಾಗಿದೆ. ಸಾಮೂಹಿಕ ಚಳುವಳಿ ವಿಸ್ತಾರಗೊಂಡಿದೆ. ಜಾಗತೀಕರಣದ ಭಾಗವಾಗಿ ಬಂದ ಜನಗಳ ಮೇಲಿನ ಆಕ್ರಮಣ ಹಾಗೂ ಜಿಲ್ಲೆಯಲ್ಲಾದ ರಾಜಕೀಯ ಸ್ಥಿತ್ಯಂತರಗಳು ಜಿಲ್ಲೆಯ ಜನಗಳ ಮೇಲೆ ಆಕ್ರಮಕಾರಿಗಳಾಗಿವೆ. ಜನತೆಯೊಳಗೆ ಬೆಳೆಯುತ್ತಿರುವ ಅತೃಪ್ತಿಯನ್ನು ಕ್ರೋಢೀಕರಿಸಲು, ಈ ಸವಾಲನ್ನು ಎದುರಿಸಲು ಈ ದಿನಗಳಲ್ಲಿ ಮಾಡಿದ ಕೆಲಸದ 2-3 ರಷ್ಟು ಕೆಲಸವನ್ನು ನಾವು ಮಾಡಬೇಕಾಗಿದೆಯೆಂದು ತಿಳಿಸಿದರು. ಇದಕ್ಕಾಗಿ ಕಾರ್ಯಕರ್ತರ ನಿಯೋಜನೆ ಮತ್ತು ಪೂರ್ಣಾವಧಿ ಕಾರ್ಯಕರ್ತರನ್ನು ವ್ಯಾಪಕವಾಗಿ ನಿರ್ಮಿಸಿಕೊಂಡು ಮುನ್ನಡೆಯುವುದು, ಅದಕ್ಕಾಗಿ ಸಂಪನ್ಮೂಲವನ್ನು ಆಂದೋಲನವಾಗಿ ಸಂಗ್ರಹಿಸಲು ಮುಂದಾಗಬೇಕೆಂದು ಕರೆ ನೀಡಿದರು.


ಸುಮಾರು 32 ಸಂಗಾತಿಗಳು (8 ಮಹಿಳಾ ಪ್ರತಿನಿಧಿಗಳು ಸೇರಿ) ವರದಿಯ ಮೇಲೆ ಚರ್ಚೆ ಮಾಡಿದರು. ತಮ್ಮ ಅನುಭವವನ್ನು ಬೆರೆಸಿ ವರದಿಯನ್ನು ಬೆಂಬಲಿಸಿ ಮಾತನಾಡಿದರು.

ನಿರ್ಣಯ ಮಂಡಳಿಯು ಒಟ್ಟು 12 ನಿರ್ಣಯಗಳನ್ನು ಸಮ್ಮೇಳನದ ಮುಂದೆ ಮಂಡಿಸಿ ಅನುಮೋದನೆ ಪಡೆಯಿತು. ಹೊಸಸಮಿತಿ ಆಯ್ಕೆ, ರಾಜ್ಯಸಮ್ಮೇಳನದ ಪ್ರತಿನಿಧಿಗಳ ಆಯ್ಕೆಯೊಂದಿಗೆ ಮತ್ತು ಸಿಪಿಐ(ಎಂ) ಬಳ್ಳಾರಿ ಜಿಲ್ಲೆಯಲ್ಲಿ ಹುಟ್ಟಿ 25 ವರ್ಷಗಳಾಗುತ್ತಿದ್ದು ಬೆಳ್ಳಿಹಬ್ಬದ ಸಂಭ್ರಮಾಚರಣೆಗೆ ಮುನ್ನಡೆಯಲು ನಿರ್ಣಯಿಸುವುದರೊಂದಿಗೆ ಸಮ್ಮೇಳನ ಗೆಲುವು ನಮ್ಮದೋ ಹಾಡಿದೊಂದಿಗೆ ಮುಕ್ತಾಯವಾಯಿತು.

ಸಮಾರೋಪ ಭಾಷಣವನ್ನು ಕೆ.ನೀಲಾ ಮಾಡಿದರು. ಅದೇ ರೀತಿ ಪ್ರಸನ್ನಕುಮಾರ್ ಪ್ರತಿನಿಧಿಗಳು ಕರಡಿನ ಮೇಲೆ ಚರ್ಚಿಸಬೇಕಾದ ದಿಕ್ಕನ್ನು ಕೇಂದ್ರ ಸಮಿತಿ ನೀಡಿದ ಮಾರ್ಗದರ್ಶನದ ಆಧಾರದಲ್ಲಿ ಗಮನ ಸೆಳೆದರು.

ಬಳ್ಳಾರಿ ಜಿಲ್ಲಾ 8ನೇ ಸಮ್ಮೇಳನ ಒಟ್ಟು 21 ಜನರ ಜಿಲ್ಲಾಸಮಿತಿಯನ್ನು ಆಯ್ಕೆ ಮಾಡಿತು. ಇದರಲ್ಲಿ ಒಬ್ಬರು ಮಹಿಳಾ ಸಂಗಾತಿ ಇದ್ದಾರೆ. ಯು.ಬಸವರಾಜ್ ನೂತನ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆಯಾದರು. ಅದೇ ರೀತಿ ಡಿ.ವೆಂಕರಮಣ, .ವಿ.ಎಸ್.ಶಿವಶಂಕರ್, ಬಿ.ಗಣೇಶಪ್ಪ, ಇ.ಆರ್.ಯಲ್ಲಪ್ಪ, ಆರ್.ಎಸ್.ಬಸವರಾಜ್‌ರವರನ್ನೊಳಗೊಂಡ ಜಿಲ್ಲಾ ಕಾಯದರ್ಶಿ ಮಂಡಳಿಯು ಸರ್ವಾನುಮತದಿಂದ ಆಯ್ಕೆಯಾಯಿತು.

ಉಡುಪಿಯಲ್ಲಿ ನಡೆಯುವ 18ನೇ ರಾಜ್ಯ ಸಮ್ಮೇಳನಕ್ಕೆ ಇಬ್ಬರು ಮಹಿಳಾ ಪ್ರತಿನಿಧಿಗಳಿರುವ ಒಟ್ಟು 11 ಪ್ರತಿನಿಧಿಗಳನ್ನು ಸಮ್ಮೇಳನ ಆಯ್ಕೆ ಮಾಡಿತು.



ನೆರೆದ ಜನ

ವಿದೇಶಿ ವಿನಿಮಯ ಶಿಲ್ಕಿನ ಭಾರ

ವಿದೇಶೀ ವಿನಿಮಯದ ಶಿಲ್ಕು 130.7 ಶತಕೋಟಿ ಡಾಲರುಗಳನ್ನು ಮುಟ್ಟಿದೆ. 1991ರಲ್ಲಿ ವಿದೇಶೀ ವಿನಿಮಯದ ಕೊರತೆ ತೀವ್ರವಾಗಿ, ಭಾರತದ ವಿಶ್ವಾಸಾರ್ಹತೆ ಹಾಳಾಗುತ್ತದೆ ಎಂದೆಲ್ಲ ಅಂದು ಉದಾರೀಕರಣ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿತ್ತು. ಇಂದು ಅಂತಹ ಉದಾರೀಕರಣದಿಂದಾಗಿ ಇಷ್ಟೊಂದು ವಿದೇಶೀ ವಿನಿಮಯದ ಶಿಲ್ಕು ಬೆಳೆದಿದೆ. ಈ ವಿದೇಶೀ ವಿನಿಮಯದ ಶಿಲ್ಕು ಇಷ್ಟೊಂದು ಪ್ರಮಾಣದಲ್ಲಿ ಬೆಳೆದಿರುವುದು ಒಳ್ಳೆಯದೋ ಕೆಟ್ಟದ್ದೋ ನಮ್ಮ ದೇಶಕ್ಕೆ ಎಂಬುದು ಪ್ರಶ್ನೆ. ಲಾಭವರಸಿ ಬಂದ ಈ ಡಾಲರುಗಳನ್ನು ಸುಮ್ಮನೆ ಇಟ್ಟುಕೊಂಡು ವಿದೇಶೀ ಹೂಡಿಕೆದಾರರಿಗೆ ಪ್ರತಿಫಲ ನೀಡುವುದಾದರೆ ಇದು ಖಂಡಿತವಾಗಿಯೂ ನಮ್ಮ ದೇಶದ ಆರ್ಥಿಕಕ್ಕೆ ಹಾನಿಯನ್ನೇ ಮಾಡುತ್ತದೆ. ಬದಲಿಗೆ ಈ ಹಣವನ್ನು ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿ ಉತ್ಪಾದನೆ ಹೆಚ್ಚಿಸಲು ನಮ್ಮ ಆರ್ಥಿಕ ಬೆಳೆಯಲು ಉಪಯೋಗಿಸಿಕೊಂಡರೆ ಖಂಡಿತವಾಗಿಯೂ ಇದರಿಂದ ಒಳ್ಳೆಯದಾಗಬಹುದು.

ಆದರೆ ಈ ಹಣವನ್ನು ಬಳಸಿಕೊಳ್ಳುವುದು ಅಷ್ಟು ಸುಲಭವಲ್ಲ. ಯಾಕೆಂದರೆ ಇದು ಲಾಭ ಪಿಪಾಸೆಯಿಂದ ಬಂದ ಹಾಟ್‌ಮನಿ. ಇದು ಎಷ್ಟು ದಿನ ಇಲ್ಲಿ ಉಳಿದೀತು ಎಂದು ಹೋದೀತು ಎಂಬುದಕ್ಕೆ ಭರವಸೆಯಿಲ್ಲ. ಆದ್ದರಿಂದಲೇ ಈ ಶಿಲ್ಕು ನಮಗೆ ಭರವಾಗಿ ಪರಿಣಮಿಸುವುದು. ಇಂದು ಎಂತಹ ಪರಿಸ್ಥಿತಿ ಉಂಟಾಗಿದೆಯೆಂದರೆ ಬೂರ್ಜ್ವ ಅರ್ಥಶಾಸ್ತ್ರಜ್ಞರೂ ಈ ಹಣವನ್ನು ನಾವು ಬಹಳ ಎಚ್ಚರಿಕೆಯಿಂದ ಬಳಸಿಕೊಳ್ಳಬೇಕು ಎಂದು ಹೇಳುತ್ತಿದ್ದಾರೆ. ಈ ಹಣವನ್ನು ಸರಿಯಾಗಿ ಬಳಸಿಕೊಳ್ಳಲು ರಾಷ್ಟ್ರೀಯ ನೀತಿಯೊಂದನ್ನೂ ನಾವು ರೂಪಿಸಿಕೊಳ್ಳಬೇಕೆಂದು ಅವರು ಹೇಳುತ್ತಾರೆ.

ಹಾಗೆ ನೀತಿ ರೂಪಿಸ ಹೊರಟಾಗಿ ವಿದೇಶೀ ನೇರ ಹೂಡಿಕೆದಾರರು, ಐ.ಎಂ.ಎಫ್, ವಿಶ್ವಬ್ಯಾಂಕುಗಳು ಏನು ಮಾಡುತ್ತದೆ ಎಂಬುದೂ ಪ್ರಶ್ನೆ.

ಒಂದು ವಾದ ಈ ಹಣವನ್ನು ದೇಶದಲ್ಲಿ ಅಂತರ್ರಚನಾ ಸೌಕರ್ಯಗಳನ್ನು ಬೆಳೆಸುವ ಕ್ರಿಯೆಯಲ್ಲಿ ಬಳಸಬೇಕು ಎಂಬುದು. ಮತ್ತೆ ಪ್ರಶ್ನೆ ಇಂತಹದ್ದನ್ನು ನಮ್ಮ ದೇಶದ ಜನರಿಗೆ ಉದ್ಯೋಗ ನೀಡುವ ರೀತಿಯಲ್ಲಿ ಮಾಡಬೇಕೋ ಅಥವಾ ವಿದೇಶೀ ತಂತ್ರಜ್ಞಾನಗಳನ್ನು ಬಳಸಿ ವಿದೇಶೀ ಕಂಪನಿಗಳಿಗೆ ಗುತ್ತಿಗೆ ನೀಡಬೇಕೋ ಎಂಬುದು.


ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಈ ಶಿಲ್ಕು ಬೆಳೆಯಲು ವಿದೇಶೀ ನೇರ ಹೂಡಿಕೆ ತೀವ್ರವಾಗಿ ಹೆಚ್ಚಿದೆ. ಇದು ಹೀಗೆ ಬೆಳೆಯಲು ಒಂದು ಮುಖ್ಯ ಕಾರಣ ರೂಪಾಯಿಯೆದುರು ಡಾಲರಿನ ಬೆಲೆ ಕುಸಿಯುತ್ತಿರುವುದು ಮುಖ್ಯವಾದದ್ದು.

ಯು.ಪಿ.ಎ. ಸರ್ಕಾರ ಈ ಬಾರವನ್ನು ದೇಶದ ಆರ್ಥಿಕ ಬೆಳೆಸಿ ಹಗುರಗೊಳಿಸಿಕೊಳ್ಳುವುದೊ ಅಥವಾ ದೇಶದ ಕೊರಳಿಗೆ ಈ ಉರುಳಿನ ಭಾರ ತಗುಲಿಸಿ ದೇಶವನ್ನು ಕಷ್ಟಕ್ಕೆ ಸಿಲುಕಿಸುತ್ತದೊ ನೋಡಬೇಕು.

ಶೇರು ಬೆಲೆ ಸೂಚ್ಯಂಕದ ಗಗನ ಯಾತ್ರೆ

ಶೇರು ಬೆಲೆ ಸೂಚ್ಯಂಕ 6402ಕ್ಕೆ ಏರಿದೆ. ಇದು ಶೇರು ಮಾರುಕಟ್ಟೆ ಇತ್ತೀಚಿನ ದಿನಗಳಲ್ಲೆಲ್ಲೂ ಕಾಣದ ಮಟ್ಟ. ಅತ್ಯಂತ ಹೆಚ್ಚಿನದೂ ಹೌದು.

ವಿದೇಶೀ ನೇರ ಹೂಡಿಕೆದಾರರ ಹೂಡಿಕೆಯೂ ಈ ಏರಿಕೆಗೆ ಒಂದು ಕಾರಣವಿರಬಹುದು. ಡಾಲರಿನ ಬೆಲೆ ರೂಪಾಯಿಗೆದುರು ಕುಸಿದು ಹೋದದ್ದೂ ನಮ್ಮಲ್ಲಿನ ವಿದೇಶೀ ನೇರ ಹೂಡಿಕೆ ಹೆಚ್ಚಿಸಲು ಕಾರಣವಾಗಿರಬಹುದು.



ಬಹುಮುಖ್ಯವಾದ ವಿಷಯವನ್ನು ನಮ್ಮ ಸಮೂಹ ಮಾಧ್ಯಮಗಳೂ ಮುಚ್ಚಿಡುತ್ತಿವೆ. ಯುಪಿಎ ಸರ್ಕಾರ ರಚನೆಯ ಸಮಯದಲ್ಲಿ ಎಡ ಪಕ್ಷಗಳ ಬೆಂಬಲದ ಮಾತು ಬಂದಾಗಲೇ ಶೇರು ಬೆಲೆ ಸೂಚ್ಯಂಕ ಪಾತಾಳಕ್ಕಿಳಿದು ಶೇರು ಮಾರುಕಟ್ಟೆ ಅಲ್ಲೋಲ ಕಲ್ಲೋಲವಾಗಿ ಎಡಪಕ್ಷಗಳು ಪಾತಕಿಗಳಂತೆ ಬಿಂಬಿಸಲ್ಪಟ್ಟಿದ್ದವು. ಈಗ ಬೆಲೆ ಸೂಚ್ಯಂಕ ಗಗನಕ್ಕೇರಿದದರೆ ಎಡಪಕ್ಷಗಳಿಗೆ ಈ ಯಶಸ್ಸಿನ ಋಣವನ್ನು ಯಾಕೆ ಮಾಧ್ಯಮಗಳು ನೀಡುತ್ತಿಲ್ಲಾ? ಬೂರ್ಜ್ವ ಮಾಧ್ಯಮಗಳ ನಿಜಗುಣ ಇದಲ್ಲವೇ. ತಮಗೆ ಬೇಕಾದವನ್ನು ತೆರೆದಿಟ್ಟು ಬೇಡವಾದದ್ದನ್ನು ಮುಚ್ಚಿಡುವುದು!

ಖಾಸಗಿಯವರಿಗೆ ದುಡಿತ! ದುಡಿತ!! ದುಡಿತ!!!

ಖಾಸಗಿ ವಲಯದಲ್ಲಿ ಕೆಲಸ ಮಾಡುವ ಆಧುನಿಕ ಉದ್ದಿಮೆಗಳಲ್ಲಿ ಅಂದರೆ ಕಾಲ್ ಸೆಂಟರ್‌ಗಳು, ಮಾಹಿತಿ ತಂತ್ರಜ್ಞಾನ ಕಂಪನಿಗಳು ವಿದೇಶೀ ಬ್ಯಾಂಕುಗಳು ಇತ್ಯಾದಿಗಳಲ್ಲಿ ಕೆಲಸ ಮಾಡುವವರಿಗೆ ವಿಶ್ರಾಂತಿ ಗಗನ ಕುಸುಮವಾಗಿ ಬಿಟ್ಟಿದೆ. ಸರ್ಕಾರೀ ರಜೆಗಳಂದೂ ಕೆಲಸ ಮಾಡುವ ಈ ಕಂಪನಿಗಳು ತಮ್ಮ ನೌಕರರಿಗೆ ವಿಶ್ರಾಂತಿ ತೆಗೆದುಕೊಳ್ಳಲು ಅವಕಾಶವನ್ನೇ ನೀಡುವುದಿಲ್ಲ.

ಪರಿಣಾಮವಾಗಿ, ಇಂತಹ ಕಂಪನಿಗಳಲ್ಲಿ ಕೆಲಸ ಮಾಡುವವರು ಬಹುತೇಕ ವಾರಾಂತ್ಯದಲ್ಲಿ ಕುಡಿತ, ಸಿಗರೇಟು ಇತ್ಯಾದಿ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರಂತೆ. ಒಮ್ಮೆ ಇಂತಹ ಚಟಗಳಿಗೆ ಬಲಿ ಬಿದ್ದವರು ಪುನಃ ಮೊದಲಿನ ಸ್ಥಿತಿಗೆ ಬರುವುದು ಬಹಳ ಕಷ್ಟ. ಎಳೆ ವಯಸ್ಸಿನಲ್ಲೇ ಇಂತಹ ಜೀವನ ಶೈಲಿಗೆ ಬಲಿಬಿದ್ದವರು ಮುಂದೆ ಸಮಸ್ಯೆಗಳ ಆಗರವೇ ಆಗಿ ಹೋಗುತ್ತಾರೆ. ಉದಾರೀಕರಣ ತರುವ ಸವಲತ್ತುಗಳೆಂಬ ಲಾಭಗಳು ಇಂತಹ ಪರಿಸ್ಥಿತಿಯಲ್ಲಿ ಕೊನೆಗೊಳ್ಳುತ್ತವೆ. ಜೈ ಉದಾರೀಕರಣ!

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಹೊಸ ಪೇಟೆಂಟ್ ಬರಲಿದೆ, ಜನಾರೋಗ್ಯಕ್ಕೆ ಆಪತ್ತು ತರಲಿದೆ

ಭಾರತದ ಪೇಟೆಂಟ್ ಕಾನೂನು, ಬಹುರಾಷ್ಟ್ರೀಯ ಕಂಪನಿಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತು. ಇದನ್ನು ಎದರಿಸಲು ಆ ಕಂಪನಿಗಳು ತಮ್ಮ ದೇಶಗಳ ಸರಕಾರದ ಮೇಲೆ ಒತ್ತಡ ತಂದವು. ಇದರಿಂದಾಗಿ ಮುಂದುವರಿದ ರಾಷ್ಟ್ರಗಳು, ಅದರಲ್ಲೂ ಅಮೇರಿಕಾ, ಅಂತರರಾಷ್ಟ್ರೀಯ ವ್ಯಾಪಾರ ಒಪ್ಪಂದ(ಗ್ಯಾಟ್)ವನ್ನು ತಮ್ಮ ಲಾಭಕ್ಕಾಗಿ ಬಳಸಿಕೊಂಡವು. 1986 ರಲ್ಲಿ ಉರುಗ್ವೇ ದೇಶದಲ್ಲಿ ನಡೆದ ಚರ್ಚೆಯಲ್ಲಿ ಡಂಕಲ್ ಪ್ರಸ್ತಾವನೆಯನ್ನು ಎಲ್ಲ ದೇಶಗಳ ಮುಂದಿಟ್ಟು, ಔಷಧಿ ಆಸ್ತಿ ಹಕ್ಕು ವಿಷಯವನ್ನು, ವ್ಯಾಪಾರ ಒಪ್ಪಂದವಾಗಿ ಪರಿವರ್ತಿಸಿ ಎಲ್ಲ ದೇಶಗಳು ಒಪ್ಪುವಂತೆ ಒತ್ತಡ ತಂದು, ವ್ಯಾಪಾರ ಚರ್ಚೆಯನ್ನು ತಮ್ಮ ಲಾಭಕ್ಕಾಗಿ ಬಳಸಿಕೊಂಡವು. ಸಾಲದ ಒತ್ತಡ ಹಾಗೂ ಹೊಸ ಸಾಲ ಪಡೆಯುವ ಆಸೆಯಿಂದ ಅನೇಕ ದೇಶಗಳು ಡಂಕಲ್ ಪ್ರಸ್ತಾವನೆಗೆ ಸಹಿ ಹಾಕಿದರೂ, ಅದು ಪ್ರಯೋಜಕವೆಂದು ಯಾವ ದೇಶವೂ ಪರಿಗಣಿಸಲಿಲ್ಲ. ಡಂಕಲ್ ಪ್ರಸ್ತಾವನೆಗೆ ಸಹಿ ಹಾಕುವುದೆಂದರೆ, ವ್ಯಾಪಾರಕ್ಕೆ ಸಂಭಂದಿಸಿದ ಟ್ರಿಪ್ಸ್ (ಬೌದ್ಧಿಕ ಆಸ್ತಿ ಹಕ್ಕನ್ನು - trade related intellectual property rights) ಜಾರಿಗೆ ತಂದು, ಭಾರತೀಯ ಪೇಟೆಂಟ್ ಕಾನೂನು 70 ನ್ನು ಬದಲಿಸಬೇಕಾಗುತ್ತದೆ.

ಅಂತರಾಷ್ಟ್ರೀಯ ಸಂಸ್ಥೆಯಾದ ಯುನಿಡೋ, ಜಗತ್ತಿನಲ್ಲಿ ಕೇವಲ ಹತ್ತು ಕಂಪನಿಗಳು ಹೊಸ ಔಷಧಿಗಳನ್ನು ತಯಾರಿಸುವ ತಂತ್ರಜ್ಞಾನವನ್ನು ಹೊಂದಿದೆ ಎಂದು ಹೇಳುತ್ತದೆ. ಅಂದರೆ ಹೊಸ ಔಷಧಿಗಳನ್ನು ತಯಾರಿಸಲು ನಮ್ಮಲ್ಲಿ ತಂತ್ರಜ್ಞಾನ ಇಲ್ಲದಿದ್ದಾಗ, ವಸ್ತುಸ್ವಾಮ್ಯ ಅಪಾಯಕರ ಹಾಗೂ ಈಗಾಗಲೇ ಶೇ.97 ಪೇಟೆಂಟ್‌ಗಳು ಬಹುರಾಷ್ಟ್ರೀಯ ಕಂಪನಿಗಳ ಕೈಯಲ್ಲಿರುವುದರಿಂದ ನಮ್ಮ ಔಷಧಿ ಉದ್ಯಮಕ್ಕೆ ಆಪತ್ತು ಬಂದಂತೆ. ಇದರಿಂದಾಗಿ ನಾವು ಬಹುರಾಷ್ಟ್ರೀಯ ಕಂಪನಿಗಳಿಂದಲೇ ಔಷಧಿಗಳನ್ನು ಕೊಂಡುಕೊಳ್ಳಬೇಕಾಗುವುದರಿಂದ ಔಷಧಿ ಬೆಲೆಗಳು ವಿಪರೀತ ಹೆಚ್ಚುತ್ತವೆ ಹಾಗೂ ಈಗಾಗಲೇ ನಮ್ಮ ದೇಶದಲ್ಲಿದ್ದ ಔಷಧಿ ಉದ್ಯಮ ಮುಚ್ಚುವ ಪರಿಸ್ಥಿತಿ ಉಂಟಾಗುತ್ತದೆ.

ಗ್ಯಾಟ್ಸ್ ಸಂಸ್ಥೆ 1994 ರಲ್ಲಿ ವಿಶ್ವವ್ಯಾಪಾರ ಸಂಘಟನೆಯಾಗಿ ಪರಿವರ್ತನೆಗೊಂಡು, ಗ್ಯಾಟ್ ಒಪ್ಪಂದಕ್ಕೆ ಒಪ್ಪಿಗೆಯನ್ನು ಸೂಚಿಸಿದ ದೇಶಗಳ ಸಹಿ ಹಾಕಿಸಿಕೊಂಡಿತು ಹಾಗೂ ಟ್ರಿಪ್ಸ್ ಒಪ್ಪಂದವನ್ನು ಜಾರಿಗೆ ತರಲು ಹತ್ತು ವರ್ಷ ಸಮಯ ನೀಡಿತು. ಈಗ ಭಾರತ ಜನವರಿ 1,2005 ರಂದಿನಿಂದ ಟ್ರಿಪ್ಸ್ ಒಪ್ಪಂದವನ್ನು ಜಾರಿಗೆ ತರಬೇಕಾಗುತ್ತದೆ.

ಟ್ರಿಪ್ಸ್ ಒಪ್ಪಂದವನ್ನು ಜಾರಿಗೆ ತರುವುದೆಂದರೆ ನಮ್ಮ ವಿಧಾನ ಸ್ವಾಮ್ಯವನ್ನು ರದ್ದುಗೊಳಿಸಿ ವಸ್ತುಸ್ವಾಮ್ಯವನ್ನು ಜಾರಿಗೊಳಿಸುವುದು, ಪೇಟೆಂಟ್ ಅವಧಿಯನ್ನು 20 ವರ್ಷಕ್ಕೆ ಏರಿಸುವುದು, ಕಡ್ಡಾಯ ಪರವಾನಗಿ ರದ್ದು ಮಾಡುವುದು ಇತ್ಯಾದಿ. ಈ ಒಪ್ಪಂದದಿಂದ ಔಷಧಿ ಕಂಪನಿಗಳಿಗೆ ಏಕಸ್ವಾಮ್ಯ ನೀಡಿದಂತಾಗುತ್ತದೆ, ಪೈಪೋಟಿಯನ್ನು ರದ್ದುಗೊಳಿಸಿದಂತಾಗುತ್ತದೆ. ಔಷಧಿ ಬೆಲೆಗಳು ಗಗನಕ್ಕೇರುವ ಸಾಧ್ಯತೆ ಇದೆ ಅಂದರೆ ಜನಾರೋಗ್ಯವನ್ನು ಕಡೆಗಣಿಸಿದಂತಾಗುತ್ತದೆ.

ಭಾರತದಲ್ಲಿ ಔಷಧಿ ಬೆಲೆಗಳು (ಇತರ ದೇಶಗಳಿಗೆ ಹೋಲಿಕೆ)

ಔಷಧಿ	ಉಪಯೋಗ	ಭಾರತ	ಪಾಕಿಸ್ತಾನ	ಅಮೇರಿಕಾ
ಡೈಕ್ಲೋಫೆನ್ಯಾಕ್ 50 ಮಿ.ಗ್ರಾ.(10 ಮಾತ್ರೆಗಳು)	ನೋವು ನಿವಾರಕ	ರೂ.3.50	ರೂ.84.71	ರೂ.674.77
ರ್‍ಯಾನಿಟಿಡೀನ್ 300 ಮಿ.ಗ್ರಾ(10 ಮಾತ್ರೆಗಳು)	ಆಂಟಿ ಅಲ್ಸರ್	ರೂ.6.02	ರೂ.74.09	ರೂ.863.59
ಏಡ್ಸ್ ರೋಗಿಗಳಿಗೆ	ARV	US. 140/		US..12,000

ವಸ್ತುಸ್ವಾಮ್ಯ ಇರುವ ದೇಶಗಳಲ್ಲಿ (ಪಾಕಿಸ್ತಾನ, ಅಮೇರಿಕಾ) ಔಷಧಿಗಳ ಬೆಲೆಯನ್ನು ತಿಳಿಯಲು ಕೋಷ್ಟಕ ನೋಡಿ.

1994 ರಲ್ಲಿ ಸರಕಾರ ಪೇಟೆಂಟ್ ಬದಲಿಸಲು ಒಪ್ಪಿದರೂ 1999 ರವರೆಗೆ ಯಾವ ಬದಲಾವಣೆಯನ್ನು ತರಲಿಲ್ಲ. 1999 ರಲ್ಲಿ ಮೊದಲನೇ ಹಾಗೂ 2002 ರಲ್ಲಿ ಎರಡನೇ ತಿದ್ದುಪಡಿಯನ್ನು ತಂದಿತು. ಮೂರನೆ ತಿದ್ದುಪಡಿಗೆ ಬಿಜೆಪಿ ಸರಕಾರ ಮಸೂದೆಯನ್ನು ತಯಾರಿಸಿತ್ತು. ಆ ಮಸೂದೆಯಲ್ಲಿ ಒಪ್ಪಿಕೊಳ್ಳಲಾರದ ಅಂಶಗಳಿವೆ. ಬಿಜೆಪಿ ಸರಕಾರ ಆ ಮಸೂದೆಯನ್ನು 2003 ರಲ್ಲಿ ಮಂಡಿಸಲಾಗಲಿಲ್ಲ ಹಾಗೂ ಸರಕಾರ ಉರುಳಿದ್ದರಿಂದ ಅದೇ ಮಸೂದೆ ಯುಪಿಎ ಸರಕಾರದ ಮುಂದಿದೆ. ಈ ಸರಕಾರವೂ ಆ ಮಸೂದೆಯನ್ನು ಯಾವ ಬದಲಾವಣೆ ಇಲ್ಲದೆ ಸಂಸತ್ತಿನಲ್ಲಿ ಮಂಡಿಸಲು ತಯಾರಾಗಿ ನಿಂತಿದೆ.

ಆ ಮಸೂದೆಯ ಅನಪೇಕ್ಷ ವಿಷಯಗಳು

1. ಟ್ರಿಪ್ಸ್ ಒಪ್ಪಂದದಲ್ಲಿರುವ ಜನಾರೋಗ್ಯಕ್ಕೆ ಪೂರಕವಾಗುವ (flexibilities) ಕೆಲವು ಸಕಾರಾತ್ಮಕ ಅಂಶಗಳನ್ನು ಕಡೆಗಣಿಸಲಾಗಿದೆ.
2. ದೋಹ (doha) ಒಪ್ಪಂದದಲ್ಲೂ ಜನಾರೋಗ್ಯ ರಕ್ಷಣೆಗೆ ಕೆಲವು ಸಕಾರಾತ್ಮಕ ಅಂಶಗಳಿವೆ. ಅವುಗಳನ್ನು ಕೈಬಿಡಲಾಗಿದೆ.
3. ಈ ಮಸೂದೆ ಬಗ್ಗೆ ಜನಪ್ರತಿನಿಧಿಗಳೊಂದಿಗೆ ಚರ್ಚೆ ಮಾಡದೇ ಇರುವುದು.
4. ಹಳೇ ರಸಾಯನ ವಸ್ತುವಿನ ಹೊಸ ಉಪಯೋಗಕ್ಕೆ ಪೇಟೆಂಟ್ ನೀಡಲು ಈ ಮಸೂದೆ ಹೇಳುತ್ತದೆ.
5. ಸಂಕ್ರಾಮಿಕ ರೋಗದಿಂದ ಉಂಟಾದ ಜನಾರೋಗ್ಯ ಬಿಕ್ಕಟ್ಟನ್ನು ಪರಿಹರಿಸಲು ಔಷಧಿ ತಯಾರಿಸಲು ಪರವಾನಗಿ ಇಲ್ಲದಿರುವುದು.

ಈ ಮಸೂದೆಯನ್ನು ಈಗ ಜಾರಿಯಲ್ಲಿರುವ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲು, ಸರಕಾರ ತಯಾರಾಗಿ ನಿಂತಿದೆ. ದೇಶಾದ್ಯಂತ ಹಲವಾರು ಜನಪರ ಸಂಘಟನೆಗಳು ಈ ಮಸೂದೆ ಮಂಡನೆಗೆ ವಿರೋಧ ವ್ಯಕ್ತಪಡಿಸಿದೆ, ಬದಲಾವಣೆಗೆ ಒತ್ತಾಯಿಸಿದೆ ಹಾಗೂ ಪ್ರತಿಭಟನೆ ನಡೆಸಿವೆ. ಡಿಸೆಂಬರ್ 9 ರಂದು ಬೆಂಗಳೂರಿನಲ್ಲಿಯೂ ಸಂಘಟನೆಗಳು, ಬೆಂಗಳೂರಿನ ಟೌನ್ ಹಾಲ್ ಎದುರಿಗೆ ಸಹಿ ಸಂಗ್ರಹ ಹಾಗೂ ಪ್ರತಿಭಟನೆ ನಡೆಸಿವೆ.

ಆರೋಗ್ಯದ ಹಕ್ಕು ಸ್ವಾಮ್ಯ ಹಕ್ಕಿಗಿಂತ ಹೆಚ್ಚಿನದು. ಮೊದಲಿಗೆ ಪೇಟೆಂಟ್ ಬದಲಿಸುವುದಾಗಿ ಭಾರತ ಒಪ್ಪಿಕೊಂಡಿದುದೇ ತಪ್ಪು. ಒಪ್ಪಿಕೊಂಡ ನಂತರ ಪೇಟೆಂಟ್ ಬದಲಾವಣೆಯಿಂದ ಜನಾರೋಗ್ಯಕ್ಕೆ ಆಪತ್ತು ಬರದಂತೆ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿಯಾಗಬೇಕು. ಹಿಂದೆ ಸಂಭವಿಸಿದ ತಪ್ಪುಗಳನ್ನು ಸಾರ್ವಜನಿಕವಾಗಿ ಮಾಜೀ ಕೇಂದ್ರ ವಾಣಿಜ್ಯ ಸಚಿವರೇ 2000 (ಜೂನ್ 15) ಇಸವಿಯಲ್ಲಿ ಒಪ್ಪಿಕೊಂಡಿದ್ದಾರೆ. "ಡಬ್ಲ್ಯೂ.ಟಿ.ಓ.ಗೆ ನಾವು ತಗ್ಗಿ ಬಗ್ಗಿದೆವು, ಒತ್ತಡಕ್ಕೆ ಮಣಿದೆವು, ಕಣ್ಣುಮುಚ್ಚಿ ಸಹಿ ಹಾಕಿದೆವು" ಅಪಾಯಕರ ಮಸೂದೆ ಜಾರಿಗೆ ಬರದಂತೆ ಜನರೇ ತಡೆಯಬಹುದಾಗಿದೆ.



ಬೆಂಗಳೂರಿನ ಟೌನ್‌ಹಾಲ್ ಎದುರು ನಡೆದ ಪ್ರತಿಭಟನೆಯ ಚಿತ್ರ

ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ವಿದ್ಯಾರ್ಥಿಗಳ ಯಶಸ್ವೀ

ಪಾರ್ಲಿಮೆಂಟ್ ಚಲೋ-ಸಾಮೂಹಿಕ ಉಪವಾಸ ಸತ್ಯಾಗ್ರಹ

ವೃತ್ತಿ ಶಿಕ್ಷದ ಬಿಕ್ಕಟ್ಟಿನ ಶಾಶ್ವತ ಪರಿಹಾರಕ್ಕೆ ಸ್ವಯಂ ಹಣಕಾಸು ಶಿಕ್ಷಣ ಸಂಸ್ಥೆಗಳ ಮೇಲೆ ರಾಜ್ಯ ಸರ್ಕಾರಗಳಿಗೆಅಧಿಕಾರವಿರುವಂತಹ ಕೇಂದ್ರೀಯ ಶಾಸನವನ್ನು ಜಾರಿಗೆ ತರಬೇಕು, ಖಾಸಗೀ ಸ್ವಾಯತ್ತ ವಿಶ್ವವಿದ್ಯಾನಿಲಯಗಳನ್ನು ನಿಯಂತ್ರಿಸಬೇಕು. ಶಿಕಷಣದ ವ್ಯಾಪಾರೀಕರಣವನ್ನು ತಡೆಗಟ್ಟಬೇಕು ಎಂಬ ಬೇಡಿಕೆಗಳನ್ನಿಟ್ಟುಕೊಂಡು ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್.ಎಫ್.ಐ.) ಆಲ್ ಇಂಡಿಯಾ ಪ್ರೋಗ್ರೆಸ್ಸೀವ್ ಸ್ಟೂಡೆಂಟ್ಸ್ ಯೂನಿಯನ್ (ಎ.ಐ.ಟಿ.ಎಸ್.ಯು.) ಮತ್ತು ಆಲ್ ಇಂಡಿಯಾ ಸ್ಟೂಡೆಂಟ್ಸ್ ಬ್ಲಾಕ್(ಎ.ಐ.ಎಸ್.ಬಿ.) ಈ ಮೂರು ಎಡ ವಿದ್ಯಾರ್ಥಿ ಸಂಘಟನೆಗಳು ಡಿಸೆಂಬರ್ 2 ರಂದು ಕರೆ ನೀಡಿದ್ದ ಐತಿಹಾಸಿಕ ಪಾರ್ಲಿಮೆಂಟ್ ಚಲೋ ಯಶಸ್ವಿಯಾಗಿದ್ದು ದೇಶದ ಮೂಲೆ ಮೂಲೆಗಳಿಂದ ಬಂದಿದ್ದ ಸಾವಿರಾರು ಸಂಖ್ಯೆಯ ವಿದ್ಯಾರ್ಥಿಗಳು ದೆಹಲಿಯಲ್ಲಿ ಸೇರಿ, ದೆಹಲಿಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುವ ಮೂಲಕ ಸಂಸತ್ತಿನ ಒಳಗೆ ಕುಳಿತಿದ್ದ ಆಳುವ ವರ್ಗದವರ ಮದ ಮನ ಮುಟ್ಟುವಂತೆ ತಮ್ಮ ಘೋಷಣೆಗಳನ್ನು ಕೂಗುತ್ತಿದ್ದರು.

ಮೆರವಣಿಗೆಯು ಪೋಲೀಸರ ಅಡೆತಡೆಯಿಂದಾಗಿ ಅಲ್ಲಿಯೇ ಸಮಾವೇಶಗೊಂಡು 48 ಗಂಟೆಗಳ ಕಾಲ ಸಾಮೂಹಿಕ ಉಪವಾಸ ಸತ್ಯಾಗ್ರಹಕ್ಕೆ ಎಸ್.ಎಫ್.ಐ.ನ ರಾಷ್ಟ್ರಾಧ್ಯಕ್ಷರಾದ ಕಾಂ। ಕೆ.ಕೆ. ರಾಘೇಶ್‌ರವರು ಚಾಲನೆ ನೀಡಿದರು. ಮಧ್ಯಾಹ್ನ 1 ಗಂಟೆಯ ಸುಮಾರಿಗೆ ಸಾಮೂಹಿಕವಾಗಿ ಎಲ್ಲರೂ ಉಪವಾಸದಲ್ಲಿ ಅತ್ಯಂತ ಸ್ಫೂರ್ತಿದಾಯಕವಾಗಿ ಪಾಲ್ಗೊಂಡರು.

ಈ ಬಹಿರಂಗ ಸಭೆಯಲ್ಲಿ ಎಸ್.ಎಫ್.ಐ.ನ ಅಖಿಲ ಭಾರತ ಅಧ್ಯಕ್ಷರಾದ ಕಾಂ ರಾಘೇಶ್, ಪ್ರಧಾನ ಕಾರ್ಯದರ್ಶಿಗಳಾದ ಕಲ್ಲೋಲ್‌ರಾಯ್, ಎ.ಐ.ಎಸ್.ಬಿ. ಮುಖಂಡರಾದ ಅರಿತೋ ಚಟರ್ಜಿ, ಎ.ಐ.ಪಿ.ಎಸ್.ಯು.ನ ರಾಜೀವ್ ಬ್ಯಾನರ್ಜಿ, ಸಿ.ಪಿ.ಐ.ಎಂ.ನ ಸಂಸದರಾದ ನಿಲೋತ್‌ಪಲ್ ಬಸು, ಮೊಹಮದ್ ಸಲೀಂ, ಫಾರ್ವರ್ಡ್‌ಬ್ಲಾಕ್‌ನ ಸಂಸದರಾದ ದೇವರಾಜನ್, ಆರ್.ಎಸ್.ಪಿ.ಯ ಅಬನೀರಾಯ್ ರವರು ಪ್ರತಿಭಟನಾ ನಿರತರನ್ನುದ್ದೇಶಿಸಿ ಮಾತನಾಡಿದರು. ಮಧ್ಯಾಹ್ನ 1 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ನೀರನ್ನ ಒರತುಪಡಿಸಿ ಬೇರಾವ ತಿನಿಸುಗಳನ್ನು ಸೇವಿಸದೇ ಅತ್ಯಂತ ಶಿಸ್ತುಬದ್ಧವಾಗಿ ಉಪವಾಸ ಸತ್ಯಾಗ್ರಹದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದರು.

ಅರ್ಜುನ್ ಸಿಂಗ್‌ರೊಂದಿಗೆ ಮಾತುಕತೆ :

ಕೇಂದ್ರ ಸಂಪನ್ಮೂಲ ಖಾತೆ ಸಚಿವರಾದ ಅರ್ಜುನ್‌ಸಿಂಗ್‌ರವರು ಎಡ ವಿದ್ಯಾರ್ಥಿ ಸಂಘಟನೆಗಳ ಮುಖಂಡರ ಮನವಿಯನ್ನು ಸ್ವೀಕರಿಸಿ ಬಹಳ ದೀರ್ಘವಾಗಿ ಚರ್ಚಿಸಿ ಕೆಲವು ಆಶ್ವಾಸನೆಗಳನ್ನು ನಿಯೋಗಕ್ಕೆ ನೀಡಿದ್ದಾರೆ.

- ಕೇಂದ್ರೀಯ ಶಾಸನದ ಬಗ್ಗೆ ಚರ್ಚಿಸಿ ಒಪ್ಪಿಗೆ ಪಡೆಯಲು 2005ರ ಜನವರಿ 10 ಮತ್ತು 11ನೇ ತಾರೀಖಿನಂದು ಬೆಂಗಳೂರಿನಲ್ಲಿ ದೇಶದ ಎಲ್ಲಾ ರಾಜ್ಯಗಳ ಶಿಕ್ಷಣ ಸಚಿವರ ಸಮ್ಮೇಳನವನ್ನು ಸಂಘಟಿಸಲಾಗುವುದು.

- ಮುಂದಿನ ಬಜೆಟ್ ಅಧಿವೇಶನದಲ್ಲೋ ಈ ಕೇಂದ್ರೀಯ ಶಾಸನವನ್ನ ಜಾರಿಗೆ ತರಲು ಸಕಲ ಪ್ರಯತ್ನವನ್ನ ಮಾಡುತ್ತೆವೆ -

ಇಷ್ಟು ಭರವಸೆಗಳನ್ನು ಎಡ ವಿದ್ಯಾರ್ಥಿ ಸಂಘಟನೆಗಳ ಮುಖಂಡರನ್ನೊಳಗೊಂಡ ನಿಯೋಗಕ್ಕೆ ಸಚಿವರಾದ ಅರ್ಜುನ್ ಸಿಂಗ್‌ರವರು ನೀಡಿದ್ದಾರೆ.

ಎಲ್ಲರಲ್ಲೂ ಹರ್ಷೋದ್ಗಾರ :

ಸಚಿವ ಅರ್ಜುನ್ ಸಿಂಗ್‌ರವರ ಜೊತೆಗೆ



ಪಾರ್ಲಿಮೆಂಟ್‌ನತ್ತ ವಿದ್ಯಾರ್ಥಿಗಳು...

ಚರ್ಚಿಸಿದ ವಿಚಾರಗಳ ಸಾರಾಂಶವನ್ನು ಎಸ್.ಎಫ್.ಐ.ನ ಪ್ರಧಾನ ಕಾರ್ಯದರ್ಶಿಗಳಾದ ಕಲ್ಲೋಲ್‌ರಾಯ್‌ರವರು ಸಭೆಯ ಮುಂದೆ ಪ್ರಸ್ತಾಪಿಸುತ್ತಿದ್ದಂತೆ ನೆರೆದಿದ್ದ ಎಲ್ಲರಲ್ಲೂ ಸಂತೋಷ ಉಕ್ಕಿ ಹರಿಯುತ್ತಿತ್ತು. ಬೇಡಿಕೆಗಳನ್ನು ಈಡೇರಿಸಿಕೊಂಡ ಆತ್ಮವಿಶ್ವಾಸವಿತ್ತು, 8 ಗಂಟೆಗಳ ಕಾಲ ಉಪವಾಸವಿದ್ದವರೆಲ್ಲರೂ ಚೈತನ್ಯ ತುಂಬಿ ಕುಣಿದು ಕುಪ್ಪಳಿಸಿದರು, ತಮ್ಮ ಸಂತೋಷವನ್ನು ಪರಸ್ಪರ ಹಂಚಿಕೊಂಡರು.

ಉಪವಾಸದಲ್ಲೂ ಹಸಿವನ್ನು ನೀಗಿಸಿದ ಬೀದಿನಾಟಕ :

ದೆಹಲಿಯ ಹವ್ಯಾಸಿ ಕಲಾವಿದರ ತಂಡವೊಂದು ಉಪವಾಸ ಕುಳಿತವರ ನಡುವೆ ಬಂದು ಕಲ್ಲೂರಾವ್ ಎಂ.ಬಿ.ಬಿ.ಎಸ್. ಎಂಬ ಶೀರ್ಶಿಕೆಯ ಬೀದಿನಾಟಕವನ್ನು ಪ್ರದರ್ಶಿಸುತ್ತಿದ್ದಂತೆಯೇ ಉಪವಾಸದಿಂದ ಬಳಲಿದವರ ಮೈ ಮನಗಳಲ್ಲಿ ಮಿಂಚಿನ ಸಂಚಾರವನ್ನ ಮೂಡಿಸುವಂತಹ ರೀತಿಯಲ್ಲಿ ಬೀದಿನಾಟಕವನ್ನು ಪ್ರದರ್ಶಿಸಿದರು. ಶಿಕ್ಷಣದ ವ್ಯಾಪಾರೀಕರಣ ಮತ್ತು ಅದರ ದುಶ್ಪರಿಣಾಮಗಳನ್ನು, ಅಪಾಯವನ್ನು 15 ನಿಮಿಷಗಳಲ್ಲಿ ಎಳೆ ಎಳೆಯಾಗಿ ಬಿಡಿಸಿಟ್ಟ ಈ ತಂಡವು ಎಲ್ಲರ ಮನ ಸೂರೆಗೊಂಡು, ಎಲ್ಲರೂ ಹಸಿವನ್ನು ಮರೆತು ಮುಗ್ಧರಾಗಿ ಭಾವಪರವಶರಾಗಿ ಕುಳಿತರು.

ಬೆಂಗಳೂರಿನಲ್ಲಿ ಜನವರಿ 10-11 ಶಿಕ್ಷಣ ಸಚಿವರ ಸಮ್ಮೇಳನ :

ಹೋರಾಟ ಮುಂದುವರಿಸಲು ಎಸ್.ಎಫ್.ಐ. ತೀರ್ಮಾನ :

ವೃತಿ ಶಿಕ್ಷಣದ ಬಿಕ್ಕಟ್ಟು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ನಿರಂತರವಾಗಿ ಈ ಸಮಸ್ಯೆಯ ಶಾಶ್ವತ ಪರಿಹಾರಕ್ಕಾಗಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ಹೋರಾಡುತ್ತಾ ಬಂದಿದ್ದು, ಈಗ ಈ ಸಮಸ್ಯೆಯನ್ನು ಬಗೆಹರಿಸುವಲ್ಲಿ ಬೆಂಗಳೂರಿನಲ್ಲಿ ನಡೆಯುವ ಶಿಕ್ಷಣ ಸಚಿವರ ಸಮ್ಮೇಳನ ನಿರ್ಣಾಯಕವಾಗಿದೆ. ಆದ್ದರಿಂದ ಈ ವೃತ್ತಿ ಶಿಕ್ಷಣದ ಬಿಕ್ಕಟ್ಟಿನ ಶಾಶ್ವತ ಪರಿಹಾರಕ್ಕಾಗಿ ಕೇಂದ್ರೀಯ ಶಾಸನವನ್ನು ಕಡ್ಡಾಯವಾಗಿ ಜಾರಿಗೊಳಿಸಲು ಮತ್ತೊಂದಷ್ಟು ಒತ್ತಡವನ್ನು ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರದ ಮೇಲೆ ಹೇರಲು ಜನವರಿ 10 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನಾ ಪ್ರದರ್ಶನವನ್ನು ನಡೆಸಲು ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್.ಎಫ್.ಐ.) ತೀರ್ಮಾನಿಸಿದೆ. ಈ ಹೋರಾಟದಲ್ಲಿ ಎಸ್.ಎಫ್.ಐ.ನ ಅಖಿಲ ಭಾರತ ಮುಖಂಡರು ಭಾಗವಹಿಸಲಿದ್ದಾರೆ.

ಚಿತ್ರ-ವರದಿ
ಹೆಚ್.ಆರ್.ನವೀನ್‌ಕುಮಾರ್


2005 ಕ್ಕೆ ಪಾದಾರ್ಪಣೆ.............

ಪುಟ 5 ರಿಂದ

ಪ್ರಾದೇಶಿಕ ಸೈನಿಕ ಮೈತ್ರಿಕೂಟವನ್ನು ಎನ್‌ಎಟಿಒ ದಂತೆ ಒಳಗೊಳ್ಳಲಿದೆ ಎಂದು ಹೇಳಲಾಗಿತ್ತು. ಇದೇ ಅಂಶವನ್ನು ಜರ್ಮನಿ ಇತ್ತೀಚೆಗೆ ತಿಳಿಸಿದೆ. ಅದರೆ ಅದು ಎನ್‌ಎಟಿಒಗೆ ಪ್ರತಿಕ್ರಿಯೆಯಾಗಿಯಲ್ಲ ಎಂದು ಸಹ ಹೇಳುತ್ತಿದೆ. ಇದೇನೇ ಇದ್ದರು ಸಹಾ ಐರೋಪ್ಯ ಒಕ್ಕೂಟದ ಬಲಗೊಳ್ಳುವಿಕೆ-ವಿಸ್ತರಣೆ ಅಂತರ ಸಾಮ್ರಾಜ್ಯಶಾಹಿ ವೈರುದ್ಯವನ್ನು ತೀವ್ರಗೊಳಿಸಲಿದೆ.

ಇರಾಕ್‌ನಲ್ಲಿ ಹೆಚ್ಚಿದ ಪ್ರತಿರೋಧ :

ಇರಾಕ್‌ನಲ್ಲಿ ಮಾನವ ಹಕ್ಕುಗಳ ಬರ್ಬರ ಉಲ್ಲಂಘನೆ ಇಡೀ ಜಗತ್ತಿನ ಗಮನ ಸೆಳೆದಿದೆ. ಅಮೇರಿಕಾ ಜನತೆ ರಕ್ಷಣೆಗೆಂದು ಹೇಳುತ್ತಿರುವಾಗಲೇ ಇರಾಕ್ ಜನತೆ ತೀವ್ರ ದಾಳಿಯನ್ನು ಅಮೇರಿಕಾ ಮೈತ್ರಿಕೂಟದ ಪಡೆಗಳ ಮೇಲೆ ನಡೆಸಿವೆ. ಅವರಲ್ಲಿನ ಜನಾಂಗ ಬೇದವನ್ನು ಮರೆತು ಎಲ್ಲರೂ ಸೇರಿ ಒಟ್ಟಾರೆಯಾಗಿ ಅಮೇರಿಕಾ ಪಡೆಗಳ ಮೇಲೆ ದಾಳಿ ನಡೆಸಿವೆ. ಅಮೇರಿಕಾ ಪಡೆಗಳ ಜೊತೆಯಿರುವ ಅಂತಹ ಅಸ್ತ್ರ ಇರಾಕ್ ಜನರ ಬಳಿ ಇರದಿದ್ದರೂ ಸಹ ತಮ್ಮ ಕೈಗೆ ಸಿಕ್ಕಿದ್ದನ್ನೇ ಬಳಸಿ-ದಾಳಿ ಮುಂದುವರಿಸಿದ್ದಾರೆ.



ಸದ್ದಾಂ

ಜನ ಪ್ರತಿರೋಧವನ್ನು ಬಗ್ಗುಬಡಿಯಲು. ಅಮಾನವೀಯ ರೀತಿಯಲ್ಲಿ ಮೈತ್ರಿಪಡೆ ವರ್ತಿಸುತ್ತಿದೆ. ಆಸ್ಪತ್ರೆ-ಜನವಸತಿ ಪ್ರದೇಶಗಳ ಮೇಲೆ ಬಾಂಬ್ ದಾಳಿ ನಡೆಸಿದೆ. ಅಲ್‌ಗರೈಬಿಯಲ್ಲಿ ಯುದ್ಧ ಕೈದಿಗಳೊಂದಿಗೆ ನಡೆಸಿದ ಅಮಾನವೀಯ ವರ್ತನೆಯನ್ನು ಮತ್ತಿತರೆಡೆ ಕೂಡ ನಡೆಸುತ್ತಿದೆ. ಯುದ್ಧ ಕೈದಿಗಳೊಂದಿಗೆ ವ್ಯವಹರಿಸಲಿರುವ ಎಲ್ಲಾ ಅಂತರಾಷ್ಟ್ರೀಯ ನಿಯಮಾವಳಿಗಳನ್ನು ಗಾಳಿಗೆ ತೂರಲಾಗಿದೆ. ಅಂತಹವರ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿ ಆ ಅಧಿಕಾರಿಗಳನ್ನು ಶಿಕ್ಷಿಸುವ ಬದಲು ಹಿಂದೆ ಕರೆಸಿಕೊಂಡಿದೆ ಅಷ್ಟೆ.

ಇಂತಹದ ವರ್ತನೆಯನ್ನು ಯುಗೋಸ್ಲೋವಿಯಾ ಯುದ್ಧ ಕೈದಿಗಳು ಹಾಗೂ ಗೊಂಟನಾಮೋ ನೆಲೆಯಲ್ಲಿ ಕೈದಿಗಳ ಮೇಲೂ ನಡೆಸಿದೆ. ಕ್ಯೂಬಾ ದೇಶದ ಪ್ರದೇಶವಾದ ಗೊಂಟನಾಮೋವನ್ನು ಅಕ್ರಮವಾಗಿ ಆಕ್ರಮಿಸಿಕೊಂಡು ಅಲ್ಲಿ ದೊಡ್ಡ ಒಂದು ಜೈಲನ್ನೇ ನಿರ್ಮಿಸಿ, ಅದರಲ್ಲಿ ಬಂಧಿತರಿಗೆ ಹಿಂಸಿಸಲಾಗುತ್ತಿದೆ. ಇತ್ತೀಚೆಗೆ ಸಿಐಎ ಬಂಧಿಸಿದ 500 ಕೈದಿಗಳನ್ನು ಅಲ್‌ಖೈದಾಗೆ ಸೇರಿದವರೆಂದು ಅಲ್ಲಿ ಇರಿಸಿ ಹಿಂಸಿಸಲಾಗುತ್ತಿದೆ. ಅವರಲ್ಲಿ ಪಾಕಿಸ್ತಾನ, ಪಶ್ಚಿಮ ಆಫ್ರಿಕಾ, ಯೆಮೆನ್ ಮತ್ತಿತರೆ ದೇಶದವರು ಇದ್ದಾರೆ.

ಇರಾಕ್ ಚುನಾವಣೆ ಹತ್ತಿರವಾಗುತ್ತಿರುವಂತೆ ಜನರ ಪ್ರತಿರೋಧ ಹೆಚ್ಚುತ್ತಿದೆ. ಪೊಲೀಸ್ ಕೆಲಸ ನಿರ್ವಹಣೆಗೆ ಇತರೆ ರಾಷ್ಟ್ರಗಳನ್ನು ಅದು ಒತ್ತಾಯಿಸಿದ್ದು, ಆದರೆ ಅದು ಫಲಕಾರಿಯಾಗಲಿಲ್ಲ. ಅಮೇರಿಕಾದ ವಿದೇಶಾಂಗ ನೀತಿಯ ಬಗ್ಗೆ ಜಗತ್ತಿನ ಅನೇಕರಿಗೆ ವಿಶ್ವಾಸ ಉಳಿದಿಲ್ಲ. ಅವರ ಯಜಮಾನಿಕೆ-ಯುದ್ಧಕೋರತನ ಇದಕ್ಕೆ ಕಾರಣ. ಭಾರತದ ಹಿಂದಿನ ಬಿಜೆಪಿ ನೇತೃತ್ವ ಎನ್‌ಡಿಎ ಸರ್ಕಾರ ಅಮೇರಿಕಾದ ನೀತಿಗಳಿಗೆ ಅಡಿಯಾಳಾಗಿದ್ದರು ಸಹ ಜನರ ಪ್ರತಿರೋಧ ದಿಂದಾಗಿ ಸೈನ್ಯ ಕಳುಹಿಸಲು ಸಾಧ್ಯವಾಗಲಿಲ್ಲ.

ಲ್ಯಾಟಿನ್ ಅಮೇರಿಕಾದಲ್ಲಿ ಪ್ರತಿರೋಧ :

ದಶಕಗಳ ಹಿಂದೆ ಮೆಕ್ಸಿಕೋದಲ್ಲಿ ನಡೆದ ಚಾಯಪಾಸ್ ದಂಗೆಯ ಮುಂದುವರಿಕೆ ಪ್ರತಿರೋಧವನ್ನು ನಾವು 2004 ರಲ್ಲಿ ಲ್ಯಾಟಿನ್ ಅಮೇರಿಕಾದಲ್ಲಿ ನಡೆದದನ್ನು ಗಮನಿಸಬಹುದು. ವೆನ್‌ಜುವೆಲಾ, ಗ್ವಾಟೆಮಾಲಾ, ಬೊಲಿವಿಯಾ, ಬ್ರಿಟೀಷ್ ಗುಯಾನ ದೇಶಗಳು ಒಮ್ಮೆಲ್ಲ ಒಮ್ಮೆ ಪ್ರಗತಿಪರ-ದೇಶಪ್ರೇಮಿ ಸರ್ಕಾರಗಳನ್ನು ಚುನಾಯಿಸಿ- ಸಾಮ್ರಾಜ್ಯಶಾಹಿ ಹೋರಾಟ ಗಳನ್ನು ಮುಂದುವರಿಸಿವೆ. ಅಮೇರಿಕಾ ಸಾಮ್ರಾಜ್ಯಶಾಹಿಗಳು ಆ ಸರ್ಕಾರಗಳನ್ನು ಕಿತ್ತುಹಾಕಲು ರಕ್ತಪಾತ, ದಂಗೆಗಳನ್ನು ಎಬ್ಬಿಸಿವೆ.

ಅಂತಹ ಸಂದರ್ಭದಲ್ಲಿ ಕ್ಯೂಬಾ ದೇಶವು ಸಾಮ್ರಾಜ್ಯಶಾಹಿ ಹೋರಾಟದ ಬ್ಯಾನರ್‌ನ್ನು ಎತ್ತಿಹಿಡಿದಿದೆ. ನಿಕಾರಾಗುವಾದಲ್ಲಿನ ಕ್ರಾಂತಿಕಾರಿ ಸ್ಯಾಂಡಿಸ್ಟಾ ಸರ್ಕಾರವನ್ನು ಅಮೇರಿಕಾ ಸಾಮ್ರಾಜ್ಯಶಾಹಿಗಳು ಕಿತ್ತೆಸದರು, ಕೂಡಲೇ ಮೆಕ್ಸೊಕೊದ ಚಾಯ್‌ಪಾಸ್ ದಂಗೆ ಪ್ರತಿರೋಧ ಒಡ್ಡಿತು.

ಶಾಂತಿಯುತವಾಗಿಯೇ ಅಮೇರಿಕಾ ಪರ ಅನೇಕ ಸರ್ಕಾರಗಳನ್ನು ಜನತೆ ಅಲ್ಲಿ ಕಿತ್ತೆಸೆದಿದ್ದಾರೆ. ವೆನುಜುವೆಲಾ, ಬ್ರೆಜಿಲ್, ಬೊಲಿವಿಯಾ, ಉರುಗ್ವೆಗಳಲ್ಲೂ ಅದೇ ಕೆಲಸವನ್ನು ಜನತೆ ಮುಂದುವರಿಸಿದ್ದಾರೆ. ಪ್ರಗತಿಪರವಾಗಿ ಸಾಮ್ರಾಜ್ಯಶಾಹಿ ವಿರೋಧಿ ರಂಗವೇ ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳಲ್ಲಿ ಬಲಗೊಳ್ಳುತ್ತಿದೆ.



ಇದನ್ನು ಸಹಿಸಲಾಗದೆ ಚಾವೆಜ್ ಸರ್ಕಾರವನ್ನು ಪತನಗೊಳಿಸಲು ಅಮೇರಿಕಾ ಹಾಗೂ ಅದರ ಏಜೆಂಟರು ಯತ್ನಿಸಿ ವಿಫಲವಾಗಿದ್ದಾರೆ. ಚಿಲಿ ದೇಶದ ಕೋರ್ಟ್ ಅಲ್ಲಿನ ಹಿಂದಿನ ಸರ್ವಾಧಿಕಾರಿ ಅಗಸ್ಟೊ ಪಿಗೊಚೆಟ್‌ಗೆ ಶಿಕ್ಷೆ ವಿಧಿಸಿದೆ. 1973 ರ ಸೆಪ್ಟೆಂಬರ್ 11 ರಂದು ಅಲ್ಲಿನ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿದ್ದ ಅಧ್ಯಕ್ಷ ಸಲ್ವಾಡಾರ್ ಅಲೆಂಡೆಯನ್ನು ಕೊಲೆಗೈದ, ದಂಗೆ ನಡೆಸಿದ ಆರೋಪ ಸಾಬೀತಾಗಿದೆ. 30,000 ಕಾಣೆಯಾದ ಜನರ ಹತ್ಯೆ ನಡೆಸಿದ ಅಪರಾಧ ರುಜುವಾತಾಗಿದೆ. ಆದರೆ 89 ವಯಸ್ಸಾಗಿರುವ ಕಾರಣ ಶಿಕ್ಷೆ ಕಡಿಮೆ ನೀಡಲಾಗಿದೆ. ಆದರೂ ಅವನಿಗೆ ಉತ್ತೇಜನ ನೀಡಿದ ಅಂದಿನ ಅಮೇರಿಕಾ ವಿದೇಶಾಂಗ ಕಾರ್ಯದರ್ಶಿ ಹೆನ್ರಿ ಕೈಸಿಂಗರ್‌ನನ್ನು ಶಿಕ್ಷೆಗೊಳಪಡಿಸಬೇಕೆಂಬ ಕೂಗು ಲ್ಯಾಟಿನ್ ಅಮೇರಿಕಾದ್ಯಂತ ಎದ್ದಿದೆ. ಚಿಲಿ ದೇಶದ ಕೋರ್ಟಿನ ತೀರ್ಪು ಸಾಮ್ರಾಜ್ಯಶಾಹಿಯ ಅಮಾನವೀಯ ಕ್ರೌರ್ಯವನ್ನು ಸಾಬೀತುಪಡಿಸಿದೆ. ○

ಜಾಗತೀಕರಣ ಯುಗದಲ್ಲಿ ಸಮಾಜವಾದ

ಬಂಡವಾಳಶಾಹಿಗೆ ಸಮರ್ಥ ಮತ್ತು ಶಾಶ್ವತ ಪರ್ಯಾಯ

ಸಂದರ್ಶಕರು : ಇದೊಂದು ಈಗ ಹಳೆಯ ಚರ್ಚೆಯಾದರೂ ಸಹ, ಬಂಡವಾಳಶಾಹಿಗೆ ಸಮರ್ಥ ಮತ್ತು ಶಾಶ್ವತ ಪರ್ಯಾಯ ಯಾವುದೂ ಇಲ್ಲವೆಂದು ಆಗಾಗ್ಗೆ ಪುನರಾವರ್ತಿಸಲಾಗುತ್ತಿದೆ. ಈ ಜಾಗತೀಕರಣ ಯುಗದಲ್ಲಿ ಸುಧಾರಣೆ ಮಾಡಿದ ಬಂಡವಾಳಶಾಹಿ ಸಮಾಜವೊಂದೇ ಹಾದಿಯೆಂದು ಎತ್ತಿಹಿಡಿಯಲಾಗುತ್ತಿರುವುದು ಎಷ್ಟರಮಟ್ಟಿಗೆ ನಿಜ?

ಸೀತಾರಾವ್ : ಜಾತೀಕರಣದ ಬೆಳವಣಿಗೆಯನ್ನು ಅದರ ಆಂತರಿಕ ನಿಯಮಾವಳಿಗಳ ಮತ್ತು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಕಾರ್ಯನಿರ್ವಹಣೆಯ ಆಧಾರದ ಮೇಲೆ ಅರ್ಥ ಮಾಡಿಕೊಳ್ಳಬೇಕಿದ್ದು, ಬಂಡವಾಳಶಾಹಿಯು ಬೆಳೆಯ ತೊಡಗಿದಂತೆ ಬಂಡವಾಳವು ಕೆಲವೇ ಜನರ ಕೈಯಲ್ಲಿ ಕೇಂದ್ರೀಕೃತವಾಗುವುದೆಂಬುದನ್ನು ಕಾರ್ಲ್ ಮಾರ್ಕ್ಸ್ ತಮ್ಮ ಮಹೋನ್ನತ ಕೃತಿ 'ದಾಸ್ ಕ್ಯಾಪಿಟಲ್'ನಲ್ಲಿ ತೋರಿಸಿಕೊಟ್ಟಿದ್ದಾರೆ. ಇದರಿಂದಾಗಿ ಬೃಹತ್ ಬಂಡವಾಳ ಸಂಗ್ರಹಣೆಯಾಗಿ, ಲಾಭಕ್ಕಾಗಿ ಅದನ್ನು ಮತ್ತೆ ಮತ್ತೆ ಬಳಸುವುದು ಆ ವ್ಯವಸ್ಥೆಯ ಆಂತರಿಕ ನಿಯಮ.

20ನೇ ಶತಮಾನದ ಕೊನೆಗೆ ಈ ಕೇಂದ್ರೀಕೃತ ಕ್ರಿಯೆಯಿಂದ ಬೃಹತ್ ಪ್ರಮಾಣದ ಬಂಡವಾಳ ಸಂಗ್ರಹಣೆಯಾಯಿತು. ತೊಂಭತ್ತರ ದಶಕದಿಂದೀಚೆಗೆ ಹಣಕಾಸು ಬಂಡವಾಳದ ಅಂತರರಾಷ್ಟ್ರೀಯಕರಣವು ಮೇರುಮಟ್ಟಕ್ಕೆ ಬೆಳೆದಿದೆ. 1993 ರಲ್ಲಿ 20 ಟ್ರಿಲಿಯನ್ ಡಾಲರ್ ಇದ್ದ ಜಾಗತಿಕ ಷೇರು ವಹಿವಾಟು 21ನೇ ಶತಮಾನದ ಆದಿಯಲ್ಲಿ 400 ಟ್ರಿಲಿಯನ್ ಡಾಲರ್‌ನಷ್ಟು ಆಗಿದೆ. ಲಾಭಕೋರತನಕ್ಕಾಗಿ ಜಾಗತಿಕ ಮಟ್ಟದಲ್ಲಿ ಸುಲಲಿತವಾಗಿ ಯಾವುದೇ ಅಡೆತಡೆಯಿಲ್ಲದೆ ಚಲಿಸಲು ಈ ಬೃಹತ್ ಹಣಕಾಸು ಬಂಡವಾಳ ಸಂಗ್ರಹಣೆಗೆ ಅಂತಹದೊಂದು ಪ್ರಪಂಚ ನಿಯಮಾವಳಿಯ ಅಗತ್ಯವಿದೆ. ಕೆಲವೊಂದು ಬಹುರಾಷ್ಟ್ರೀಯ ಕಂಪನಿಗಳ ಸಂಪತ್ತು ಹಲವು ದೇಶಗಳ ಒಟ್ಟಾರೆ ದೇಶೀಯ ಉತ್ಪನ್ನ (ಜಿಡಿಪಿ)ವನ್ನು ಮೀರುವಷ್ಟಿದ್ದು ಲಾಭದ ಹುಡುಕಾಟದಲ್ಲಿ ಎಲ್ಲ ವ್ಯಾಪಾರ ಅಡೆತಡೆ ಮತ್ತು ಸುಂಕ ರಕ್ಷಣೆಗಳನ್ನು ತೆಗೆದುಹಾಕುವ ಒತ್ತಡ ತಂದಿದೆ.



ಹೀಗೆ ಬಂಡವಾಳಶಾಹಿ ಬೆಳವಣಿಗೆಯ ನಿಯಮಾವಳಿಯೇ ಅದರ ಭೌತಿಕ ಪರಿಸರವನ್ನು ಸೃಷ್ಟಿಸಿದ್ದು, ಅತಿ ಲಾಭಗಳಿಸುವ ಬಹು ರಾಷ್ಟ್ರೀಯ ಕಂಪನಿಗಳು ತೃತೀಯ ರಾಷ್ಟ್ರಗಳನ್ನು ದೋಚುವಂತಹ ಆರ್ಥಿಕ ವ್ಯವಸ್ಥೆಯ ನಿರ್ಮಾಣಕ್ಕೆ ಕಾರಣವಾಗಿದ್ದು, ಇದನ್ನು ಜಾಗತಿಕ ತ್ರಿಮೂರ್ತಿಗಳಾದ ಐಎಂಎಫ್, ವಿಶ್ವಬ್ಯಾಂಕ್ ಮತ್ತು ಡಬ್ಲ್ಯುಟಿಓಗಳ ಮುಖೇನ ಸಾಧಿಸಲಾಗುತ್ತಿದೆ. ಇದರಿಂದ ಸ್ಪಷ್ಟವಾಗುವ ಅಂಶವೇನೆಂದರೆ ತೃತೀಯ ರಾಷ್ಟ್ರಗಳ ಪುನರ್-ವಸಾಹತೀಕರಣಕ್ಕಾಗಿ ಪ್ರಯತ್ನಿಸಲಾಗುತ್ತಿದೆ.

ಸೋವಿಯತ್ ರಾಷ್ಟ್ರ ಮತ್ತು ಪೂರ್ವ ಯುರೋಪ್ ದೇಶಗಳಲ್ಲಿ ಸಮಾಜವಾದಕ್ಕಾದ ಹಿನ್ನಡೆಯ ಅವಧಿಯಲ್ಲಿ ಈ ಜಾಗತೀಕರಣವು ಬೆಳೆದಿದ್ದು, ಜಾಗತಿಕ ಮಟ್ಟದಲ್ಲಿ ಎಲ್ಲ ವಿಷಯಗಳಲ್ಲೂ ಅಮೇರಿಕಾದ ಸಂಪೂರ್ಣ ಪ್ರಾಬಲ್ಯತೆ ಶುರುವಾಗಿದೆ. ಶೀತಲ ಸಮರ-ನಂತರ ದಿನಗಳಲ್ಲಿ ಅಂತರರಾಷ್ಟ್ರೀಯ ಪರಿಸ್ಥಿತಿಯು ದ್ವಿ-ದ್ರುವೀಕರಣದಿಂದ ಬಹು- ದ್ರುವೀಕರಣದೆಡೆಗೆ ಸಾಗುತ್ತಿದ್ದರೆ, ಈಗ ಅದರ ಜಾಗದಲ್ಲಿ ಏಕ-ದ್ರುವೀಕರಣತೆಯನ್ನು ಜಾರಿ ತರಲು ಅಮೇರಿಕಾದ ಅಧಿಪತ್ಯವು ಸಾಗತೊಡಗಿದೆ.

ಅಮೇರಿಕಾದ ಮೇಲೆ ನಡೆದ ಸೆಪ್ಟೆಂಬರ್ 11, 2001 ರ ಭಯೋತ್ಪಾದಕ ದಾಳಿಯ ನಂತರ ಅಮೇರಿಕಾದ ಅಧಿಪತ್ಯ ವನ್ನು ಸ್ವತಂತ್ರ ರಾಷ್ಟ್ರಗಳ ಮೇಲೆ ಸಾಧಿಸಲು ಹಿಂದಿದ್ದ "ಕಮ್ಯೂನಿಸಂನ ವಿರುದ್ಧ ಯುದ್ಧ" ಎಂಬ ಹೆಸರನ್ನು ಈಗ "ಭಯೋತ್ಪಾದಕತೆಯ ವಿರುದ್ಧ ಯುದ್ಧ" ಎಂಬುದರಿಂದ ಬದಲಾ ಯಿಸಲಾಗಿದೆ ಯಷ್ಟೆ. ಇರಾಕ್ ಮೇಲಿನ ಯುದ್ಧದಿಂದ ಆ ದೇಶವನ್ನು ತನ್ನ ನಿಯಂತ್ರಣದಲ್ಲಿಟ್ಟು ಕೊಂಡಿರುವುದು ಈ ಪ್ರಕ್ರಿಯೆಗೆ ಸಾಕ್ಷಿ.

ಈ ಉಳಿಗಾಲವಿಲ್ಲದ ಶೋಷಣಾ ಕ್ರಮವನ್ನು ಬಂಡವಾಳಶಾಹಿಯು ಉಳಿಸಿಕೊಳ್ಳಲು ಸಾಧ್ಯವಿರುವ ಹಾದಿಯೆಂದರೆ ತನ್ನ ರಾಜಕೀಯ ಮತ್ತು ಮಿಲಿಟರಿ ಅಧಿಪತ್ಯದಿಂದ ಮಾತ್ರ ಜಾಗತೀಕರಣದ ಹೊಡೆತದಿಂದ ಈಗಾಗಲೇ ತತ್ತರಿಸಿರುವ ಜನತೆಯ ಮೇಲೆಯೇ ಈ ಆರ್ಥಿಕ ಬಿಕ್ಕಟ್ಟಿನ ಹೊರೆ ಬೀಳುವುದು. ಈ ಸಂದರ್ಭದಲ್ಲಿ ಮಾರ್ಕ್ಸ್‌ರವರು ದಾಸ್ ಕ್ಯಾಪಿಟಲ್'ನಲ್ಲಿ ಹೇಳಿರುವುದನ್ನು ನೆನಪು ಮಾಡಿಕೊಳ್ಳುವುದು ಉಚಿತವೆನಿಸುತ್ತದೆ. "ಸಾಕಷ್ಟು ಲಾಭವಿದ್ದಾಗ, ಬಂಡವಾಳವು ಕೆಚ್ಚೆದೆಯಿಂದಿರುತ್ತದೆ. ಶೇ.10ರಷ್ಟು ಲಾಭವಿದ್ದರೆ, ಅದಕ್ಕೆ ಉದ್ಯೋಗ ಲಭಿಸುತ್ತದೆ, ಶೇ.20 ರಷ್ಟು ಲಾಭ ಅದಕ್ಕೆ ಕಟ್ಟಾಸೆ ಮೂಡಿಸುತ್ತದೆ. ಶೇ.50 ರಷ್ಟು ಗುಣಾತ್ಮಕ ಉದ್ಧಟತನ ತರಿಸುತ್ತದೆ. ಶೇ.100 ರಷ್ಟು ಲಾಭ, ಅದು ಎಲ್ಲಾ ಮಾನವ ಕಾನೂನುಗಳನ್ನು ತುಳಿಯಲು ಸಿದ್ಧಗೊಳಿಸುತ್ತದೆ, ಶೇ.300ರಷ್ಟು ಲಾಭವಿದ್ದಾಗ, ಅಪರಾಧಿ ಪ್ರಜ್ಞೆಯೇ ಇರುವುದಿಲ್ಲ ಮತ್ತು ತನ್ನ ಮಾಲೀಕನನ್ನು ನೇಣುಗೇರಿಸಿದರೂ ಅದು ತಲೆತಪ್ಪಿಸಿಕೊಳ್ಳುವುದಿಲ್ಲ."

ಹೀಗೆ, ಹೊಡೆತಗಳ ಮತ್ತು ಆಕ್ರಮಗಳ ಹೊಸ ಅಲೆ ಮಾನವತೆಯ ಮುಂದಿದೆ. ಇತ್ತೀಚಿನ ದಿನಗಳಲ್ಲಿ ಶೀಘ್ರವಾಗಿ ಬೆಳೆಯುತ್ತಿರುವ ಜಾಗತೀಕರಣದ ವಿರುದ್ಧ ಜನರ ಚಳವಳಿಗಳಷ್ಟೇ ಬೆಳೆದು ಈ ಕ್ರಿಯೆಯನ್ನು ಬುಡಮೇಲು ಮಾಡಬೇಕಾಗಿದೆ. ಸ್ವಾತಂತ್ರ್ಯವಿರುವ ವ್ಯವಸ್ಥೆಯ ನಿರ್ಮಾಣವು ಈ ಬಂಡವಾಳಶಾಹಿ ವ್ಯವಸ್ಥೆಗೆ ಪರ್ಯಾಯವಾದಾಗ ಮಾತ್ರ ಇದು ಸಾಧ್ಯ. ವ್ಯವಸ್ಥೆಯ ಉತ್ಪಾದನಾ ವಿಧಾನದಲ್ಲೇ

ಸಮಾಜವಾದಕ್ಕೆ ಭವಿಷ್ಯವಿದೆಯೇ ಎಂದು ಕೇಳುತ್ತಾ ಬರಲಾದ ಮಾತು ಹಳೆಯದಾದರೂ ಅದು ಬೇರೆ ಬೇರೆ ರೂಪಗಳಲ್ಲಿ ಜನರ ನಡುವೆ ಆಗಾಗ ನುಸುಳುತ್ತಲೇ ಇರುತ್ತದೆ. ಶೋಷಣೆ-ಸುಲಿಗೆ, ದಮನ, ಅಸಮಾನತೆ, ಕ್ರೌರ್ಯದ ಮೂಲವಾಗಿರುವ ಬಂಡವಾಳಶಾಹಿ ವ್ಯವಸ್ಥೆಗೆ ಶಾಶ್ವತ ಪರ್ಯಾಯವಾಗಿರುವ ಸಮಾಜವಾದದ ಬೆಳವಣಿಗೆ - ಕೊಡುಗೆಗಳನ್ನು ಪ್ರಸಕ್ತವಾಗಿ ಅದರ ಮಹತ್ವವನ್ನು ವಿಶ್ಲೇಷಿಸಿದ್ದಾರೆ ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ



ಅಡಕವಾಗಿರುವ ಶೋಷಣೆಯನ್ನು ಕಿತ್ತೊಗೆಯಲು ಎಷ್ಟೇ ಪ್ರಮಾಣದ ಸುಧಾರಣೆಯನ್ನು ಬಂಡವಾಳಶಾಹಿ ವ್ಯವಸ್ಥೆಗೆ ಮಾಡಿದರೂ ಅದು ಸಾಧ್ಯವಾಗದು ಎಂದು ಇತಿಹಾಸ ಮತ್ತೆ ಮತ್ತೆ ತೋರಿಸಿದೆ. ಒಂದು ಪರ್ಯಾಯವಾದ ಸಾಮಾಜಿಕ- ಆರ್ಥಿಕ- ರಾಜಕೀಯ ವ್ಯವಸ್ಥೆಯನ್ನು ತರಬೇಕಿದ್ದು, ಅದು ಸಮಾಜವಾದವೇ ಆಗಿದೆ. ಹಲವು ದಶಕಗಳ ಹಿಂದೆ ರೋಸಾ ಲುಕ್ಸೆಂಬರ್ಗ್ ಮತ್ತು ಫಿಡೆಲ್ ಕ್ಯಾಸ್ಟ್ರೊ ಹೇಳಿರುವಂತೆ 'ಮಾನವತೆಗೆ ಆಯ್ಕೆಯಿದೆ. ಈ ಆಯ್ಕೆ ಸಮಾಜವಾದ ಮತ್ತು ಅನಾಗರೀಕತೆಯ ನಡುವೆ.'

ಬಂಡವಾಳಶಾಹಿವಾದದ ಭೋರ್ಗರೆತವು ಮಣಿಸಲಾರದಂತೆ ಹಾಗೂ ಶಾಶ್ವತವೆಂಬಂತೆ ಕಂಡರೂ, ಅದರ ಜಾಗತಿಕ ಆರ್ಥಿಕತೆಯು ಗಂಭೀರ ಬಿಕ್ಕಟ್ಟಿನಲ್ಲಿದ್ದು ಪ್ರಪಂಚದ ಜನರಲ್ಲಿ ಬಹುಸಂಖ್ಯಾತರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವ ಅಧಿಪತ್ಯದ ನಿಟ್ಟಿನಲ್ಲಿದೆ. ಆದಾಗ್ಯೂ, ಸಮಾಜವಾದಕ್ಕಾಗಿ ಹೋರಾಡುವ ತಮ್ಮ ಭೂತಕಾಲದ ಅನುಭವಗಳಿಂದ ಪಾಠ ಕಲಿಯಬೇಕು ಮತ್ತು ಬದಲಾಗುತ್ತಿರುವ ಸನ್ನಿವೇಶಗಳಿಗೆ ಹೊಂದಿಕೊಳ್ಳಬೇಕು.

ಸಂ : ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದದ ವಿಜಯ ಹೇಗೆ ಪ್ರಪಂಚದ ಘಟನಾವಳಿಗಳ ಮೇಲೆ ಪ್ರಭಾವ ಬೀರಿತು ಮತ್ತು ಮಾನವ ನಾಗರೀಕರತೆಯ ಮೇಲೆ ಅದರ ಪರಿಣಾಮಗಳೇನು?

ಕಾಂ. ಸೀತಾರಾವ್ : ಶೋಷಣಾರಹಿತ ಸಮಾಜ ನಿರ್ಮಾಣದಲ್ಲಿ ಸೋವಿಯತ್ ಒಕ್ಕೂಟ ರಚನೆಯು ಮಾನವ ಇತಿಹಾಸದಲ್ಲೇ ಪ್ರಥಮ ಹೆಜ್ಜೆಯಷ್ಟೆ. ಸಮಾಜವಾದದ ಶೀಘ್ರಗತಿಯ ಬೆಳವಣಿಗೆ, ಒಂದೊಮ್ಮೆ ಹಿಂದುಳಿದಿದ್ದ ಆರ್ಥಿಕತೆಯನ್ನು ಸದೃಢವನ್ನಾಗಿ ಮತ್ತು ಬಂಡವಾಳಶಾಹಿಯನ್ನು ಎದುರಿಸುವಂತಹ ಮಿಲಿಟರಿ ಶಕ್ತಿಯನ್ನಾಗಿ ಬದಲಾಯಿಸಿದ್ದು ಸಮಾಜವಾದದ ವ್ಯವಸ್ಥೆಯ ಹೆಗ್ಗಳಿಕೆಯನ್ನು ಧೃಡಪಡಿಸಿತು. ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಜಾರಿಗೆ ತಂದದ್ದು ಮಾನವ ಚರಿತ್ರೆಯಲ್ಲೇ ಮಹಾನ್ ವೀರಗಾಥೆ.

ಇದು ಸಾಮಾಜಿಕ ಬಿಡುಗಡೆಗಾಗಿ ಪ್ರಪಂಚದಾದ್ಯಂತ ಹೋರಾಡುತ್ತಿರುವ ಎಲ್ಲ ಜನರಿಗೂ ಇಂದಿಗೂ ಸ್ಫೂರ್ತಿಯ ಸೆಲೆಯಾಗಿದೆ. ಫ್ಯಾಸಿಸಂನ್ನು ಮಣಿಸುವಲ್ಲಿ ಮತ್ತು ಪೂರ್ವ ಯುರೋಪ್ ರಾಷ್ಟ್ರಗಳು ಸಮಾಜವಾದದ ಸಿದ್ಧಾಂತದಲ್ಲಿ ಅರಳಲು ಸೋವಿಯತ್ ಒಕ್ಕೂಟವು ನಿರ್ಣಾಯಕ ಪಾತ್ರ ವಹಿಸಿದೆ. ಫ್ಯಾಸಿಸಂ ಮೇಲಿನ ಜಯವು ಹಲವು ದೇಶಗಳು ವಸಾಹತುಕರಣದ ಶೋಷಣೆಯಿಂದ ಬಿಡುಗಡೆ ಹೊಂದುವಲ್ಲಿ ಪಾತ್ರ ವಹಿಸಿತು. ಚೀನಾ ಕ್ರಾಂತಿಯ ಚಾರಿತ್ರಿಕ ವಿಜಯ, ವಿಯೆಟ್ನಾಂ ಜನರ ವಿರೋಚಿತ ಹೋರಾಟ, ಕೋರಿಯಾ ಜನರ ಹೋರಾಟ ಮತ್ತು ಕ್ಯೂಬಾ ಕ್ರಾಂತಿಯ ವಿಜಯಗಳು ವಿಶ್ವ ಬೆಳವಣಿಗೆಯ ಮೇಲೆ ಅದ್ಭುತ ಪ್ರಭಾವ ಬೀರಿದವು.

ಸಮಾಜವಾದಿ ರಾಷ್ಟ್ರಗಳಲ್ಲಿ ಬಡತನ ಮತ್ತು ಅನಕ್ಷರತೆ ನಿರ್ಮೂಲನೆ, ನಿರುದ್ಯೋಗ ನಿವಾರಣೆ, ಶಿಕ್ಷಣ, ಆರೋಗ್ಯ, ವಸತಿ ಇತ್ಯಾದಿಗಳಲ್ಲಿ ಸಾಮಾಜಿಕ ಭದ್ರತೆ - ಈ ಸಾಧನೆಗಳು ಪ್ರಪಂಚದಾದ್ಯಂತ ದುಡಿಯುವ ಜನರಿಗೆ ಪ್ರಚಂಡ ಶಕ್ತಿಯನ್ನೊದಗಿಸಿದವು. ಸಮಾಜವಾದದ ಈ ಸವಾಲವನ್ನು ದುಡಿಯುವ ಜನರಿಗೆ ಹಿಂದೆಂದೂ ನೀಡದಿದ್ದ ಹಕ್ಕುಗಳನ್ನು ನೀಡಿ ಬಂಡವಾಳಶಾಹಿಯು ಎದುರಿಸಿತು. ಸಮಾಜವಾದಿ ದೇಶಗಳ ವಿರೋಚಿತ ಹೋರಾಟಗಳಿಂದ ಸ್ಫೂರ್ತಿ ಪಡೆದ ಬಂಡವಾಳಶಾಹಿ ರಾಷ್ಟ್ರಗಳ ದುಡಿಯುವ ಜನರು ಹೋರಾಟ ನಡೆಸಿ ಕಲ್ಯಾಣ ಕಾರ್ಯಗಳ ಮತ್ತು ಸಾಮಾನಿಕ ಭದ್ರತೆಯ ಹಕ್ಕುಗಳನ್ನು ಪಡೆದರೆ ಹೊರತು ಅವು ಬಂಡವಾಳಶಾಹಿ ವರ್ಗದ ದಾನವೇನೂ ಆಗಿರಲಿಲ್ಲ.

ಮಾನವ ನಾಗರೀಕರತೆಯ ಗುಣಾತ್ಮಕ ಹಾದಿಯಲ್ಲಿ ಇದು ಹಲವು ಕ್ರಾಂತಿಕಾರಿ ಬದಲಾವಣೆಗಳನ್ನು ಸಾಧ್ಯಗೊಳಿಸಿತು. ಭೂಮಿಯಿಂದ ಹಾರಿಸಿದ ಸ್ಪುಟ್ನಿಕ್‌ನಿಂದ ಗಾಬರಿಗೊಂಡ ಅಮೇರಿಕಾ, ಯೂರಿ ಗಗಾರಿನ್‌ರು 1959 ರಲ್ಲಿ ಆಕಾಶಯಾ ಮಾಡಿದ್ದಕ್ಕೆ ಉತ್ತರವಾಗಿ ಅಧ್ಯಕ್ಷ ಕೆನಡಿಯು ಅಮೇರಿಕಾ ಸೆನೆಟ್‌ಗೆ ಇನ್ನು ಹತ್ತು ವರ್ಷದಲ್ಲಿ ತಾವು ಚಂದ್ರನಲ್ಲಿಗೆ ಮನುಷ್ಯನನ್ನು ಕಳುಹಿಸುವುದಾಗಿ ಸಮಾದಾನ ಹೇಳಿದರು. ಅದೂ ಹಗಲೂ ರಾತ್ರಿ ಕೆಲಸ ಮಾಡಿ 1969ರಲ್ಲಷ್ಟೇ ಕಳುಹಿಸಲು ಸಾಧ್ಯವಾಯಿತು. ಅಷ್ಟರಲ್ಲಿ ರಷ್ಯಾವು ಹಲವು ಆಕಾಶಯಾನ ನಿರ್ವಹಿಸಿ, ಲೈಕಾ ಎಂಬ ನಾಯಿಯನ್ನು ಸಹ ಕಳುಹಿಸಿತ್ತು.

- ಕೃಪೆ : **ಸ್ಟುಡೆಂಟ್ ಸ್ಟ್ರಗಲ್**

ಅನು: **ಜಯ**

ಮುಂದುವರಿಯುವುದು

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH